ಸಂಪುಟ: 13 Volume | ಸಂಚಿಕೆ: 271 Issue | ಪುಟಗಳು 08 Pages | ಸೋಮವಾರ 15 ಡಿಸೆಂಬರ್ 2025 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಮನಸು ವೊಂದು ಅದ್ಭುತ ಶಕ್ತಿ. ಅದನ್ನು ಸದಾ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಅದರ ಬಯಕೆ ಹಾಗೂ ಆಸೆಗೆ ಬಲಿಯಾದರೆ ಸಂಕಷ್ಟಗಳ ಸರಮಾಲೆ ತಪ್ಪಿದ್ದಲ್ಲ. ಸಕಲ ಅವಾಂತರಗಳಿಗೆ ಮನಸೇ ಮೂಲ.

–ಗೌತಮ ಬುದ್ಧ

ಬೆಳೆ ವಿಮೆಗೆ ನೋಂದಾಯಿಸಲು ಮನವಿ 6 | ಸ್ವದೇಶಿ ವಸ್ತು ಬಳಕೆಯ ಅಗತ್ಯತೆಯಿದೆ 7 | ಕನ್ನಡ ಸೇವೆಯೇ ಪಟ್ಟದ್ದೇವರ ಉಸಿರು 8

## ಪಟ್ಟದ್ದೇವರ ಕಾಯಕ ಪ್ರಶಸ್ತಿಗೆ ಡಾ.ದುರ್ಗೆ ಆಯ್ಕೆ

**ಭಾಲ್ಕಿ:** ಹಿರೇಮಠ ಸಂಸ್ಥಾನದ ವತಿಯಿಂದ ಕೊಡುವ 2025ನೇ ಸಾಲಿನ ಡಾ.ಚನ್ನಬಸವ ಪಟ್ಟದ್ದೇವರು ಕಾಯಕ ಪ್ರಶಸ್ತಿಗೆ ಬಸವಕಲ್ಯಾಣ ವಿಶ್ವಬಸವಧರ್ಮ ಟ್ರಸ್ಟ್‌ನ ಕಾರ್ಯದರ್ಶಿ ಡಾ.ಎಸ್.ಬಿ.ದುರ್ಗೆ ಅವರನ್ನು ಆಯ್ಕೆ ಮಾಡಲಾಗಿದೆ.



ಡಾ.ಎಸ್.ಬಿ.ದುರ್ಗೆ ಅವರು ಬಸವಾದಿ ಶರಣರ ತತ್ವಾದರ್ಶಗಳನ್ನು ನಂಬಿ ಆ ಮಾರ್ಗದಲ್ಲಿ ನಡೆಯುವ ಅಪರೂಪದ ಶರಣಜೀವಿಗಳಾಗಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಮೂಲಕ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕಾಗಿ ಇವರು ಅನೇಕ ದಶಕಗಳಿಂದ ಕಾರ್ಯ ಮಾಡುತ್ತಿದ್ದಾರೆ. ಇವರಿಗೆ ತಕ್ಕ ಸತಿಯಾಗಿ ಶರಣೆ ಡಾ.ಶಾಂತಾ ದುರ್ಗೆ ಇವರು ವೈದ್ಯಕೀಯ ಸೇವೆ ಮಾಡುತ್ತಿದ್ದಾರೆ. ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣ, ಆರೋಗ್ಯ ಹಾಗೂ ಸಂರಕ್ಷಣೆಗಾಗಿ ಇವರು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಅಭಿನಂದನೀಯವಾಗಿದೆ.

ಪೂಜ್ಯರು ಸ್ಥಾಪಿಸಿದ ವಿಶ್ವಬಸವಧರ್ಮ ಟ್ರಸ್ಟ್‌ನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನೇರ ನುಡಿಯ ಸರಳ ಸಾತ್ವಿಕ ಸ್ವಭಾವ ಹೊಂದಿರುವ ಡಾ.ಎಸ್.ಬಿ.ದುರ್ಗೆ ಅವರು ಅನುಭವಮಂಟಪದ ಎಲ್ಲ ಕೆಲಸ ಕಾರ್ಯಗಳಿಗೆ ಗಟ್ಟಿಯಾಗಿ ನಿಲ್ಲುತ್ತಾರೆ. ಇವರ ಸಮಗ್ರ ಸೇವಾ ಸಾಧನೆಯನ್ನು ಗುರುತಿಸಿ, ಪ್ರಸಕ್ತ ಸಾಲಿನ ಡಾ. ಚನ್ನಬಸವ ಪಟ್ಟದ್ದೇವರು ಕಾಯಕ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಡಿ.22ರಂದು ಪಟ್ಟಣದಲ್ಲಿ ನಡೆಯುವ ಡಾ.ಚನ್ನಬಸವ ಪಟ್ಟದ್ದೇವರ 136ನೆಯ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಲಾಗುತ್ತಿದೆ ಎಂದು ಹಿರೇಮಠ ಸಂಸ್ಥಾನದ ಕಾರ್ಯದರ್ಶಿ ತಿಳಿಸಿದ್ದಾರೆ.

## ಎಐ: ಮೂಲಸೌಕರ್ಯ ಸುಧಾರಣೆ

**ಕಲಬುರಗಿ:** ಕೃತಕಬುದ್ಧಿಮತ್ತೆ (ಎಐ) ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ) ಕ್ಷೇತ್ರದಲ್ಲಿ ಆಗಿರುವ ಪ್ರಗತಿಯು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮತ್ತು ಮೂಲಸೌಕರ್ಯ ಸೌಲಭ್ಯಗಳನ್ನು ಸುಧಾರಿಸುವ ಮೂಲಕ ಜನರ ಜೀವನ ಸುಧಾರಿಸಲಿದೆ ಎಂದು ಹಿರಿಯ ಕೃಷಿ ವಿಜ್ಞಾನಿ ಮತ್ತು ಧಾರವಾಡದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ (ಯುಎಎಸ್) ಉಪಕುಲಪತಿ ಪ್ರೊಫೆಸರ್ ಪಿ. ಎಲ್. ಪಾಟೀಲ್ ತಿಳಿಸಿದ್ದಾರೆ.

ಕಲಬುರಗಿ ನಗರದ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅನುಭವ ಮಂಟಪದಲ್ಲಿ ಶರಣಬಸವೇಶ್ವರ ಸಂಸ್ಥಾನದ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಅವರ ಸಾನ್ನಿಧ್ಯದಲ್ಲಿ ಇಂದು ನಡೆದ ಶರಣಬಸವ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವದಲ್ಲಿ ಮಾತನಾಡಿ, ಕೃತಕ ಬುದ್ಧಿಮತ್ತೆಯು ಸಂಕೀರ್ಣ ವ್ಯವಸ್ಥೆಗಳನ್ನು ವಿನ್ಯಾಸಗೊಳಿಸುವ, ಅಭಿವೃದ್ಧಿಪಡಿಸುವ ಮತ್ತು ನಿಯೋಜಿಸುವ ವಿಧಾನವನ್ನು ಪರಿವರ್ತಿಸಿದೆ ಎಂದು ಹೇಳಿದ್ದಾರೆ. ಎಐ ನಿಂದ ರಚಿಸಲಾದ ಬುದ್ಧಿವಂತ ಮೂಲಸೌಕರ್ಯವು ಸಮಸ್ಯೆ ಪರಿಹರಿಸುವ ವಿಧಾನಗಳನ್ನು ಕ್ರಾಂತಿಗೊಳಿಸಿದೆ ಮತ್ತು ಆಳವಾದ ಕಲಿಕಾ ತಂತ್ರಗಳ ಏಕೀಕರಣವು ಮುನ್ಸೂಚಕ ನಿರ್ವಹಣೆ, ಗುಣಮಟ್ಟದ ನಿಯಂತ್ರಣ ಮತ್ತು ವಿನ್ಯಾಸ ಆಪ್ಟಿಮೈಜೇಶನ್ ಸೇರಿದಂತೆ ಇತರ ಕ್ಷೇತ್ರಗಳಲ್ಲಿ ಗಮನಾರ್ಹ ಸುಧಾರಣೆಗೆ ಕಾರಣವಾಗಿದೆ. ಸ್ವಾಯತ್ತ ವಾಹನಗಳು, ಡ್ರೋನ್‌ಗಳು ಮತ್ತು ರೋಬೋಟ್‌ಗಳಂತಹ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಸಹ ಎಐ ಬಳಸಲಾಗುತ್ತಿದೆ, ಇದರಿಂದ ಸಂಕೀರ್ಣ ಪರಿಸರಗಳನ್ನು ಸುಲಭವಾಗಿ ನ್ಯಾವಿಗೇಟ್ ಮಾಡಬಹುದು ಎಂದು ವಿವರಿಸಿದ್ದಾರೆ.

## ಬೀದರ್–ಬೆಂಗಳೂರ್ ಚಳಿ ಚಳಿ

**ಬೆಂಗಳೂರು:** ಕರ್ನಾಟಕದಲ್ಲಿ ಚಳಿಯ ವಾತಾವರಣ ದಾಖಲಾರ್ಹವಾಗಿದೆ. ಶೀತ ಗಾಳಿ ಬೀಸಿ ಚಳಿ ಹೆಚ್ಚಳವಾಗತ್ತಿದೆ. ಭಾನುವಾರ ಬೆಳಗ್ಗೆ ರಾಜ್ಯದ 21 ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ 10 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ದಾಖಲಾಗಿದೆ. ಬೀದರ್ 7, ಚಿಕ್ಕಬಳ್ಳಾಪುರ 7.1, ಧಾರವಾಡ 7.4, ತುಮಕೂರು 7.4 ಚಿಕ್ಕಮಗಳೂರು 7.6, ಬೆಳಗಾವಿ 7.8 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿರುವುದು ಗಮನ ಸೆಳೆದಿದೆ.



ವಿಪರೀತ ಚಳಿ ಆವರಿಸಿದೆ. ಇನ್ನೂ ನಾಲ್ಕು (ಡಿಸೆಂಬರ್ 18ವರೆಗೆ) ದಿನ ಥಂಡಿ ಗಾಳಿ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆವರೆಗೂ ಜಿಲ್ಲಾ ಕೇಂದ್ರಗಳಲ್ಲಿ ದಾಖಲಾದ ಕನಿಷ್ಠ ತಾಪಮಾನ ವಿವರವನ್ನು ಹವಾಮಾನ ಇಲಾಖೆ ಹಂಚಿಕೊಂಡಿದೆ. ಬೀದರ್‌ನಲ್ಲಿ ಅತಿ ಕಡಿಮೆ ತಾಪಮಾನ ದಾಖಲಾಗಿದೆ. ಕೆಲ ದಿನಗಳ ಹಿಂದೆ ಮಳೆ ಮಳೆ ಎಂದು ಹೇಳುತ್ತಿದ್ದ ಜನತೆ ಈಗ ಚಳಿ–ಚಳಿ ಎಂದು ಬೊಬ್ಬಿಡುವಂತಾಗಿದೆ.

ಉತ್ತರ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಬೆಳಗಾವಿ, ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ 9 ರಿಂದ 11 ಡಿಗ್ರಿ ಸೆಲ್ಸಿಯಸ್ ತಲುಪುವ ನಿರೀಕ್ಷೆಯಿದೆ.

# ವೋಟ್ ಚೋರಿಯ ವಾರ್

### ಕೇಂದ್ರ ಚುನಾವಣಾ ಆಯೋಗ ವಿರುದ್ಧ ಕಿಡಿ | ಬಿಜೆಪಿ ವಿರುದ್ಧ ಮತಗಳ್ಳತನ ಆರೋಪಿಸಿದ ಕಾಂಗ್ರೆಸ್

• ಮಲ್ಲಮ್ಮ ನುಡಿ ನವದೆಹಲಿ

ಕೇಂದ್ರ ಚುನಾವಣಾ ಆಯೋಗ ಹಾಗೂ ಬಿಜೆಪಿ ವಿರುದ್ಧ ಮತಗಳ್ಳತನದ ಆರೋಪ ಮಾಡಿರುವ ಕಾಂಗ್ರೆಸ್ ಪಕ್ಷ, ದೆಹಲಿಯ ರಾಮ್‌ಲೀಲಾ ಮೈದಾನದಲ್ಲಿ ರಾಷ್ಟ್ರಮಟ್ಟದ ಬೃಹತ್ ಪ್ರತಿಭಟನೆ ನಡೆಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ.

**ಗಣ್ಯಾತಿ ಗಣ್ಯರು ಭಾಗಿ:** ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸುಖು ಸಿಂಗ್ ಸೇರಿದಂತೆ ಎಲ್ಲಾ ರಾಜ್ಯಗಳ ಶಾಸಕಾಂಗ ಪಕ್ಷಗಳ ನಾಯಕರು, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಶಾಸಕರು ಸಚಿವರು ಸಂಸದರು, ರಾಜ್ಯಸಭೆ, ವಿಧಾನ ಪರಿಷತ್ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ಗಂಭೀರ ಆರೋಪ:** ಕೇಂದ್ರ ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಂಡು ಬಿಜೆಪಿ, ವಿವಿಧ ರಾಜ್ಯಗಳಲ್ಲಿ ಮತಗಳ್ಳತನ ಮಾಡಲಾಗಿದೆ. ಇತ್ತೀಚಿಗೆ ನಡೆದ ಮಹಾರಾಷ್ಟ್ರ, ಬಿಹಾರ ವಿಧಾನಸಭೆ ಚುನಾವಣೆಗಳಲ್ಲೂ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಗೆಲುವಿಗೆ ಮತಗಳ್ಳತನವೇ ಕಾರಣ ಎಂದು ಗಂಭೀರ ಆರೋಪ ಮಾಡಿದೆ.



### ದಾಖಲೆ ಸಮೇತ ದೂರು ನೀಡಿದ್ದ ರಾಗಾ

ಕರ್ನಾಟಕದ ಕ್ಷೇತ್ರಗಳಲ್ಲಿ ಮತ್ತು ಮಹಾರಾಷ್ಟ್ರದ ಕೆಲವು ಕ್ಷೇತ್ರಗಳಲ್ಲಿ ಮತಗಳ್ಳತನ ನಡೆದಿರುವುದನ್ನು ರಾಹುಲ್ ಗಾಂಧಿ ದಾಖಲೆ ಸಹಿತ ಆರೋಪ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಇಂದು ನಡೆಯುತ್ತಿರುವ ಪ್ರತಿಭಟನೆ ಹೆಚ್ಚು ಗಮನ ಸೆಳೆದಿದೆ.

### ದಿಲ್ಲಿಯಲ್ಲಿ ಕಲಬುರ್ಗಿಯ ಪಡೆ

ಹಿರಿಯ ನಾಯಕ ರಾಹುಲ್ ಗಾಂಧಿಗೆ ಬೆಂಬಲ ಸೂಚಿಸಿದ್ದ ಕಲಬುರ್ಗಿ ಕಾರ್ಯಕರ್ತರು, ರಾಮಲೀಲಾ ಮೈದಾನದಲ್ಲಿ ನಡೆಯುವ ವೋಟ್ ಚೋರಿ ರ್‍ಯಾಲಿಯಲ್ಲಿ ಭಾಗವಹಿಸಲು ಕಲಬುರಗಿಯ 100ಕ್ಕೂ ಹೆಚ್ಚು ಯುವ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಭಾಗವಹಿಸಿದ್ದಾರೆ.

### ಓಟ್ ಸುಳ್ಳನ್ನು ಸತ್ಯ ಮಾಡಲು..!

ಓಟ್ ಚೋರಿ ಹೆಸರಿನಲ್ಲಿ ಕಾಂಗ್ರೆಸ್ ನವರು ಸುಳ್ಳನ್ನು ಸತ್ಯ ಮಾಡಲು ಹೊರಟಿದ್ದಾರೆ. ಅದರಿಂದ ಏನೂ ಆಗುವುದಿಲ್ಲ ಎಂದು ಸಂಸದ ಬಸವ ರಾಜ ಬೊಮ್ಮಾಯಿ ಹೇಳಿದರು. ಹಾವೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಓಟ್ ಚೋರಿ ಸುಳ್ಳನ್ನು ಸತ್ಯ ಮಾಡುವ ಅಭಿಯಾನ ಬಹಳಷ್ಟು ಕಾಂಗ್ರೆಸ್ ನಾಯಕರಿಗೆ ಈ ಬಗ್ಗೆ ನಂಬಿಕೆ ಇಲ್ಲ ಎಂದಿದ್ದಾರೆ.

### ಮೋದಿಯೇ ಗುರಿ: ಬಿಜೆಪಿ ದೂರು

ದೆಹಲಿಯಲ್ಲಿ ಕಾಂಗ್ರೆಸ್‌ನ ಬೃಹತ್ ರ್‍ಯಾಲಿ ನಡೆದ ಸ್ಥಳದಲ್ಲಿ ವಿವಾದಾತ್ಮಕ ಘೋಷಣೆಗಳನ್ನು ಕೂಗಿರುವ ಕಾಂಗ್ರೆಸ್ ಕಾರ್ಯಕರ್ತರು ಪ್ರಧಾನಿಯನ್ನು ಗುರಿಯಾಗಿಸಿದ್ದಾರೆ. ಸಂಘಟಿತ ಸಭೆಯಲ್ಲಿ ಮೋದಿ ತೇರಿ ಕಬ್ರ್ ಖುದೇಗಿ (ಮೋದಿ, ನಿನ್ನ ಸಮಾಧಿಯನ್ನು ಅಗೆಯಲಾಗುವುದು) ಎಂಬ ಘೋಷಣೆಯನ್ನು ಕೂಗಲಾಗಿದೆ ಎಂದು ಬಿಜೆಪಿ ದೂರಿದೆ.

ಕಾಂಗ್ರೆಸ್ ಅಜೆಂಡಾ ಸ್ಪಷ್ಟವಾಗಿದೆ. ಇದು ಎಸ್‌ಐಆರ್ ಬಗ್ಗೆ ಅಲ್ಲ. ಇದು ಸಂವಿಧಾನದ ಮೇಲಿನ ದಾಳಿ. ಎಸ್‌ಐಆರ್ ಹೆಸರಿನಲ್ಲಿ ಅವರು ಪಿಎಂ ಮೋದಿಯವರನ್ನು ಮುಗಿಸಲು ಬಯಸುತ್ತಿದ್ದಾರೆಯೇ? ಇತ್ತೀಚೆಗೆ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗಕ್ಕೂ ಬೆದರಿಕೆ ಹಾಕಿದ್ದರು. ಇಲ್ಲಿಯವರೆಗೆ, ಕಾಂಗ್ರೆಸ್ ಪ್ರಧಾನಿ ಮೋದಿಯವರಿಗೆ 150ಕ್ಕೂ ಹೆಚ್ಚು ಬಾರಿ ನಿಂದಿಸಿದೆ.

–ಶಹಜಾದ್ ಪೂನಾವಾಲಾ, ಬಿಜೆಪಿ ವಕ್ತಾರ

## ದಿಲ್ಲಿಯಲ್ಲಿ ಭರ್ಜರಿ ಔತಣ ಆದರೆ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಪವರ್ ಫೈಟ್ ಪಾಲಿಟಿಕ್ಸ್ ಜೋರಾಗಿದೆ. ಈ ನಡುವಲ್ಲೇ 'ವೋಟ್ ಚೋರಿ' ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಸೇರಿದಂತೆ 100ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ತೆರಳಿಗೆ ತೆರಳಿದ್ದಾರೆ. ಕಾರ್ಯಕ್ರಮಕ್ಕೂ ಮುನ್ನ ಡಿಕೆಶಿವಕುಮಾರ್ ವಿಶೇಷ ಔತಣಕುಟದಲ್ಲಿ ಪಾಲ್ಗೊಂಡಿದ್ದಾರೆ. ಸೋನಿಯಾ ಇದರಲ್ಲಿ ಸೋನಿಯಾ ಗಾಂಧಿ, ರಾಹುಲ್, ಮಲ್ಲಿಕಾರ್ಜುನ ಖರ್ಗೆ, ವೇಣಿಗೋಪಾಲ್, ಸುರ್ಜೆವಾಲ ಸೇರಿ ಅನೇಕ ಗಣ್ಯರು ಪಾಲ್ಗೊಂಡಿದ್ದರು. ಆದರೆ ಮುಖ್ಯಮಂತ್ರಿ ವಿಮಾನ ಸಮಯ ಬದಲಾಗಿದ್ದರಿಂದ ಇದರಲ್ಲಿ ಪಾಲ್ಗೊಳ್ಳಲು ಆಗದೆ ಗೈರಾಗಿರುವುದು ಕುತೂಹಲ ಮೂಡಿಸಿದೆ.




## ಹೊಸ ರಾಜಕೀಯ ಪಕ್ಷ ಶೀಘ್ರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಹೊಸ ರಾಜಕೀಯ ಪಕ್ಷ ಶೀಘ್ರ ಸ್ಥಾಪಿಸುವುದಾಗಿ ಕೇಂದ್ರದ ಮಾಜಿ ಸಚಿವ ಸಿಎಂ ಇಬ್ರಾಹಿಂ ಅವರು ಶನಿವಾರ ಘೋಷಣೆ ಮಾಡಿದ್ದಾರೆ. ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜನರಿಗಾಗಿ ಮೂರನೇ ಶಕ್ತಿಯನ್ನು ತರಲು ಸಿದ್ಧನಾಗಿದ್ದೇನೆ. ಪಕ್ಷದ ಚಿಹ್ನೆ ನಿರ್ಧರಿಸಲು ಭಾನುವಾರ ಕಲಬುರಗಿಯಲ್ಲಿ ಸಭೆ ನಡೆಸಲಾಗುವುದು. ನಂತರ ಮೈಸೂರು ಮತ್ತು ಬೆಳಗಾವಿಯಲ್ಲಿ ಸಮಾನ ಮನಸ್ಕ ಜನರ ಸಭೆಗಳನ್ನು ನಡೆಸಲಾಗುವುದು. ನಮ್ಮ ಹೊಸ ಪಕ್ಷ ಬಸವಣ್ಣ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರ ಸಿದ್ಧಾಂತವನ್ನು ಅಳವಡಿಸಿಕೊಳ್ಳಲಿದೆ ಎಂದಿದ್ದಾರೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ ಕೆ ಶಿವಕುಮಾರ್ ನಡುವಿನ ಕುರ್ಚಿ ಕಿತ್ತಾಟದ ವಿಚಾರದಲ್ಲಿ ಕರ್ನಾಟಕ ಇಬ್ಭಾಗ ಆಗುತ್ತದೆ, ಇವತ್ತು ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ದೂರಿದ್ದಾರೆ.

## ಗುಂಡಿನ ದಾಳಿಗೆ ಹತ್ತು ಬಲಿ

**ಸಿಡ್ನಿ:** ಆಸ್ಟ್ರೇಲಿಯಾದ ಪ್ರಸಿದ್ಧ ಬೊಂಡಿ ಬೀಚ್‌ನಲ್ಲಿ ದುಷ್ಕರ್ಮಿಗಳು ಸಾಮೂಹಿಕ ಗುಂಡಿನ ದಾಳಿ ನಡೆಸಿದ್ದಾರೆ. ಹತ್ತು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಸದ್ಯ ಇಬ್ಬರು ಶೂಟರ್‌ಗಳನ್ನು ಪೊಲೀಸರು ಬಂಧಿಸಿದ್ದಾರೆ ಎನ್ನಲಾಗಿದೆ. 2019ರಲ್ಲಿ ನ್ಯೂಜಿಲೆಂಡ್‌ನಲ್ಲಿರುವ ಎರಡು ಮಸೀದಿಗಳಲ್ಲಿ ಭಯಾನಕ ಗುಂಡಿನ ದಾಳಿ ನಡೆದಿತ್ತು. ಸಿಡ್ನಿಯಲ್ಲಿ ಹನುಕ್ಕಾ ಎಂಬ ಎಂಟು ದಿನಗಳ ಕಾಲ ನಡೆಯುವ ಯಹೂದಿಗಳ ಹಬ್ಬ ಆರಂಭವಾಗುತ್ತಿರುವ ಹಿನ್ನೆಲೆ ಈ ಗುಂಡಿನ ದಾಳಿ ನಡೆದಿದೆ ಎನ್ನಲಾಗಿದೆ.



## ಡಿವಿಆರ್ ಜೊತೆ ನಗದು ಕದ್ದ ಕಳ್ಳರು

**ಬಳ್ಳಾರಿ:** ನಗರದ ಬ್ರೂಸ್ ಪೇಟೆ ಪ್ರದೇಶದ ತೇರು ಬೀದಿಯಲ್ಲಿ ನಿನ್ನೆ ತಡರಾತ್ರಿ ಮೂರು ಬಟ್ಟೆ ಅಂಗಡಿಗಳಲ್ಲಿ ಅಲ್ಲಿನ ಸಿಸಿಟಿವಿಯ ಡಿವಿಆರ್ ಸಮೇತ ನಗದು ಸಮೇತ ಕಳ್ಳತನ ನಡೆದಿದೆ. ರಾಮರಾಜ ಕಾಟನ್, ಮುಕುಂದ ಕಲೆಕ್ಷನ್, ಹಾಗು ಮೈಸೂರ್ ಸ್ಟೋರ್ಸ್ ನಲ್ಲಿ ಕಳ್ಳತನ ನಡೆದಿದೆ. ಮಹಡಿಯ ಮೇಲ್ಭಾಗಲ್ಲಿ ಹೊಡೆದು, ಮತ್ತು ಲಿಫ್ಟ್ ಟನಲ್ ಬಳಸಿಕೊಂಡು ಕಳ್ಳತನ ನಡೆಸಿದ್ದಾರೆ. ಮೈಸೂರು ಸ್ಟೋರ್ಸ್ ನಲ್ಲಿ ಹಣ ಇಟ್ಟಿರದ ಕಾರಣ ಕಳ್ಳರಿಗೆ ನಿರಾಸೆಯಸಗಿರಬೇಕು. ಉಳಿದ ಎರೆಡು ಅಂಗಡಿಗಳಲ್ಲಿ ನಗದು ಕಳ್ಳತನ ಮಾಡಿದೆ.



## ಕ್ರಿಕೆಟ್ ರಂಗದ ಧ್ರುವತಾರೆ ಅಭಿಷೇಕರೆಡ್ಡಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ರಾಜಕೀಯವಾಗಿ, ಸಾಂಸ್ಕೃತಿಕವಾಗಿ ನಾಡಿನಲ್ಲಿ ಹೆಸರಾದ ಬೀದರ್ ಜಿಲ್ಲೆಯಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ವಿಶೇಷವಾಗಿ ಕ್ರಿಕೆಟ್ ರಂಗದಲ್ಲಿ ಧ್ರುವತಾರೆಯಾಗಿ ಬೆಳಗಬೇಕಿದ್ದ ಪ್ರತಿಭೆ ಅಭಿಷೇಕರೆಡ್ಡಿಗೆ ಇಂದು ಆಂಧ್ರದ ರಣಜಿ ತಂಡದ ಪಾಲಾಗಿರುವುದು ಚರ್ಚೆಗೆ ಗ್ರಾವಾಗಿದೆ.

ರಾಜ್ಯದವರ ಅನಾದರ ಕಾರಣದಿಂದಾಗಿ ನೆರೆಯ ಆಂಧ್ರದ ಪಾಲಾಗಿದ್ದು, ಅಲ್ಲಿ ಓಪನರ್ (ಟಾಪ್ ಬ್ಯಾಟ್ಸನ್) ಆಗಿ ಮಿಂಚುತ್ತಿದ್ದಾರೆ. ಪ್ರಸಕ್ತ ಸಾಲಿನ ರಣಜಿ ಪಂದ್ಯಗಳಲ್ಲಿ ಆಂಧ್ರಪ್ರದೇಶಕ್ಕಾಗಿ ಅತೀ ಹೆಚ್ಚು ರನ್‌ಗಳಿಸಿ, ಎಲ್ಲರ ಗಮನ ಸೆಳೆದಿರುವುದು ದಾಖಲಾರ್ಹವಾಗಿದೆ.

ಬಸವಕಲ್ಯಾಣ ತಾಲೂಕಿನ ಇಸ್ಲಾಂಪುರ ಗ್ರಾಮದ ಅಭಿಷೇಕ್‌ರೆಡ್ಡಿ ಸದ್ಯಕ್ಕೆ ಆಂಧ್ರ ರಣಜಿ ತಂಡದಲ್ಲಿ ಮುಂಚೂಣಿ ಬ್ಯಾಟ್ಸ್ ಮನ್ ಆಗಿ ಗುರುತಿಸಿಕೊಂಡಿದ್ದಾರೆ. ಜಾರ್ಖಂಡ್ ವಿರುದ್ಧ ಮೊದಲ ಇನ್ನಿಂಗ್ಸ್‌ನಲ್ಲಿ 247 ರನ್ ಗಳಿಸಿ, ಆಂಧ್ರಕ್ಕೆ ಗೆಲುವು ತಂದುಕೊಟ್ಟಿದದಾರೆ. ಮ್ಯಾನ್‌ಆಫ್‌ದಿ ಮ್ಯಾಚ್ ಆಗಿ ಗಮನ ಸೆಳೆದಿದ್ದಾರೆ. ತಮಿಳುನಾಡಿನ ವಿರುದ್ಧದ ಪಂದ್ಯದಲ್ಲೂ ಮ್ಯಾನ್ ಆಫ್ ದಿ ಮ್ಯಾಚ್ ಆಗಿದ್ದರು. ಆಂಧ್ರದ ತಂಡವು ಸತತ ಮೂರು ಗೆಲುಗಳನ್ನು ಸಾಸುವಲ್ಲಿ ಅಭಿಷೇಕರೆಡ್ಡಿ ಪಾತ್ರ ಹಿರಿದಾಗಿದೆ. ನಮಗೆ ಮಗ ಖುಷಿ ತಂದಿದ್ದಾನೆ. ಆಂಧ್ರಪ್ರದೇಶದವರು ಅಭಿಷೇಕನ ಪ್ರತಿಭೆ ಗುರುತಿಸಿದರು. ಇದೀಗ ಅಲ್ಲಿನ ತಂಡಕ್ಕೆ ಉತ್ತಮವಾಗಿ ಆಡುತ್ತಿದ್ದು, ತಂಡವು ರಣಜಿ ನಾಕೌಟ್ ಹಂತಕ್ಕೆ ಬರುವ ಸಾಧ್ಯತೆಯಿದ್ದು, ಆಂಧ್ರ ತಂಡಕ್ಕೆ ಗೆಲ್ಲುವ ಅವಕಾಶವೂ ಇದೆ ಎನ್ನುತ್ತಾರೆ ಅವರ ತಂದೆ ಮಾಣಿಕರೆಡ್ಡಿ, ಶಿಪ್ಪಾರೆಡ್ಡಿ ಕೌಡ್ಯಾಳೆ, ಇಸ್ಲಾಂಪುರ.




### ರಣಜಿ ಟ್ರೋಫಿ ಗೆಲ್ಲುವ ಕನಸು

ಮೂರು ಸೀಸನ್‌ಗಳಿಂದ ಆಂಧ್ರ ರಣಜಿ ತಂಡಕ್ಕೆ ಆಡುತ್ತಿರುವ ಅಭಿಷೇಕ್‌ರೆಡ್ಡಿ, ಈ ಸಲ ಆಂಧ್ರ ತಂಡವು ರಣಜಿ ಟ್ರೋಫಿ ಗೆಲ್ಲುವ ಕನಸನ್ನು ಬಿತ್ತಿದ್ದಾರೆ. ಆಂಧ್ರದವರು ಅಭಿಷೇಕ್‌ರೆಡ್ಡಿಯ ಪ್ರತಿಭೆ ಗುರುತಿಸಿ, ಅವಕಾಶ ನೀಡಿ, ಹುರಿದುಂಬಿಸಿದರ ಪರಿಣಾಮ ಕರ್ನಾಟಕದವರು ಪ್ರತಿಭೆಯೊಂದನ್ನು ವಂಚಿಸಿಕೊಳ್ಳುವಂತಾಗಿದೆ. ಅಲ್ಲಿ ಓಪನರ್ ಬ್ಯಾಟ್ಸ್‌ಮನ್ ಆಗಿ ಆಡುತ್ತಿರುವ ಅಭಿಷೇಕ್‌ರೆಡ್ಡಿ ಈಚೆಗಷ್ಟೇ ಇಂಗ್ಲಿಷ್ ಕೌಂಟಿಗೂ ಆಡಲು ಒಪ್ಪಂದ ಮಾಡಿಕೊಂಡಿದ್ದಾರೆ.

### ಕ್ರಿಕೆಟ್ ಆಟಗಾರನ ಹೆಜ್ಜೆಗುರುತು

ಈ ಹಿಂದೆ ಕರ್ನಾಟಕದ 14, 16 ಹಾಗೂ 19 ವಯೋಮಾನದವರ ಕ್ರಿಕೆಟ್ ತಂಡಗಳಲ್ಲಿ ಆಡಿರುವ ಅಭಿಷೇಕ್‌ರೆಡ್ಡಿ ಅವರು, 2013–14ರಲ್ಲಿ ನಡೆದ ಪ್ರಿ ರಣಜಿಯ ಶಫಿದಾರಾಶಾ, ಡಾ. ತಿಮ್ಮಪ್ಪಯ್ಯ ಟೂರ್ನಿಗಳಲ್ಲೂ ಕೂಡ ರೆಡ್ಡಿ ಅವರು ಉತ್ತಮ ಪ್ರದರ್ಶನ ನೀಡಿದ್ದರು. ಈ ಅವಯಲ್ಲಿ ಶಫಿದಾರಾಶಾ ಟೂರ್ನಿಯಲ್ಲಿ 4 ಶತಕಗಳು, ಬುಚ್ಚಿ ಬಾಬು ಟೂರ್ನಿಯಲ್ಲಿ ಒಂದು ಶತಕ, ಕೆಎಸ್‌ಸಿಎ ಫಸ್ಟ್ ಡಿವಿಶನ್ ಟೂರ್ನಿಗಳಲ್ಲಿ ಒಂದೇ ಇನ್ನಿಂಗ್ಸ್‌ನಲ್ಲಿ 245 ರನ್ ಜತೆಗೆ 4 ಶತಕ ಬಾರಿಸಿದ್ದರು. 2014ರಲ್ಲಿ ಸಿ.ಕೆ. ನಾಯ್ಡು 23 ವರ್ಷದೊಳಗಿನ ಕ್ರಿಕೆಟ್ ತಂಡದ ಕ್ಯಾಪ್ಟನ್ ಸಹ ಆಗಿದ್ದ ಅಭಿಷೇಕ್‌ರೆಡ್ಡಿ, 2014–15 ವಿಜೇತ ಕರ್ನಾಟಕ ರಣಜಿ ತಂಡದ ಸದಸ್ಯರೂ ಆಗಿದ್ದರು.

## ಹಿರಿಯ ರಾಜಕಾರಣಿ ಶ್ಯಾಮನೂರು ಇನ್ನಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ವಯೋಸಹಜವಾದ ಉಸಿರಾಟದ ತೊಂದರೆಯಿಂದ ನಿಧನರಾಗಿದ್ದಾರೆ.



ಆರು ಬಾರಿ ಚುನಾವಣೆಯಲ್ಲಿ ಗೆದ್ದು ಶಾಸಕರಾಗಿಯೂ ದಾಖಲೆ ಬರೆದಿದ್ದಾರೆ. ದಾವಣಗೆರೆ ಉಸ್ತುವಾರಿ ಸಚಿವರಾಜಿಗಿದ್ದರು. ಸಿಎಂ ಸಿದ್ದ ರಾಮಯ್ಯ ಅವರ ಹಿಂದಿನ ಸರ್ಕಾರದ ಅವಧಿಯಲ್ಲಿಯೂ ಸಕ್ರಿಯ ರಾಜಕಾರಣಿಯಾಗಿದ್ದರು. ಕರೋನಾ ಸಂದರ್ಭದಲ್ಲಿ ಸ್ವಂತ ಖರ್ಚಿನಲ್ಲಿ ಅದೆಷ್ಟೋ ಜನರ ಪ್ರಾಣ ಉಳಿಸಿ, ಅಜಾತ ಶತ್ರು ಎಂದೇ ಖ್ಯಾತರಾಗಿದ್ದರು.

ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣದಲ್ಲೂ ಅಭಿಮಾಮ ಹೊಂದಿದ್ದ ಇವರು, ಸಮಾಜದ ಉನ್ನತಿಗೆ ಸದಾ ಚಿಂತಿಸುವ ಹಿರಿಯರಾಗಿದ್ದಾರೆ. ವೀರಶೈವ ಮಹಾ ಸಭಾದ ಅಧ್ಯಕ್ಷರಾಗಿ ಯೂದುಡಿದ ಹೆಗ್ಗಳಿಕೆಗೂ ಪಾತ್ರರಾಗಿದ್ದರು. ದೇವರಾಜು ಅರಸು ಹಾಗೂ ದಿ.ಇಂದಿರಾಗಾಂಧಿ ಅವರ ಕಾಂಗ್ರೆಸ್‌ನಲ್ಲಿ ಯೂ ಕಾರ್ಯನಿರ್ವಹಿಸಿದ್ದರು. ನೇರ ಮಾತು, ಸ್ನೇಹಪರತೆ ಹಾಗೂ ಕಾಂಗ್ರೆಸ್ ಪ್ರಗತಿಯನ್ನೇ ಉಸಿರಾಗಿಸಿಕೊಂಡಿದ್ದ ಇವರ ನಿಧನಕ್ಕೆ ನಾಡಿನ ಜನತೆ ಕಂಬಮಿ ಮಿಡಿದಿದ್ದಾರೆ. ವಿಶೇಷ ವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ರಹೀಮ್ ಖಾನ್, ಈಶ್ವರ ಖಂಡ್ರೆ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸೇರಿ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

### ಅತ್ಯಂತ ಹಿರಿಯ ಸದಸ್ಯರು

ವಿಧಾನಸಭೆಯಲ್ಲಿ ಅತ್ಯಂತ ಹಿರಿಯ ಸದಸ್ಯರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ, ಈ ನೋವಿನ ಸಂದರ್ಭದಲ್ಲಿ ಸಚಿವ ಸಂಪುಟದ ಸಹೋದ್ಯೋಗಿಯಾದ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಅವರ ಕುಟುಂಬದ ಎಲ್ಲರಿಗೂ ಶಾಮನೂರ್ ಅಣ್ಣನವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿ ನೀಡಲಿ ಎಂದು ಈಶ್ವರ ಖಂಡ್ರೆ ಪ್ರಾರ್ಥಿಸಿದ್ದಾರೆ.

**ಕಾಂಗ್ರೆಸ್ ನವರು ಅಭಿವೃದ್ಧಿ ಯ ಕಡೆಗೆ ಗಮನ ಹರಿಸುತ್ತಿಲ್ಲ. ಬದಲಿಗೆ ವಿನಾಕಾರಣ ಪ್ರತಿಭಟನೆ ಮಾಡುತ್ತಿದ್ದಾರೆ: ಕೇಂದ್ರ ಗೃಹ ಸಚಿವ ಅಮಿತ್ ಶಾ**

# ವಿವಿಧ ಶಾಲೆಗಳಿಗೆ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಭೇಟಿ



> **ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸರಕಾರ ಸಾಕಷ್ಟು ಯೋಜನೆ ರೂಪಿಸುತ್ತಿದೆ. ಎಲ್ಲ ಶಿಕ್ಷಕರು ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವುದರ ಜತೆಗೆ ಅಗತ್ಯ ಸೌಲಭ್ಯ ಸಿಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಆಯೋಗ ಮಧ್ಯೆ ಪ್ರವೇಶಿಸಿ ಸಂಬಂಧಿತರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಿದೆ.**
>
> **ಶಶಿಧರ ಕೋಸಂಬೆ**
>
> **ಅಧ್ಯಕ್ಷರು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು**

ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ : **ತಾಲೂಕಿನ ವಿವಿಧ ಶಾಲೆಗಳಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಭೇಟಿ** ನೀಡಿ ಪರಿಶೀಲಿಸಿದರು. ಆಳಂದಿ, ಡೋಣಗಾಪೂರ ಗ್ರಾಮದ ಸರಕಾರಿ ಶಾಲೆಗಳಿಗೆ ಅವರು ಶನಿವಾರ ಭೇಟಿ ನೀಡಿ ಮಕ್ಕಳ ದಾಖಲಾತಿ, ಹಾಜರಾತಿ, ಬಿಸಿಯೂಟ, ಕುಡಿಯುವ ನೀರು, ಶಾಲಾ ಆವರಣ ಸ್ವಚ್ಛತೆ ಸೇರಿ ಮತ್ತಿತರ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದು ಕೊಂಡರು.

ಮೊದಲಿಗೆ ಆಳಂದಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ಅವರು ಮಕ್ಕಳ ಹಾಜರಾತಿ ಮತ್ತು ದಾಖಲಾತಿ ಪುಸ್ತಕ ಪರಿಶೀಲಿಸಿದರು. ಈ ವೇಳೆ ಶಾಲೆಯಲ್ಲಿ ಒಟ್ಟು 48 ವಿದ್ಯಾರ್ಥಿಗಳು ದಾಖಲಾತಿ ಹೊಂದಿದರೇ, ತರಗತಿಯಲ್ಲಿ ಕೇವಲ 19 ಮಕ್ಕಳು ಇದ್ದದ್ದು ಕಂಡು ಉಳಿದ 29 ಮಕ್ಕಳು ಏಕೆ ಶಾಲೆಯಿಂದ ಹೊರಗುಳಿದ್ದಾರೆ ಎಂದು ಪ್ರಶ್ನಿಸಿದರು.

ದಾಖಲಾತಿ ಪ್ರಕಾರ ಮಕ್ಕಳನ್ನು ಹಾಜರಾತಿಯಲ್ಲಿ ತೋರಿಸಲಾಗುತ್ತಿದೆ. ಆದರೆ ತರಗತಿಯಲ್ಲಿ ಪ್ರಸ್ತುತ 18–20 ಮಕ್ಕಳು ಮಾತ್ರ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಉಳಿದ 29 ಮಕ್ಕಳು ಒಂದೇ ದಿನ ಶಾಲೆಯಿಂದ ಹೊರಗೆ ಉಳಿಯಲು ಹೇಗೆ ಸಾಧ್ಯ, ಗೈರಾದ ಮಕ್ಕಳು ಬೇರೆಡೆ ಶಿಕ್ಷಣ ಪಡೆ–ಯುತ್ತಿದ್ದಾರೆಯೇ ? ಮಧ್ಯಾಹ್ನದ ಬಿಸಿಯೂಟ, ಹಾಲು, ಮೊಟ್ಟೆ, ಬಾಳೆಹಣ್ಣು ಪೂರ್ಣ ಪ್ರಮಾಣದಲ್ಲಿ ಹೇಗೆ ಬಳಕೆ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಮೇಲ್ನೋಟಕ್ಕೆ ಸರಕಾರದ ಸೌಲಭ್ಯಗಳನ್ನು ಶಾಲೆಯಿಂದ ಹೊರಗುಳಿದ ಮಕ್ಕಳ ಹೆಸರಿನಲ್ಲಿ ಬಳಕೆ ಮಾಡಿಕೊಂಡಂತೆ ಕಾಣುತ್ತಿದೆ. ಕೂಡಲೇ ಎರಡ್ಮೂರು ದಿನಗಳಲ್ಲಿ ಸಮಗ್ರ ಮಾಹಿತಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಸಿಆರ್‌ಪಿಗೆ ಸೂಚನೆ ನೀಡಿದರು.

ಕುಡಿಯುವ ನೀರಿನ ಸಮಸ್ಯೆ

ಇದೇ ವೇಳೆ ಡೋಣಗಾಪೂರ ಗ್ರಾಮದ ಸರಕಾರಿ ಪ್ರೌಢ ಶಾಲೆಗೆ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಭೇಟಿ ನೀಡಿದ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಕಂಡು ಬಂತು. ಎಲ್ಲ ಅಂಗನವಾಡಿ, ಶಾಲೆಗಳಿಗೆ ಜಲಜೀವನ ಮಿಷನ್ ಯೋಜನೆಯಡಿ ನಲ್ಲಿ ಸಂಪರ್ಕ ಕಲ್ಪಿಸಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗುತ್ತಿದೆ. ಈ ಶಾಲೆಯಲ್ಲಿ ಏಕೆ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಕುಡಿಯಲು ಮತ್ತು ಶೌಚ ಬಳಕೆ ನೀರು ಇಲ್ಲದಿದ್ದರೇ ಮಕ್ಕಳ ಕಲಿಕೆ ಹೇಗೆ ಪ್ರಗತಿ ಹೊಂದಲು ಸಾಧ್ಯ ಮುಂದಿನ ಮೂರು ದಿನಗೊಳಗೆ ವ್ಯವಸ್ಥೆ ಸರಿಪಡಿಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದರು.

---

ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಛೇರಿ ಬಸವಕಲ್ಯಾಣ

ಇ-ಟೆಂಡರ್ ಪ್ರಕಟಣೆ ಸಂಖ್ಯೆ: BK/ALL/02/03/2025-26 ದಿನಾಂಕ: 10-12-2025

## ಇ–ಟೆಂಡರ್ ಪ್ರಕಟಣೆ

ಬೀದರ ಜಿಲ್ಲೆಯ ಬಸವಕಲ್ಯಾಣ, ಹುಮನಾಬಾದ ಹಾಗೂ ಚಿಟ್ಟಗುಪ್ಪಾ ತಾಲ್ಲೂಕಿನ ಕೆಳಕಂಡ ಸರ್ಕಾರಿ ಜಲಸಂಪನ್ಮೂಲಗಳ (ಕೆರೆಗಳ, ಇತ್ಯಾದಿ) ಮೀನು ಪಾಶುವಾರು ಹಕ್ಕನ್ನು 2025-26 ನೇ ಮೀನುಗಾರಿಕೆ ಫಸಲಿ ವರ್ಷದಿಂದ 2029-30ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಾಂಕ 01/07/2025 ರಿಂದ 30/06/2030 ರವರೆಗೆ) ಒಟ್ಟು 5 (ಐದು) ವರ್ಷಗಳ ಅವಧಿಗೆ ಇ-ಟೆಂಡರು ಮೂಲಕ ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯನ್ವಯ ಸರ್ಕಾರದ ಮೀನುಗಾರಿಕೆ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರ ಇ-ಸಂಗ್ರಹಣಾ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ..

ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಜಲಸಂಪನ್ಮೂಲಗಳ ವಿವರಗಳು

| ಕ್ರ. ಸಂ | ಇ-ಟೆಂಡರ್ ನಂಬರ್ | ಕೆರೆ/ ಜಲಸಂಪನ್ಮೂಲದ ಹೆಸರು | ಗ್ರಾಮದ ಹೆಸರು | ಜಲ ವಿಸ್ತೀರ್ಣ / ಅಚ್ಚುಕಟ್ಟು ಪ್ರದೇಶ ಹೆಕ್ಟೇರ್ ಗಳಲ್ಲಿ | ಭದ್ರತಾ ಠೇವಣಿ (ರೂಗಳಲ್ಲಿ) | ಸರ್ಕಾರಿ ಸವಾಲ್ ಮೊತ್ತ (ರೂಗಳಲ್ಲಿ) | ನಿಗದಿ ಪಡಿಸಿದ ಮೀಸಲಾತಿ |
|---|---|---|---|---|---|---|---|
| 1 | DOF/2025-26/SE3892 | ಮುಡಬಿ ಕೆರೆ | ಮುಡಬಿ | 19.00 / 150 | 428/- | 2500/- | ಸಾಮಾನ್ಯ |
| 2 | DOF/2025-26/SE3893 | ಫಾತಿಮ್ಮಾಪೂರ ಕೆರೆ | ಫಾತಿಮ್ಮಾಪೂರ | 18.49 / 167 | 416/- | 2774/- | ಪರಿಶಿಷ್ಟ ಪಂಗಡ |
| 3 | DOF/2025-26/SE3894 | ಬೇಳಕೇರಾ ಕೆರೆ | ಬೇಳಕೇರಾ | 37.00/ 278 | 832/- | 3445/- | ಪರಿಶಿಷ್ಟ ಪಂಗಡ |
| 4 | DOF/2025-26/SE3895 | ಚೇನಕೇರಾ ಕೆರೆ | ಚೇನಕೇರಾ | 03.47/ 71 | 78/- | 520/- | ಸಾಮಾನ್ಯ |
| 5 | DOF/2025-26/SE3896 | ಹಂದ್ರಾಳ (ಆರ್) ಕೆರೆ | ಹಂದ್ರಾಳ (ಆರ್) | 06.00/ 40 | 135/- | 900/- | ಸಾಮಾನ್ಯ |
| 6 | DOF/2025-26/SE3897 | ಕೋಹಿನೂರು ಕೆರೆ | ಕೋಹಿನೂರು | 15.12/ 120 | 340/- | 18117/- | ಸಾಮಾನ್ಯ |
| 7 | DOF/2025-26/SE3898 | ಅಟ್ಟೂರು ಕೆರೆ | ಅಟ್ಟೂರು | 9.76/ 76 | 220/- | 1296/- | ಸಾಮಾನ್ಯ |
| 8 | DOF/2025-26/SE3899 | ಮೀನಕೇರಾ ಕೆರೆ | ಮೀನಕೇರಾ | 19.00/ 71 | 427/- | 2850/- | ಸಾಮಾನ್ಯ |
| 9 | DOF/2025-26/SE3900 | ಬನ್ನಳ್ಳಿ ಕೆರೆ | ಬನ್ನಳ್ಳಿ | 8.74/ 154 | 197/- | 1311/- | ಸಾಮಾನ್ಯ |

ಇ-ಟೆಂಡರ್ ವೇಳಾಪಟ್ಟಿ

| | |
|---|---|
| ಇ-ಟೆಂಡರ್ ದಸ್ತಾವೇಜು ಪಡೆಯುವ ದಿನಾಂಕ: | 10-12-2025 |
| ಇ-ಟೆಂಡರ್ ಬಿಡ್ ಸಲ್ಲಿಕೆ ಅಂತಿಮ ದಿನಾಂಕ & ಸಮಯ | 24-12-2025 17:30:00 |
| ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: ಸ್ಥಳ: | 26-12-2025 11:00:00 ಮೀ.ಸ.ನಿ. ಕಚೇರಿ ಬಸವಕಲ್ಯಾಣ |
| ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: ಸ್ಥಳ: | 29-12-2025 11:00:00 ಮೀ.ಸ.ನಿ. ಕಚೇರಿ ಬಸವಕಲ್ಯಾಣ |
| ಇ-ಟೆಂಡರ್ ಪೂರ್ವ ಸಭೆಯ ದಿನಾಂಕ & ಸಮಯ : ಸ್ಥಳ | 16-12-2025 11:00:00 ಮೀ.ಸ.ನಿ. ಕಚೇರಿ ಬಸವಕಲ್ಯಾಣ |

ಹೆಚ್ಚಿನ ಮಾಹಿತಿಗಾಗಿ (https:// kppp.karnataka.gov.in) ಇ-ಸಂಗ್ರಹಣಾ ಪೋರ್ಟಲ್ ಭೇಟಿ ಮಾಡುವುದು.

ಮೀನುಗಾರಿಕೆ ಸಹಾಯಕ ನಿರ್ದೇಶಕರು
ಬಸವಕಲ್ಯಾಣ ತಾಲ್ಲೂಕು, ಬೀದರ ಜಿಲ್ಲೆ

---

# ಬಸವಜ್ಯೋತಿ ಪಾದಯಾತ್ರೆಗೆ ಸ್ವಾಗತ



> **ಬಸವಜ್ಯೋತಿ ಪಾದಯಾತ್ರೆಗೆ ಸ್ವಾಗತ**
>
> ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ 136ನೆಯ ಜಯಂತ್ಯುತ್ಸವ ನಿಮಿತ್ತ ಕಮಲನಗರದಿಂದ ಕೈಗೊಂಡ ಬಸವಜ್ಯೋತಿ ಸಂದೇಶ ಪಾದಯಾತ್ರೆಗೆ ಪಟ್ಟಣದಲ್ಲಿ ಅದ್ದೂರಿಯಾಗಿ ಸ್ವಾಗತ ಕೋರಲಾಯಿತು. ಪಟ್ಟಣದ ವಿಶ್ವಗುರು ಬಸವಣ್ಣನವರ ವೃತ್ತದಲ್ಲಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ನೇತೃತ್ವದಲ್ಲಿ ಆಗಮಿಸಿದ ಬಸವಜ್ಯೋತಿ ಪಾದಯಾತ್ರೆಗೆ ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ಅವರು ಮಾಲಾರ್ಪಣೆ ಸಲ್ಲಿಸಿ ಸ್ವಾಗತಿಸಿದರು. ಪಟ್ಟದ್ದೇವರ ಜನ್ಮಭೂಮಿ ಕಮಲನಗರಿಂದ ಶುಕ್ರವಾರ ಹೊರಟ ಪಾದಯಾತ್ರೆ ಹೊಳಸಮುದ್ರ, ಆಳಂದಿ, ಡೋಣಗಾಪೂರ ಮಾರ್ಗವಾಗಿ ಶನಿವಾರ ಪಟ್ಟಣದ ಬಸವೇಶ್ವರ ವೃತ್ತಕ್ಕೆ ಆಗಮಿಸಿತು.

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಪಟ್ಟಣದಲ್ಲಿ ಡಿ.22ರಂದು ನಡೆಯಲಿರುವ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ 136ನೆಯ ಜಯಂತ್ಯುತ್ಸವ ಸಮಾರಂಭದಲ್ಲಿ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.

ತಾಲೂಕಿನ ಡೋಣಗಾಪೂರ ಗ್ರಾಮದ ಮಹಾದೇವ ಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಬಸವಜ್ಯೋತಿ ಪಾದಯಾತ್ರೆ ಸ್ವಾಗತ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಪೂಜ್ಯರ ಜಯಂತ್ಯುತ್ಸವ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಪ್ರವಚನ, ವಿವಿಧ ಸ್ಪರ್ಧೆ, ಪ್ರಶಸ್ತಿ ಪ್ರದಾನ ಸೇರಿ ವಿವಿಧ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗುತ್ತಿದೆ. ನಾಡಿನ ಮಠಾಧೀಶರು, ರಾಜಕೀಯ ಮುಖಂಡರು, ಸಾಹಿತಿಗಳು, ಕಲಾವಿದರು ಈ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ ಎಂದರು. 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಎಲ್ಲರನ್ನು ಸಮಾನರಾಗಿ ಕಂಡರು. ಅವರ ವಿಚಾರಧಾರೆಯನ್ನು ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರು ನಿಜ ಜೀವನದಲ್ಲಿ ಆಚರಣೆಗೆ ತಂದರು. ಪೂಜ್ಯರ ಕೊಡುಗೆ ಇಂದಿನ ಯುವ ಸಮೂಹ ತಿಳಿದು ಕೊಳ್ಳುವುದು ಅವಶ್ಯಕವಾಗಿದೆ ಎಂದು ತಿಳಿಸಿದರು.

ಬಸವಕಲ್ಯಾಣ ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ತಿಪ್ಪೇರುದ್ರ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ದೇವಮ್ಮತಾಯಿ ನೇತೃತ್ವ ವಹಿಸಿದರು. ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ, ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ, ಗ್ರಾಮ ಪಂಚಾಯತಿ ಅಧ್ಯಕ್ಷ ದೀಪಕ ಕಾಂಬಳೆ, ಪಿಕೆಪಿಎಸ್ ಅಧ್ಯಕ್ಷೆ ವಿದ್ಯಾವತಿ ಬಸವರಾಜ ವೀರಶೆಟ್ಟೆ, ಮಲ್ಲಿಕಾರ್ಜುನ ಉಪ್ಪಿನ್, ಬಸವರಾಜ ನಾಗಣ್ಣ ವೀರಶೆಟ್ಟೆ, ಚಂದ್ರಪ್ಪ ವೀರಶೆಟ್ಟೆ, ವಿಶ್ವನಾಥ ನಾಗಸಂಕರೆ, ವಿಶ್ವನಾಥ ಬಂಬುಳಗೆ ಸೇರಿದಂತೆ ಹಲವರು ಇದ್ದರು. ಖೇಡ ಸಂಗಮ ಡಾ.ಚನ್ನಬಸವ ಪಟ್ಟದ್ದೇವರು ಹಿರಿಯ ಪ್ರಾಥಮಿಕ ಶಾಲೆಯ ಡೋಣಗಾಪುರ ಗ್ರಾಮದ ಮಕ್ಕಳು ವಚನ ನೃತ್ಯ ನಡೆಸಿ ಕೊಟ್ಟರು.

ಸಂಜೀವಕುಮಾರ ಮೇಂಗಾ ನಿರೂಪಿಸಿ, ವಂದಿಸಿದರು.

ಈ ಸಂದರ್ಭದಲ್ಲಿ ಶಶಿಧರ ಕೋಸಂಬೆ, ಚಂದ್ರಕಾಂತ ಬಿರಾದಾರ್, ರಾಜಪ್ಪ ಪಾಟೀಲ್, ನಾಗಭೂಷಣ ಮಾಮಡಿ, ಮಲ್ಲಮ್ಮ ಆರ್ ಪಾಟೀಲ್, ಮಲ್ಲಿಕಾರ್ಜುನ ಮಣಗೀರೆ, ಬಸವರಾಜ ಮರೆ ಸೇರಿದಂತೆ ಹಲವರು ಇದ್ದರು.

---

# ಸಾಹಿತ್ಯ ಸಂಗೀತ ಸಂಸ್ಕೃತಿಯ ಜೇನು ಗೂಡು ಕೆಂಭಾವಿ ಮಠ



ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ: ವಲಯದಲ್ಲಿ ಕೆಂಭಾವಿ ಹಿರೇಮಠದ ಪ ಪೂ ಚನ್ನಬಸವ ಶಿವಾಚಾರ್ಯರ ನೇತೃತ್ವದಲ್ಲಿ ಯಾವತ್ತೂ ಕವಿಗೋಷ್ಠಿ, ವಿಚಾರ ಗೋಷ್ಠಿ ಸೇರಿದಂತೆ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಇಲ್ಲಿನ ಯುವ ಬರಹಗಾರರಿಗೆ ವೇದಿಕೆ ಕಲ್ಪಿಸಿಕೊಡುತ್ತಿರುವುದು ಶ್ಲಾಘನೀಯ ಕಾರ್ಯ, ಕೆಂಭಾವಿ ಮಠ ಸಾಹಿತ್ಯ ಸಂಗೀತ ಸಂಸ್ಕೃತಿಯ ಜೇನು ಗೂಡಾಗಿದೆ ಎಂದು ಸಾಹಿತಿ ನಿಂಗನಗೌಡ ದೇಸಾಯಿ ಹೇಳಿದರು. ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶನಿವಾರ ಷ.ಬ್ರ.ಲಿಂ ಅಯ್ಯಪ್ಪಯ್ಯ ಶಿವಾಚಾರ್ಯ ಮಹಾಸ್ವಾಮಿಗಳ ಪುಣ್ಯಾರಾಧನೆ ಅಂಗವಾಗಿ ಹಮ್ಮಿಕೊಂಡ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತಾನಾಡಿದರು. ಕವಿಗೋಷ್ಠಿಯಲ್ಲಿ ಶರಣಬಸಯ್ಯ ಹಿರೇಮಠ ವಾಚಿಸಿದ ಕವಿತೆ ಕನಸಿನ ಲೋಕದೋಳ್ ಭದ್ರತೆ ಮರೆತ ಭವಿ ನೀನಲ್ಲವೆ? ಎಂಬ ಕವಿತೆ ಮನುಷ್ಯ ಬದುಕಿನ ಅರ್ಥ ತಿಳಿಯದೆ ಬದುಕುತ್ತಿದ್ದಾನೆ ಎಂಬ ಸಂದೇಶ ಸಾರಿತು, ಕವಿತ್ರಿ ಪಾರ್ವತಿ ದೇಸಾಯಿವರು ತಮ್ಮ ಗಜಲ್ ನಲ್ಲಿ ಬಣ್ಣ ಹಚ್ಚಿಕೊಳ್ಳದೆ ನಾಟಕೀಯ ವ್ಯಕ್ತಿಗಳ ಮುಖವಾಡಗಳು ಬಿಚ್ಚಿಟ್ಟರು. ಪರಶುರಾಮ ಮಾಳಳ್ಳಿಕರ್ ವಾಚಿಸಿದ ಕವಿತೆ ಜನ್ಮದಾತರ ಕುರಿತು ಕೃತಜ್ಞಾಭಾವ ತೋರಿತು, ಹೀಗೆ ಕವನ ವಾಚನದಲ್ಲಿ ಹಲವಿ ಕವಿಗಳು ಸಮಾಜದ ಅಂಕು ಡೊಂಕುಗಳು, ಹೆತ್ತವರನ್ನು ಗೌರವಿಸುವ ಪರಂಪರೆ, ಇಂದಿನ ರಾಜಕೀಯ ಡೊಂಬರಾಟ, ಅಪಘಾತಗಳು, ಭಕ್ತಿ, ಸಂಸ್ಕೃತಿ, ಪರಂಪರೆ, ಪ್ರಣಯ, ರೈತರ ಸಂಕಟಗಳು ಸೇರಿದಂತೆ ಹಲವು ವಿಧಗಳಿಂದ ಕವಿತೆಗಳು ಮೂಡಿಬಂದವು. ಕಾರ್ಯಕ್ರಮದ ಸಾನಿಧ್ಯವಹಿಸಿದ ಚನ್ನಬಸವ ಶಿವಾಚಾರ್ಯರು ಮಾತನಾಡುತ್ತಾ, ಕೆಂಭಾವಿ ವಲಯ ಯಾವತ್ತೂ ಸಾಹಿತ್ತಿಕವಾಗಿ ಸಾಂಸ್ಕೃತಿಕವಾಗಿ ಸಾಕಷ್ಟು ಗುರುತಿಸಿಕೊಂಡಿದೆ, ಯುವ ಬರಹಗಾರರಿಗೆ ಸಾಂಸ್ಕೃತಿಕ ವೇದಿಕೆ ಕಲ್ಪಿಸಿಕೊಡುವುದರ ಮೂಲಕ ಹಿರಿಯರ ಮಾರ್ಗದರ್ಶನದೊಂದಿಗೆ ಸಾಹಿತ್ತಿಕ ಕ್ರೀಯಾಶೀಲತೆ ಕಾಯ್ದುಕೊಂಡು ಹೋಗುವಲ್ಲಿ ನಮ್ಮ ಮಠ ತಮ್ಮೆಲ್ಲರ ಸಹಕಾರದೊಂದಿಗೆ ಮುನ್ನಡೆಯುತ್ತಿರುವದು ಸಂತಸ ತಂದಿದೆ ಎಂದರು. ಸಂಗೀತ ಶಿಕ್ಷಕ ರಮೇಶ ಯಾಳಗಿ ಗುರುವಿನ ಮಹಿಮೆ ಕುರಿತು ಉಪನ್ಯಾಸ ನೀಡಿದರು.

ಕವಿಗೋಷ್ಠಿಯಲ್ಲಿ ಶರಣಬಸಯ್ಯ ಹಿರೇಮಠ, ಶ್ರೀಶೈಲ್ ಹದಗಲ್, ದೇವಿಂದ್ರಪ್ಪ ಕರಡಕಲ್, ಬಸವರಾಜ್ ಪಾಟೀಲ್, ಮಹ್ಮದ್ ಡಲಾಯಿತ್, ಪರಶುರಾಮ್ ಮಾಳಳ್ಳಿಕರ್, ಪಾರ್ವತಿ ದೇಸಾಯಿ, ನೀಲಮ್ಮ ಮಲ್ಲೆ, ಉಮಾದೇವಿ ಪರಸನಹಳ್ಳಿ, ಡಾ. ಯಂಕನಗೌಡ ಪಾಟೀಲ್, ವೀರೇಶ ಟಕ್ಕಳಕಿ ಸೇರಿದಂತೆ ಸುಮಾರು 15 ಕ್ಕೂ ಅಧಿಕ ಕವಿಗಳು ಕವನ ವಾಚನ ಮಾಡಿದರು. ಡಾ. ಯಂಕನಗೌಡ ಪಾಟೀಲ್ ಕಾರ್ಯಕ್ರಮ ನಡೆಸಿಕೊಟ್ಟರು, ಇಲಿಯಾಸ್ ಪಟೇಲ್, ಅಭಿಶೇಕ ಪಾಟೀಲ್, ಮಹಾದೇವಪ್ಪ ವಜ್ಜಲ, ಅವ್ವಣ್ಣ ಮಡಿವಾಳಕರ್ ಸೇರಿದಂತೆ ಇತರರು ಇದ್ದರು.

---

# ಬದಲಾದ ಆಹಾರ ಪದ್ದತಿಗಳಿಂದಲೇ ರೋಗಗಳಿಗೆ ಅಹ್ವಾನ : ಡಾ. ಎಸ್.ಎಸ್.ಮೈನಾಳೆ



ಮಲ್ಲಮ್ಮ ನುಡಿ ವಾರ್ತೆ ಕಮಲನಗರ: ಬದಲಾದ ಜೀವನ ಶೈಲಿ ಮತ್ತು ಆಹಾರ ಪದ್ಧತಿಯಿಂದ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳು ಕಾಣಿಸಿಕೊಳ್ಳುತ್ತಿವೆ. ವೈದ್ಯರ ಸಲಹೆ ಮೇರೆಗೆ ಆರೋಗ್ಯ ತಪಾಸಣೆ ವಿಧಾನಗಳನ್ನು ಕಡ್ಡಾಯಗೊಳಿಸಿಕೊಳ್ಳುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ನಿವೃತ್ತ ಪ್ರಾಚಾರ್ಯ ಡಾ.ಎಸ್ ಎಸ್ ಮೈನಾಳೆ ನುಡಿದರು. ಕಮಲನಗರ ಪಟ್ಟಣದ ನಾಗೋಬಾ ಮಂದಿರದಲ್ಲಿ ಗುರುವಾರ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ದಿ ಯೋಜನೆ ಅಡಿಯಲ್ಲಿ ಸಂಘದ ಸದಸ್ಯರಿಗೆ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಮಾತನಾಡಿದರು. ರಕ್ತದೊತ್ತಡ, ಮಧುಮೇಹ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳು ಯುವಕರಲ್ಲಿ ಹೆಚ್ಚಾಗಿ ಕಾಣುತ್ತಿವೆ. ಇದರಿಂದ ಆರೋಗ್ಯ ಕ್ಷೇತ್ರದಲ್ಲಿ ಹಿಂದೆಂದು ಕಾಣದ ಕಳವಳಕಾರಿ ಸಂಗತಿಗಳು ಗೋಚರವಾಗುತ್ತಿವೆ. ಮಹಿಳೆಯರು ಕುಟುಂಬದ ಜವಾಬ್ದಾರಿ ಸ್ಥಾನ ಹೊಂದಿದ್ದಾರೆ. ಕುಟುಂಬವನ್ನು ಆರೋಗ್ಯವಂತರನ್ನಾಗಿಡಲು ಮಹಿಳೆಯರು ಪ್ರಾಮಾಣಿಕತೆ ಮತ್ತು ಕಾಳಜಿ ವಹಿಸಿದರೆ ರೋಗಗಳು ಇನ್ನಿಲ್ಲದಂತಾಗುತ್ತವೆ ಎಂದರು.

ಟೊಣ್ಣೆ ಆಸ್ಪತ್ರೆಯ ವೈದ್ಯ ಡಾ.ಕೈಲಾಶ ಟೊಣ್ಣೆ ಅವರು ಜ್ಯೋತಿ ಬೆಳಗಿಸಿ ಮಾತನಾಡಿ, ಚಳಿಗಾಲ ಆರೋಗ್ಯವಂತ ತಿಂಗಳು ಎಂದು ಕರೆಯಲಾಗುತ್ತದೆ. ಆದರೆ ಹೆಚ್ಚಾದ ಶೀತ ಗಾಳಿಯಿಂದ ಹೃದಯಕ್ಕೆ ಸಂಬಂಧೀಸಿದ ಕಾಯಿಲೆಗಳು ಯುವಕರಲ್ಲಿ ಹೆಚ್ಚಾಗುತ್ತಿವೆ. ಪ್ರತಿನಿತ್ಯ ವ್ಯಾಯಾಮ, ಯೋಗ ಮತ್ತು ಕಾಲ್ನಡಿಗೆ ಮೂಲಕ ಸುಸ್ಥಿರ ಆರೋಗ್ಯ ಕಾಪಾಡಿಕೊಳ್ಳಲು ಮುಂದಾಗಬೇಕು ಎಂದರು. ತಾಲುಕು ಯೋಜನಾಧಿಕಾರಿ ರಾಘವೇಂದ್ರಗೌಡ ಅವರು ಸಂಸ್ಥೆ ಯೋಜನೆಗಳ ಕುರಿತು ಮಾತನಾಡಿದರು.

ಜ್ಞಾನ ವಿಕಾಸ ಒಕ್ಕೂಟದ ಅಧ್ಯಕ್ಷರಾದ ಲಕ್ಷ್ಮಿ ಮತ್ತು ಪುನೀತಾ ಸೇವಾ ಪ್ರತಿನಿಧಿ ಮೀನಾಕ್ಷಿ ಹಡಪದ, ಆಶಾ, ಶಿವಲೀಲಾ, ಕಾಂಚನಾ ಮತ್ತು ಲಕ್ಷ್ಮಿಬಾಯಿ ಇದ್ದರು. ಸುಮಾರು 65 ಜನರಿಗೆ ರಕ್ತದೊತ್ತಡ, ಮಧುಮೇಹ ಮತ್ತು ಇನ್ನಿತರ ಕಾಯಿಲೆಗಳನ್ನು ತಪಾಸಣೆ ಮಾಡಿ ಸೂಕ್ತ ಸಲಹೆ ಮತ್ತು ಔಷಧಿ ನೀಡಲಾಯಿತ್ತು.

ವಲಯ ಮೇಲ್ವಿಚಾರಕ ಶರಣು ಅವರು ಕಾರ್ಯಕ್ರಮ ನಿರೂಪಿಸಿದರು.

---

# ಅಪರಾಧ ತಡೆ ಮಾಸಾಚರಣೆ ಜಾಗೃತಿ ಜಾಥಾ




ಮಲ್ಲಮ್ಮ ನುಡಿ ವಾರ್ತೆ ಕಮಲನಗರ: ಪಟ್ಟಣದ ಲತಾ ಮಂಗೇಶ್ಕರ್ ಕನ್ಯಾ ಪ್ರೌಢ ಶಾಲೆಯಲ್ಲಿ ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಜಾಗೃತಿ ಜಾಥಾಕ್ಕೆ ಚಾಲನೆ ನೀಡಲಾಯಿತು. ಕಮಲನಗರ ಪಟ್ಟಣದ ಠಾಣೆಯ ಎಎಸ್‌ಐ ವೀರಶೇಟ್ಟಿ ಸಾವಳೆ ಮಾತನಾಡಿ, ಅಪರಾಧಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸುವುದು, ಅಪರಾಧಗಳು ಆಗದಂತೆ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮೂಡಿಸಲು ಅಪರಾಧ ತಡೆ ಮಾಸಾಚರಣೆ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಕೇವಲ ಪೊಲೀಸರಿಂದ ಅಪರಾಧಗಳ ತಡೆ ಸಾಧ್ಯವಿಲ್ಲ. ಇದಕ್ಕೆ ಸಾರ್ವಜನಿಕರ ಸಹಕಾರವೂ ಮುಖ್ಯ. ಈ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಡಿಸೆಂಬರ್ ಮಾಹೆಯನ್ನು ಅಪರಾಧ ಮಾಸಾಚರಣೆಯನ್ನಾಗಿ ಆಚರಿಸಲಾಗುತ್ತದೆ ಎಂದರು. ಮುಖ್ಯಗುರು ಅನೀಲಕುಮಾರ ಬಿರಾದಾರ ಮಾತನಾಡಿ, ವಿದ್ಯಾರ್ಥಿಗಳು, ಯುವಜನರು ಪೊಲೀಸರಿಗೆ ಸಹಕಾರ ನೀಡಬೇಕು.

ಪೊಲೀಸರನ್ನು ಕಂಡು ಭಯಪಡುವ ಮತ್ತು ಪೊಲೀಸ್ ಠಾಣೆಗಳಿಗೆ ಹೋದರೆ ಅವಮಾನ ಎನ್ನುವ ಕಾಲ ಬದಲಾಗಿದೆ ಎಂದು ಹೇಳಿದರು. ಮನೋಜಕುಮಾರ ಹಿರೇಮಠ ಮಾತನಾಡಿ, ಪೊಲೀಸರು ಜನಸ್ನೇಹಿಗಳಾಗಿ ಸದಾ ಸಾರ್ವಜನಿಕರ ಪ್ರಾಣ, ಆಸ್ತಿ–ಪಾಸ್ತಿಗಳ ರಕ್ಷಣೆಗಾಗಿ ಶ್ರಮಿಸುತ್ತಾರೆ. ಅಪರಾಧಗಳ ತಡೆಗೆ ಪೊಲೀಸರಿಗೆ ಸಹಕಾರ ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ದ್ಯಾರ್ಥಿಗಳು ಪಟ್ಟಣದ ಪ್ರಮುಖ ರಸ್ತೆಗಳು ಮತ್ತು ವೃತಗಳಲ್ಲಿ ಸಂಚರಿಸಿ ಅಪರಾಧ ಮಾಸಾಚರಣೆ ಕುರಿತು ಜಾಗೃತಿ ಮೂಡಿಸಿದರು. ವಯೋನಿವೃತ್ತ ಮುಖ್ಯಶಿಕ್ಷಕ ಶಿವಕುಮಾರ ಧರಣೆ, ಶಿಕ್ಷಕ ಸಿಬ್ಬಂದಿ ರಮಾಕಾಂತ ಕಣಜೆ, ದೀಲೀಪ ಸಂತಪುರೆ, ಪ್ರಕಾಶ ಸೂರ್ಯವಂಶಿ, ರಾಜೇಂದ್ರಲಸ್ಕರೆ, ಸಂಗಮೇಶ ಉದಗೀರೆ, ಸರಸ್ವತಿ ಮಹಾಜನ, ಕಾವೇರಿ ಹಮೀಲಪುರೆ, ಜಯಶ್ರೀ ಮೇತ್ರೆ ಹಾಗೂ ಮಕ್ಕಳು ಪಾಲ್ಗೊಂಡಿದ್ದರು.

---

# ಬಸವಗಿರಿಯಲ್ಲಿ ಜನೇವರಿ 30, 31 ಹಾಗೂ ಫೆಬ್ರವರಿ 1 ರಂದು 3 ದಿನಗಳ ಕಾಲ ವಚನ ವಿಜಯೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬೀದರ: ಇಲ್ಲಿಯ ಶರಣ ಉದ್ಯಾನದಲ್ಲಿ ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಪೂಜ್ಯ ಡಾ. ಗಂಗಾಂಬಿಕಾ ಅಕ್ಕನವರ ಸಾನಿಧ್ಯದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಜನೇವರಿ 30, 31 ಹಾಗೂ ಫೆಬ್ರವರಿ 1 ರಂದು 3 ದಿನಗಳ ಕಾಲ ಇಲ್ಲಿನ ಬಸವಗಿರಿಯಲ್ಲಿ ವಚನ ವಿಜಯೋತ್ಸವ ಕಾರ್ಯಕ್ರಮ ಅರ್ಥಪೂರ್ಣವಾಗಿ ವೈವಿಧ್ಯಮಯವಾಗಿ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

ಪೂಜ್ಯ ಡಾ. ಗಂಗಾಂಬಿಕಾ ಅಕ್ಕ ಮಾತನಾಡಿ, ಕಲ್ಯಾಣ ಕ್ರಾಂತಿ ನಂತರ ವಚನ ಸಾಹಿತ್ಯ ಸಂರಕ್ಷಣೆಗಾಗಿ ಪ್ರಾಣಾರ್ಪಣೆಯಾದವರ ಸ್ಮರಣೆಗಾಗಿ 2002 ರಿಂದ ವಚನ ವಿಜಯೋತ್ಸವ ಕಾರ್ಯಕ್ರಮ ಆಚರಿಸಿಕೊಂಡು ಬರಲಾಗುತ್ತಿದೆ. ಕೆಲವೇ ವರ್ಷಗಳಲ್ಲಿ ಇದು ಕಲ್ಯಾಣ ಕರ್ನಾಟಕದ ಹೆಮ್ಮೆಯ ಉತ್ಸವವಾಗಿದೆ. ನಾಡಿನ ವಿವಿಧಡೆಯಿಂದ ಪೂಜ್ಯರು, ಅನುಭಾವಿಗಳು, ಗಣ್ಯರು, ಬಸವ ಭಕ್ತರು ಆಗಮಿಸುತ್ತಿದ್ದಾರೆ. ಸರ್ವ ಶರಣ ಬಂಧುಗಳು ಸೇವಾ ಮನೋಭಾವದಿಂದ ಶ್ರಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿ ಜಿಲ್ಲೆಯ ಕೀರ್ತಿ ಹೆಚ್ಚಿಸಬೇಕು ಎಂದರು. ಕಾರ್ಯಕ್ರಮದ ಯಶಸ್ವಿಗಾಗಿ ವಿವಿಧ ಸಮಿತಿಗಳ ರಚಿಸಲಾಯಿತು.

ಸ್ವಾಗತ ಸಮಿತಿ ಅಧ್ಯಕ್ಷರಾಗಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಕಾರ್ಯಾಧ್ಯಕ್ಷರಾಗಿ ಚಂದ್ರಕಾಂತ ಮಿರ್ಚೆ, ಪ್ರಧಾನ ಕಾರ್ಯಾದರ್ಶಿಯಾಗಿ ರಾಜೇಂದ್ರಕುಮಾರ ಜೊನ್ನಿಕೇರೆ, ಕೋಶಾಧ್ಯಕ್ಷರಾಗಿ ರಾಚಪ್ಪ ಪಾಟೀಲರವರನ್ನು ಆಯ್ಕೆ ಮಾಡಲಾಯಿತು. ವಿವಿಧ ಸಮಿತಿ ಸಂಯೋಜಕರಾಗಿ ನೇಮಿಸಲಾಯಿತು. ಮೆರವಣಿಗೆ ಸಮಿತಿ ರಾಜೇಂದ್ರಕುಮಾರ ಗಂದಗೆ, ಹಣಕಾಸು ಸಮಿತಿ ಗುಂಡಪ್ಪ ಬಳತೆ, ವೇದಿಕೆ ಸಮಿತಿ ಅಶೋಕಕುಮಾರ ವಡಗಾಂವೆ, ಮಂಟಪ ಸಮಿತಿ ವೀರಭದ್ರಪ್ಪ ಭುಯ್ಯಾ, ಅತಿಥಿಗಳ ಆಮಂತ್ರಣ ಸಮಿತಿ ಬಾಬುರಾವ ದಾನಿ, ವಿದ್ಯಾರ್ಥಿಗಳ ಸಂಘಟನೆ ಸಮಿತಿ ರಾಜಕುಮಾರ ಮಣಗೇರೆ, ಪ್ರಸಾದ ಸಮಿತಿ ಸೂರ್ಯಕಾಂತ ಬಾವಗೆ ಹಕ್ಯಾಳ, ಪ್ರಸಾದ ವಿತರಣಾ ಸಮಿತಿ ಶಿವರಾಜ ನೌಬಾದೆ, ಸಾಂಸ್ಕೃತಿಕ ಸಮಿತಿ ಜ್ಞಾನದೇವಿ ಬಬಛೇಡೆ, ವಸತಿ ಸಮಿತಿ ಅನಿಲಕುಮಾರ ದೇಶಮುಖ, ರಕ್ತದಾನ ಸಮಿತಿ ಗಣೇಶ ಬಿರಾದಾರ, ಪ್ರಚಾರ ಸಮಿತಿ ಔರಾದ ಸುವರ್ಣಾ ಚಿಮಕೋಡೆ, ಹುಮನಾಬಾದ ಮಲ್ಲಿಕಾರ್ಜುನ ಸಂಗಮಕರ, ಬಸವಕಲ್ಯಾಣ ಸಂಗಮೇಶ ತೋಗರಖೇಡೆ, ಚಿಟ್ಟಗುಪ್ಪ ಪೂಜ್ಯ ಇಂದುಮತಿತಾಯಿ, ಭಾಲ್ಕಿ ಪ್ರೋ. ಮಲ್ಲಮ್ಮ ಆರ್. ಪಾಟೀಲ, ಹುಲಸೂರು ವೀರಶೆಟ್ಟಿ ಮಲಶೆಟ್ಟಿ, ಕಮಲನಗರ ಶರಣಪ್ಪ ಚಿಕುರ್ತೆ, ಬೀದರ ಭಾರತಿ ಪಾಟೀಲ ಬೀದರ ನಗರ ಕಲ್ಯಾಣರಾವ ಚಳಾಕಪೂರೆ, ಸುಮಾ ಭೂಶೆಟ್ಟಿ, ಇಷ್ಟಲಿಂಗ ಸಿದ್ಧತಾ ಸಮಿತಿ ಡಾ. ಮಲ್ಲಿಕಾರ್ಜುನ ಬುಕ್ಕಾ, ಕಾರರ‍್ಯಾಲಿ ಸಮಿತಿ ಅರುಣಕುಮಾರ, ಧನರಾಜ ಹಂಗರಗಿ.

ಮಹಿಳಾ ಸಮಿತಿಯ ಗೌರವಾಧ್ಯಕ್ಷರಾಗಿ ಜ್ಞಾನದೇವಿ ಬಬಛೆಡೆ, ಕಾರ್ಯಾಧ್ಯಕ್ಷರಾಗಿ, ವಿಜಯಲಕ್ಷ್ಮಿ ಸುಲೇಪೇಟರವರನ್ನು ಆಯ್ಕೆ ಮಾಡಲಾಯಿತು.

ಅಲ್ಲದೇ ಮಹಿಳಾ ಸಮಿತಿ ಸಮಿತಿಗಳಿಗೆ ಮಹಿಳೆಯರನ್ನು ಸಂಯೋಜಕರನ್ನು ನೇಮಿಸಲಾಯಿತು. ಹಣಾಸು ಸಮಿತಿ ವಿದ್ಯಾವತಿ ಬಿರಾದಾರ ಉಂಡೆ, ಪ್ರಚಾರ ಶಿಸ್ತು ಸಮಿತಿ ಶೈಲಾ ಕುಂಬಾರ, ಆರೋಗ್ಯ ಸಮಿತಿ ಡಾ. ದೇವಿಕಾ ನಾಗೂರೆ, ಮಂಟಪ ಶಿಸ್ತು ಸಮಿತಿ ಗೀತಾ ಬಿರಾದಾರ, ಇಷ್ಟಲಿಂಗ ಪೂಜಾ ಸಿದ್ಧತಾ ಸಮಿತಿ, ಶಾಂತಾ ಖಂಡ್ರೆ, ವಚನ ಪಾರಾಯಣ ಸಿದ್ಧತಾ ಸಮಿತಿ ನಿರ್ಮಲಾ ಮಸೂದೆ

ಸಲಹಾ ಸಮಿತಿ ಸದಸ್ಯರು: ಶಿವಶರಣಪ್ಪ ವಾಲಿ, ಬಿ.ಜಿ.ಶೆಟಕಾರ, ಡಾ. ವೈಜಿನಾಥ ಕಮಠಾಣೆ, ಡಾ. ಗುರಮ್ಮ ಸಿದ್ದಾರೆಡ್ಡಿ, ಶಕುಂತಲಾ ಬೆಲ್ದಾಳೆ, ಡಾ.ವಿಜಯಶ್ರೀ ಬಶೆಟ್ಟಿ, ಬಸವರಾಜ ಬುಳ್ಳಾ, ಜಯರಾಜ ಖಂಡ್ರೆ, ಸುರೇಶ ಚನ್ನಶೆಟ್ಟಿ, ಶರಣಪ್ಪ ಮಿಠಾರೆ, ಡಾ. ಬಾಬು ವಾಲಿ, ಸೋಮಶೇಖರ

ಪಾಟೀಲ ಗಾದಗಿ, ಕುಶಾಲರಾವ ಪಾಟೀಲ ಖಾಜಾಪೂರ, ಶಂಕ್ರೆಪ್ಪ ಹೊನ್ನಾ, ಸಿದ್ದಯ್ಯ ಕಾವಡಿ, ಬಸವರಾಜ ಧನ್ನೂರು, ವಿಶ್ವನಾಥ ಕಾಜಿ, ಕುಶಾಲ ಪಾಟೀಲ ಗಾದಗಿ, ಶಿವರಾಜ ಮದಕಟ್ಟಿ, ರೇವಣಪ್ಪ ಮೂಲಗೆ, ಆನಂದ ದೇವಪ್ಪ, ಶರಣಪ್ಪ ಸಿಕನಪೂರ, ಸುಭಾಷ ಹಮ್ಮಿಲಪೂರೆ, ರಮೇಶ ಕಟ್ಟಿತೂಗಾಂವೆ, ದತ್ತಾತ್ರೆ ಬಾಂದೇಕರ್, ಬಾಬುರಾವ ಕುಂಬಾರ, ಸುಭಾಷ ಮಡಿವಾಳ, ಸುಭಾಷ ಗಜರೆ, ಚಂದ್ರಕಾಂತ ಹೂಗಾರ, ರಾಜಕುಮಾರ, ಜಗನ್ನಾಥ ಜಮಾದಾರ, ಸೋಮಶೇಖರ ಹಾಗೂ ಎಲ್ಲಾ ಬಸವಪರ ಸಂಘಟನೆಗಳ ಅಧ್ಯಕ್ಷರು. ಇದ್ದರು.

# ವಿಶೇಷ ಚೇತನರಿಗೆ ಸಲಕರಣೆ, ರಕ್ತದಾನ, ಉಚಿತ ಆರೋಗ್ಯ ತಪಾಸಣಾ ಶಿಬಿರ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಸಾರ್ವತ್ರಿಕ ಆರೋಗ್ಯ ರಕ್ಷಣೆ ದಿನ ಹಾಗೂ ಅಂತಾರಾಷ್ಟ್ರೀಯ ವಿಶೇಷ ಚೇತನರ ದಿನಾಚರಣೆ ಅಂಗವಾಗಿ ಶನಿವಾರ ಡಿಸೆಂಬರ್ 14ರಂದು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ವಿಶೇಷ ಚೇತನರಿಗೆ ಸಲಕರಣೆಗಳ ವಿತರಣೆ, ರಕ್ತದಾನ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶರಾದ ಶ್ರೀ ಮರುಳಸಿದ್ಧಾರಾಧ್ಯ ಹೆಚ್.ಜಿ ಅವರು ತಿಳಿಸಿದರು. ನಗರದ ನ್ಯಾಯಾಲಯ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿ ನಡೆಸಿದ ಅವರು, ರವಿವಾರ ಡಿಸೆಂಬರ್ 14 ರಂದು ಬೆಳಿಗ್ಗೆ 9 ಗಂಟೆಗೆ ಈ ಕಾರ್ಯಕ್ರಮವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯ ಮೂರ್ತಿಗಳು ಹಾಗೂ ಯಾದಗಿರಿ ಜಿಲ್ಲೆಯ ಆಡಳಿತಾತ್ಮಕ ನ್ಯಾಯ ಮೂರ್ತಿಗಳಾದ ಗೌರವಾನ್ವಿತ ಶ್ರೀಮತಿ ಹೇಮಲೇಖ ಅವರು ಉದ್ಘಾಟಿಸುವರು. ಕರ್ನಾಟಕ ಉಚ್ಚ

ನ್ಯಾಯಾಲಯದ ನ್ಯಾಯಮೂರ್ತಿಗಳಾದ ಗೌರವಾನ್ವಿತ ಹೆಚ್.ಟಿ ನರೇಂದ್ರ ಪ್ರಸಾದ್, ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸೆಕ್ಯುರಿಟಿ ಅಪಲೇಟ್ ಟ್ರಿಬೂನಲ್ ನ ಪ್ರಿಸೈಡಿಂಗ್ ಆಫೀಸರ್ (ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು)

ಗೌರವಾನ್ವಿತ ಶ್ರೀ ಪಿ. ಎನ್. ದಿನೇಶ್ ಕುಮಾರ್ ಅವರು ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಮರುಳಸಿದ್ಧಾರಾಧ್ಯ ಹಚ್.ಜೆ, ಯಾದಗಿರಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಆರ್.ಎಸ್.ಪಾಟೀಲ್, ಯಿಮ್ಸ ನಿರ್ದೇಶಕ ಡಾ.ಸಂದೀಪ್, ಜಿಲ್ಲಾ ವಿಶೇಷ ಚೇತನರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ್, ಎಪಿಡಿ ಸಂಸ್ಥೆ ಮುಖ್ಯಸ್ಥ ಕು.ಸಂಪ್ರೀತಾ. ದೇವಪುತ್ರ,

ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀ ಮರಿಯಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಮಹೇಶ ಬಿರಾದಾರ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಭೀಮಾಶಂಕರ ಆಶನಾಳ ಉಪಸ್ಥಿತರಿರುವರು ಎಂದು ಅವರು ಹೇಳಿದರು. ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ

ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಬೋಧಕ ಆಸ್ಪತ್ರೆ, ಜಿಲ್ಲಾ ಹಿರಿಯ ನಾಗರೀಕರ ಹಾಗೂ ವಿಶೇಷ ಚೇತನರ ಸಬಲೀಕರಣ ಇಲಾಖೆ, ಎಪಿಡಿ ಸಂಸ್ಥೆ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿ ದರು. ಈ ಕಾರ್ಯಕ್ರಮದ ಅಂಗವಾಗಿ ಕಳೆದ ಅಕ್ಟೋಬರ್ ಮಾಹೆಯಲ್ಲಿ ಅಸೆಸ್ಮೆಂಟ್ ಮಾಡಲಾದ ವಿಶೇಷಚೇತನರಿಗೆ ಸಾಧನ, ಸಲಕರಣೆಗಳನ್ನು ಹಾಗೂ ನೂರು ಜನರಿಗೆ ಯುಡಿಐಡಿ ಕಾರ್ಡುಗಳನ್ನು ವಿತರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಶೋರಾಪುರದಲ್ಲಿ ಎರಡನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಉದ್ಘಾಟನೆ:

ಡಿಸೆಂಬರ್ 14ರಂದು ಬೆಳಿಗ್ಗೆ 11 ಗಂಟೆಗೆ ಶೋರಾಪುರದಲ್ಲಿ ಎರಡನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಉದ್ಘಾಟನೆ ಸಹ ನಡೆಯಲಿದೆ

ಎಂದು ತಿಳಿಸಿದ ಅವರು ಶೀಘ್ರದಲ್ಲೇ ಹುಣಸಗಿ, ಗುರುಮಠಕಲ್ ನ್ಯಾಯಾಲಯದ ಕಲಾಪಗಳು ಆರಂಭಗೊಳ್ಳಲಿವೆ. ಒಡಗೇರಾದಲ್ಲಿ ನ್ಯಾಯಾಲಯ ಕಟ್ಟಡಕ್ಕೆ ಸ್ಥಳಾವಕಾಶವಿದೆ ಎಂದು ಹೇಳಿದರು.

ರಾಷ್ಟ್ರೀಯ ಲೋಕ್ ಅದಾಲತ್:

ಡಿಸೆಂಬರ್ 13 ರಂದು, ಈ ವರ್ಷದ ಕೊನೆಯ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗುತ್ತಿದ್ದು, ಸುಮಾರು 10 ಸಾವಿರ ಪ್ರಕರಣಗಳ ಪೈಕಿ,

7000 ಕ್ಕೂ ಹೆಚ್ಚು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ವಿಲೇವಾರಿ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಅವರು ಹೇಳಿದರು.

# ಕಾನಿಪ ಸಂಘದ ನೂತನ ಜಿಲ್ಲಾಧ್ಯಕ್ಷ ಎನ್.ವೀರಭದ್ರಗೌಡಗೆ ಸನ್ಮಾನ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ನಗರದ ನಂದ ವಸತಿ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹಾಗೂ ನಂದ ವಸತಿ ಶಾಲೆ ಆಶ್ರಯದಲ್ಲಿ ಗುರುವಾರ ಸಂಜೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಜಿಲ್ಲಾಧ್ಯಕ್ಷ ಎನ್.ವೀರಭದ್ರಗೌಡ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ, ನಂದ ವಸತಿ ಶಾಲೆಯ ಅಧ್ಯಕ್ಷ ವಿ.ಗಾಂಧಿ, ನಿವೃತ್ತ ಸಹಾಯಕ ಪ್ರಾಧ್ಯಾಪಕ ಡಾ.ಬೀ.ಆರ್. ಮಂಜುನಾಥ್, ನಿವೃತ್ತ ಉಪನ್ಯಾಸಕ ಎನ್.ಬಸವರಾಜ್ ಸೇರಿದಂತೆ ಇತರರು ನೂತನ ಅಧ್ಯಕ್ಷರಿಗೆ ಶುಭಾಶಯಗಳನ್ನು ತಿಳಿಸಿದರು.



ಭಾಲ್ಕಿ ತಾಲೂಕಿನ ಕೋನಮೇಳಕುಂದಾ ಗ್ರಾಮಕ್ಕೆ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್ ಭೇಟಿ ನೀಡಿ ಶೌಚಾಲಯ ನಿರ್ಮಾಣ ಕುರಿತು ಜಾಗೃತಿ ಮೂಡಿಸಿದರು.

# ಉದಾರ ಮನಸ್ಸಿನಿಂದ ವ್ಯಾಜ್ಯ ಇತ್ಯರ್ಥಪಡಿಸಿಕೊಂಡರೆ ನೆಮ್ಮದಿ ಜೀವನ: ನ್ಯಾ.ಕೆ.ಜಿ.ಶಾಂತಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ಪ್ರತಿದಿನ ವ್ಯಾಜ್ಯ ಪ್ರಕರಣಗಳೊಂದಿಗೆ ಬದುಕುವ ಬದಲು ಮುತುವರ್ಜಿ ವಹಿಸಿ ಉದಾರ ಮನಸ್ಸಿನಿಂದ ಪ್ರಕರಣಗಳನ್ನು ರಾಜಿ ಸಂಧಾನ ಮೂಲಕ ಇತ್ಯರ್ಥಪಡಿಸಿಕೊಂಡರೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ವಿವಿಧ ಪೀಠಗಳಲ್ಲಿ ಆಯೋಜಿಸಿದ್ದ 2025ರ ಕೊನೆಯ ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯವನ್ನು ವೀಕ್ಷಣೆ ನಡೆಸಿ ಮಾಧ್ಯಮದವರನ್ನುದ್ದೇಶಿಸಿ ಅವರು ಮಾತನಾಡಿದರು.

ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ದೊಡ್ಡ ಪ್ರಮಾಣದ ಬಾಕಿ ಮತ್ತು ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜಿ ಮತ್ತು ಸಂಧಾನದ ಮೂಲಕ ಇತ್ಯರ್ಥಪಡಿಸುವುದು ಅದಾಲತ್‌ನ ಮುಖ್ಯ ಉದ್ದೇಶವಾಗಿತ್ತು ಎಂದರು.

ಅದಾಲತ್‌ನಲ್ಲಿ ಸಾವಿರಾರು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಇದರಲ್ಲಿ ಅನೇಕ ವ್ಯಾಜ್ಯಪೂರ್ವ ಪ್ರಕರಣಗಳು ಕೂಡ ಸೇರಿವೆ, ಅವುಗಳು ನ್ಯಾಯಾಲಯಕ್ಕೆ ಹೋಗುವುದನ್ನು ತಡೆಯುತ್ತದೆ. ಲೋಕ್ ಅದಾಲತ್ ಮೂಲಕ ಅಪಘಾತ ವಿಮೆ ಪ್ರಕರಣಗಳು, ಚೆಕ್ ಬೌನ್ಸ್, ವಿವಾಹ ವಿವಾದಗಳು, ಬ್ಯಾಂಕ್ ಸಾಲ ಮರುಪಾವತಿ ಪ್ರಕರಣಗಳು ಮತ್ತು ಗ್ರಾಹಕರ ದೂರುಗಳು ಸೇರಿದಂತೆ ವಿವಿಧ ರೀತಿಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ದೀರ್ಘಕಾಲದಿಂದ ಬಾಕಿ ಉಳಿದಿದ್ದ ಪ್ರಕರಣಗಳಿಗೂ ಪರಿಹಾರ ದೊರಕಿದೆ. ರಾಜಿ ಸಂಧಾನದ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿದವರಿಗೆ ಸಂಪೂರ್ಣ ನ್ಯಾಯಾಲಯ ಶುಲ್ಕ ಮರುಪಾವತಿ ಮಾಡಲಾಗಿದೆ ಎಂದು ತಿಳಿಸಿದರು. ವಿವಿಧ ಬಗೆಯ ಪ್ರಕರಣ ಇತ್ಯರ್ಥ: ಜಿಲ್ಲೆಯಲ್ಲಿನ 09 ಕೌಟುಂಬಿಕ ಪ್ರಕರಣಗಳಲ್ಲಿನ ವಿವಾದಗಳನ್ನು ಬಗೆಹರಿಸಿ ದೂರ-ದೂರ ಇದ್ದ ಪತಿ-ಪತ್ನಿಯನ್ನು ಒಂದು ಮಾಡಿ ಒಟ್ಟಿಗೆ ಜೀವನ ಮಾಡುವಂತೆ ಸಂಧಾನ ಮಾಡಲಾಯಿತು.

ಸುಮಾರು 85 ಚೆಕ್ ಬೌನ್ಸ್ ಪ್ರಕರಣಗಳನ್ನು ರಾಜಿ ಮುಖಾಂತರ ಸಂಧಾನ ಮಾಡಿ ಸುಮಾರು ರೂ. 2,48,41,056/- ಗಳನ್ನು ಪರಿಹಾರವಾಗಿ ನೀಡಲಾಯಿತು.

44 ಬ್ಯಾಂಕ್ ದಾವೆಗಳನ್ನು ರಾಜಿ ಮೂಲಕ ಸಂಧಾನ ಮಾಡಿ ರೂ. 1,83,17,626 ಗಳನ್ನು ಮತ್ತು 18 ಹಣವಸೂಲಾತಿ ದಾವೆಗಳನ್ನು ರಾಜಿ ಸಂಧಾನದ ಮೂಲಕ ಮುಕ್ತಾಯಗೊಳಿಸಿ ರೂ. 46,15,167/- ಗಳನ್ನು ಪಾವತಿಸಲಾಗಿದೆ. ಅದೇ ರೀತಿ 48 ಅಪಘಾತ ಪರಿಹಾರದ ಪ್ರಕರಣಗಳನ್ನು ಮುಕ್ತಾಯಗೊಳಿಸಿ ರೂ. 5,46,85,000/- ಗಳನ್ನು ಪರಿಹಾರವಾಗಿ ನೀಡಿದೆ.

ನೌಕರರ ಪರಿಹಾರದ ಕಾಯ್ದೆ ಅಡಿ 04 ಪ್ರಕರಣಗಳಲ್ಲಿ 54,80,000/- ರೂಗಳನ್ನು ಪರಿಹಾರವಾಗಿ ಕೊಡಮಾಡಲಾಗಿದೆ. 17 ಪಾಲುವಿಭಾಗ ದಾವೆಗಳನ್ನು, 20 ಎಂ.ವಿ.ಸಿ. ಅಮಲ್ದಾರಿ ಪ್ರಕರಣಗಳನ್ನು ಹಾಗೂ 71 ಇತರೆ ಅಮಲ್ದಾರಿ ಪ್ರಕರಣಗಳನ್ನು ಮುಕ್ತಾಯಗೊಳಿಸಿ ರೂ. 45,930,818/- ಗಳನ್ನು ಪರಿಹಾರವಾಗಿ ಕೊಡಮಾಡಲಾಗಿದೆ.

14 ಜೀವನಾಂಶ ಕೋರಿ ಹಾಕಿದ ಅರ್ಜಿಗಳು ರಾಜಿ ಸಂಧಾನ ಮೂಲಕ ತೀರ್ಮಾನಗೊಂಡು ರೂ. 4,17,000/- ಗಳನ್ನು ಪರಿಹಾರವಾಗಿ ಕೊಡಮಾಡಲಾಗಿದೆ.

ಹಲವಾರು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಈ ಲೋಕ್ ಅದಾಲತ್ ನಲ್ಲಿ ರಾಜಿ ಸಂಧಾನದ ಮೂಲಕ ಮುಕ್ತಾಯಗೊಳಿಸಲಾಗಿದೆ ಎಂದು ತಿಳಿಸಿದರು. 23 ವರ್ಷದಿಂದ ಬಾಕಿ ಇದ್ದ ಸಿವಿಲ್ ದಾವೆ ನಂ.335/2002 ಈ ಪ್ರಕ 'ರಣವನ್ನು, 09

ವರ್ಷದಿಂದ ಬಾಕಿ ಇದ್ದ ಸಿವಿಲ್ ದಾವೆ ನಂ.643/2016 ಇವುಗಳನ್ನು ಹಾಗೂ 05 ವರ್ಷಕ್ಕಿಂತ ಮೇಲ್ಪಟ್ಟು ಬಾಕಿ ಇದ್ದ 04 ಚೆಕ್ ಬೌನ್ಸ್ ಪ್ರಕರಣಗಳನ್ನು ರಾಜಿ ಸಂಧಾನದ ಮೂಖಾಂತರ ಮುಕ್ತಾಯಗೊಳಿಸಲಾಗಿದೆ.

ಎಲ್ಲಾ ಪಾಲುದಾರರ ಸಹಕಾರ:

ಈ ಅದಾಲತ್‌ನ ಯಶಸ್ಸಿಗೆ ನ್ಯಾಯಾಧೀಶರು, ವಕೀಲರು, ಪೊಲೀಸ್ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಮತ್ತು ವಿಮಾ ಕಂಪನಿಗಳು ಸೇರಿದಂತೆ ಎಲ್ಲ ಪಾಲುದಾರರ ಸಹಕಾರ ಕಾರಣವಾಗಿದೆ ಎಂದು ತಿಳಿಸಿದರು.

ಲೋಕ್ ಅದಾಲತ್‌ನ ಅಂಕಿಅಂಶ:

ಇತ್ಯರ್ಥಗೊಂಡ ಬಾಕಿ ಪ್ರಕರಣಗಳ ಒಟ್ಟು ಸಂಖ್ಯೆ: 7,354 ಪ್ರಕರಣಗಳು.

ವಸೂಲಾದ ಪರಿಹಾರ ಮೊತ್ತ: ರೂ.16,99,82,418 ಕೋಟಿ.

ಇತ್ಯರ್ಥಗೊಂಡ ವ್ಯಾಜ್ಯ ಪೂರ್ವ ಪ್ರಕರಣಗಳು:

3,43,762.

ವಸೂಲಾದ ಪರಿಹಾರ ಮೊತ್ತ: ರೂ. 168,37,95,909 ಕೋಟಿ.

ಇತ್ಯರ್ಥಗೊಳಿಸಿದ ಪ್ರಕರಣಗಳು:

ನ್ಯಾಯಾಲಯದಲ್ಲಿ ದೀರ್ಘಕಾಲದಿಂದ ಬಾಕಿ ಇದ್ದ 9557 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಗುರುತಿಸಲಾಗಿತ್ತು. ಇವುಗಳಲ್ಲಿ 7354 ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ.

ರಾಷ್ಟ್ರೀಯ ಲೋಕ್ ಅದಾಲತ್ ಗೆ ಸಂಬಂಧಿಸಿದಂತೆ ಶನಿವಾರ ಬಳ್ಳಾರಿ

ಜಿಲ್ಲೆಯಲ್ಲಿ ಒಟ್ಟು 13 ನ್ಯಾಯಪೀಠಗಳನ್ನು (ಬೆಂಚ್) ಸ್ಥಾಪಿಸಲಾಗಿತ್ತು. ವಿವಾದಗಳ ಪರಿಹಾರಕ್ಕೆ ಮತ್ತು ಸಮುದಾಯದಲ್ಲಿ ಪರಸ್ಪರ ವಿಶ್ವಾಸವನ್ನು ಹೆಚ್ಚಿಸಲು ಲೋಕ್ ಅದಾಲತ್‌ಗಳು ಪರಿಣಾಮಕಾರಿ ಸಾಧನಗಳಾಗಿವೆ. ಲೋಕ್ ಅದಾಲತ್‌ಗಳು ವಿವಾದಗಳನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸುವಲ್ಲಿ ಎಷ್ಟು ಯಶಸ್ವಿಯಾಗಿವೆ ಎಂಬುದನ್ನು ತೋರಿಸುತ್ತವೆ. ಇದು ನ್ಯಾಯಾಂಗದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಮತ್ತು ಸಮಾಜದಲ್ಲಿ ಸೌಹಾರ್ದಯುತ ವಾತಾವರಣವನ್ನು ನಿರ್ಮಿಸಲು ಸಹಾಯಮಾಡುತ್ತದೆ. ಈ ರಾಷ್ಟ್ರೀಯ ಲೋಕ್

ಅದಾಲತ್ ಯಶಸ್ವಿಯಾಗಲು ಕಾರಣರಾದ ಎಲ್ಲರಿಗೂ ಅಭಿನಂದನೆ ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ

ಕಾರ್ಯದರ್ಶಿಗಳು ಹಾಗು ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ರಾಜೇಶ್.ಎನ್ ಹೊಸಮನೆ ಸೇರಿದಂತೆ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು, ಅಧಿಕಾರಿಗಳು ಇದ್ದರು.

# ಅಧಿಕಾರ ಇರುತ್ತೆ ಹೋಗುತ್ತೆ ಯಾರಿಗೂ ಶಾಶ್ವತವಲ್ಲ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ: ಬಳ್ಳಾರಿ ನಗರದ ಅಭಿವೃದ್ಧಿಗೆ, ಮೂಲ ಸೌಲಭ್ಯ ಕಲ್ಪಿಸಲು 2026-27ನೇ ಸಾಲಿನ ಮಹಾನಗರ ಪಾಲಿಕೆಯ ಬಜೆಟ್ ಸಿದ್ಧಪಡಿಸಿ ಮಂಡಿಸಲಾಗುವುದು ಎಂದು ಪಾಲಿಕೆ ಮೇಯರ್ ಪಿ.ಗಾದೆಪ ಅವರು ಹೇಳಿದರು. ನಗರದ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆ ಬಳಿಕ ಮಾತನಾಡಿದರು. ನಗರದ ಅಭಿವೃದ್ಧಿಗೆ ಸಂಬಂಧಿಸಿ ನಾನಾ ಸಂಘ ಸಂಸ್ಥೆಯ ಪದಾಧಿಕಾರಿಗಳು, ನಾಗರಿಕರು ನೀಡಿದ ಸಲಹೆ ಸೂಚನೆ ಮೇರೆಗೆ ಕನಸಿನ ಬಳ್ಳಾರಿಯ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು 2026-27ನೇ ಸಾಲಿನ ಬಜೆಟ್ ಮಂಡಿಸಲಾಗುವುದು. ಅಧಿಕಾರ ಇರುತ್ತೆ ಹೋಗುತ್ತೆ, ಯಾರಿಗೂ ಶಾಶ್ವತವಲ್ಲ, ನನ್ನ ಅವಧಿಯಲ್ಲಿ ಕೈಗೆತ್ತಿಕೊಂಡ ಅಭಿವೃದ್ಧಿ ಕೆಲಸಗಳು ಮಾತಾಡಬೇಕು ಎನ್ನುವ ಕನಸು ನನ್ನದು, ಎಲ್ಲರ ಸಹಕಾರ ಅತ್ಯಗತ್ಯ ಎಂದರು. ನಗರದ ಸ್ವಚ್ಛತೆ, ಸುಂದರ ನಗರವನ್ನಾಗಿ ಮಾಡಲು ನಗರದ ಪ್ರತಿಯೊಬ್ಬ ನಾಗರಿಕರು ಸಹಕರಿಸಬೇಕು, 2060ರ ಜನಸಂಖ್ಯೆ ಬೆಳವಣಿಗೆ ಆಧರಿಸಿ, ಅಂದಾಜಿಸಿ ನಿತ್ಯ ನೀರು ಸರಬರಾಜು ಮಾಡಲು ಕೆ ಎಂ ಆರ್ ಸಿಯಿಂದ 600 ಕೋಟಿ ರೂ.ವೆಚ್ಚದ ಕುಡಿಯುವ ನೀರಿನ ಯೋಜನೆ ಸಿದ್ಧಗೊಳ್ಳುತ್ತಿದೆ. ಬಿಡಾಡಿ ದನಗಳ, ಬೀದಿ ನಾಯಿಗಳ ನಿಯಂತ್ರಣಕ್ಕೆ ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಸುಪ್ರೀಂ ಕೋರ್ಟ್ ಆದೇಶದಂತೆ ನಾಯಿಗಳನ್ನು ಒಂದು ಕಡೆ ಹಾಕಿ ಅವುಗಳಿಗೆ ಆಶ್ರಯ ತಾಣ ಮಾಡಲಾಗುವುದು ಎಂದರು.

# ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ನಗರದಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲು ತೀರ್ಮನವಾಗಿದ್ದು, ಈ ಹಿನ್ನೆಲೆ ಸಮ್ಮೇಳನದ ದಿನಾಂಕ ಘೋಷಣೆ ಮಾಡುವ ಕುರಿತು, ನಗರದಲ್ಲಿ ಅಚ್ಚುಕಟ್ಟಾಗಿ, ಅದ್ದೂರಿಯಾಗಿ ಸಮ್ಮೇಳನ ಆಯೋಜಿಸುವ ಕುರಿತು ಬಳ್ಳಾರಿ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ನಗರ ಶಾಸಕ ನಾರಾ ಭರತ್ ರೆಡ್ಡಿ, ಮಾಜಿ ಸಚಿವ ಬಿ.ನಾಗೇಂದ್ರ ಅವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಚರ್ಚೆ ನಡೆಸಿದರು. ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ವೇಳೆ ಬುಧವಾರ ಮದ್ಯಾಹ್ನ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಗ್ರಾಮಾಂತರ ಶಾಸಕ ಬಿ. ನಾಗೇಂದ್ರ ಅವರನ್ನು ಭೇಟಿ ಮಾಡಿ ಸಮ್ಮೇಳನದ ಕುರಿತು ಚರ್ಚಿಸಿದರು. ಬಳ್ಳಾರಿಯ ಬಹುನಿರೀಕ್ಷಿತ ಬೇಡಿಕೆಯಾದ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ದಿನಾಂಕ ಘೋಷಣೆ ಮಾಡಬೇಕು, ಅಚ್ಚುಕಟ್ಟಾಗಿ, ಅದ್ದೂರಿಯಾಗಿ ಆಯೋಜಿಸುವ ಕುರಿತು ಅಗತ್ಯ ತೀರ್ಮಾನ, ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಗ್ರಾಮಿಣ ಶಾಸಕ ಬಿ. ನಾಗೇಂದ್ರ, ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು, ಬಳ್ಳಾರಿಯಲ್ಲಿ ಸಮ್ಮೇಳನ ಅರ್ಥಪೂರ್ಣವಾಗಿ ಆಯೋಜಿಸಲು ಅತ್ಯಂತ ಉತ್ಸಾಹ ವ್ಯಕ್ತಪಡಿಸಿದ್ದಾರೆ. ಅತೀ ಶೀಘ್ರದಲ್ಲೇ ಸಮ್ಮೇಳನದ ದಿನಾಂಕವನ್ನು ಸರ್ಕಾರ ಅಧಿಕೃತವಾಗಿ ಘೋಷಿಸುವ ಸಾಧ್ಯತೆ ಇದೆ ಎಂದು ಪಾಲಿಕೆ ಮೇಯರ್ ಪಿ.ಗಾದೆಪ್ಪ ಅವರು ತಿಳಿಸಿದ್ದಾರೆ.

# ಜೋಳದಾಪಕಾ ಗ್ರಾಮಕ್ಕೆ ತಾ.ಪಂ ಅಧಿಕಾರಿ ಭೇಟಿ

**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**



ಭಾಲ್ಕಿ ತಾಲೂಕಿನ ವಿವಿಧೆಡೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್ ಭೇಟಿ ॥ ಬಯಲು ಬಹಿರ್ದೆಸೆಗೆ ತೆರಳಿದ ಜನರಿಗೆ ತಡೆ ಪ್ರತಿ ಕುಟುಂಬ ಶೌಚಾಲಯ ಹೊಂದಬೇಕು

ತಾಲೂಕಿನ ವಿವಿಧ ಗ್ರಾಮಗಳಿಗೆ ತಾಲೂಕು ಪಂಚಾಯತಿ ಅಧಿಕಾರಿ ಸೂರ್ಯಕಾಂತ ಬಿರಾದಾರ್ ನೇತೃತ್ವದ ಅಧಿಕಾರಿಗಳ ತಂಡ ಭೇಟಿ ನೀಡಿ ಬಯಲು ಬಹಿರ್ದೆಸೆಗೆ ತೆರಳಿದ ಜನರಿಗೆ ತಡೆದು ಶೌಚಾಲಯ ನಿರ್ಮಾಣ ಮಾಡಿಕೊಳ್ಳುವಂತೆ ಸಲಹೆ ನೀಡಿದರು. ತಾಲೂಕಿನ ಕೋನಮೇಳಕುಂದಾ, ಜೋಳದಾಪಕಾ, ಚಿಕಲಚಂದಾ ಗ್ರಾಮಗಳಿಗೆ ಶುಕ್ರವಾರ ಬೆಳ್ಳಂಬೆಳ್ಳಿಗೆ ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿ ಶೌಚಾಲಯ ನಿರ್ಮಾಣ ಕುರಿತು ಜಾಗೃತಿ ಮೂಡಿಸಿದರು.

ತಗ್ಗು ಪ್ರದೇಶ, ಮುಖ್ಯ ರಸ್ತೆ ಬದಿ ಸೇರಿ ವಿವಿಧೆಡೆ ಬಯಲು ಬಹಿರ್ದೆಸೆಗೆ ತೆರಳಿದ ಜನರನ್ನು ತಡೆದು ಶೌಚಾಲಯ ಹೊಂದಿದ್ದರೆ ಕಡ್ಡಾಯವಾಗಿ ಬಳಸಬೇಕು. ಶೌಚಾಲಯ ಇಲ್ಲದಿದ್ದರೆ ಪ್ರತಿ ಕುಟುಂಬ ಸರಕಾರ ನೀಡುವ ಸಹಾಯಧನ ಬಳಸಿಕೊಂಡು ಶೌಚಾಲಯ ನಿರ್ಮಿಸಿ ಕೊಳ್ಳಬೇಕು ಎಂದರು. ಕೋನಮೇಳಕುಂದಾ, ಜೋಳದಾಪಕಾ ಸೇರಿ ಹಲವು ಗ್ರಾಮ ಪಂಚಾಯತಿಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯತಿಗಳನ್ನಾಗಿ ಘೋಷಣೆ ಮಾಡಲಾಗಿದೆ. ಬಹುತೇಕ ಕುಟುಂ ಬಗಳು ಶೌಚಾಲಯ ಹೊಂದಿವೆ. ಆದರೂ ಕೂಡ ಹೆಚ್ಚಿನ ಜನರು ಮುಖ್ಯ ರಸ್ತೆಯ ಪಕ್ಕದಲ್ಲೇ ಇಂದಿಗೂ ಬಯಲು ಬಹಿರ್ದೆಸೆ ಹೋಗುತ್ತಿರುವುದು ಬೇಸರ ತರಿಸಿದೆ.

ಕೋನಮೇಳಕುಂದಾ ಮುಖ್ಯ ರಸ್ತೆ ಮೇಲಿಂದಲೇ ಪ್ರತಿ ದಿನ ತೆರಳುವ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಬಯಲು ಬಹಿರ್ದೆಸೆ ಹೋಗುವ ಜನರನ್ನು ಕಂಡು ತೀವ್ರ ಅಸಮಧಾನ ವ್ಯಕ್ತಪಡಿ ಸಿದ್ದಾರೆ. ಶೌಚಾಲಯ ಉತ್ತಮ ಪರಿಸರ ನಿರ್ಮಾಣಕ್ಕೆ ಸಹಕಾರಿ. ಹಾಗಾಗಿ ಮುಂದಿನ ಒಂದು ತಿಂಗಳೊಳಗೆ ಪ್ರತಿ ಕುಟುಂಬ ಶೌಚಾಲಯ ನಿರ್ಮಿಸಿಕೊಂಡು ಬಳಕೆ ಮಾಡಬೇಕು. ಈ ಬಗ್ಗೆ ಗ್ರಾಮ ಪಂಚಾಯತಿ ಜನಪ್ರತಿನಿಧಿಗಳು, ಅಬಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ, ಅಂಗನವಾಡಿ, ಆಶಾ ಕಾರ್ಯಕರ್ತೆ-ಯರು ನಿರಂತರವಾಗಿ ಜನರಲ್ಲಿ ಜಾಗೃತಿ ಮೂಡಿಸಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿಸಲು ಶ್ರಮಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ ಸಂತೋಷ ಮಾನಕಾರ, ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ, ವಿವಿಧ ಸಂಘ ಸಂಸ್ಥೆಯ ಪ್ರಮುಖರು ಇದ್ದರು.

# ಗಡಿ ಕನ್ನಡಿಗರ ಉತ್ಸವ ಮೈಸೂರ ಗಾಯಕರಿಂದ ಗಾಯನ ಕು. ಶಿವಾನಿ ಸ್ವಾಮಿಗೆ ಪ್ರಶಸ್ತಿ ಪ್ರದಾನ




ಮಲ್ಲಮ್ಮ ನುಡಿ ವಾರ್ತೆ

ಬೀದರ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ಜಿಲ್ಲಾ ರಂಗಮಂದಿರದಲ್ಲಿ ವಿಶ್ವ ಕನ್ನಡಿಗರ ಸಂಸ್ಥೆ ಕರ್ನಾಟಕ ವತಿಯಿಂದ ಪದ್ಮಶ್ರೀ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ವೇದಿಕೆ ಮೂಲಕ ಮಂಗಳವಾರ ರಾಜ್ಯ ಮಟ್ಟದ ಗಡಿ ಕನ್ನಡಿರ ಉತ್ಸವ 70 ನೇ ಕರ್ನಾಟಕ ರಾಜ್ಯೋತ್ಸವಮ ಅದೂರಿಯಾಗಿ ಜರುಗಿತು. ಮೈಸೂರು ದಸರಾದಲ್ಲಿ ಹಾಡಿರುವ ಮಂಡ್ಯ ಜಿಲ್ಲೆಯ ಖ್ಯಾತ ಗಾಯಕರಾದ ಪಂಡಿತ ಪುಟ್ಟರಾಜ ಗವಾಯಿ ರವರ ಶಿಷ್ಯರಾದ ಡಾ. ಶ್ರೀಕಾಂತ ಚಿಮಲ್ ಗುಂಡಪ್ಪ ಕಟ್ಟಿ ದತ್ತುರಾಜ ಕೀರ್ತಿಕರ್, ವಿಜಯಲಕ್ಷ್ಮಿ ಕಟ್ಟಿ ಬೀದರನ ಜಗನ್ನಾಥ ಬೇಂದ್ರ ಶಿವರಾಜ ತಟಪಳ್ಳಿ ಶೇಷಪ್ಪ ಚಿಟ್ಟಾ ಸಿದ್ದಲಿಂಗ ಯಲ್ಲಾಲಿಂಗ, ರಂಗಭೂಮಿ ಕಲಾವಿದೆ ಕಾವೇರಿ ಕಲಬುರ್ಗಿ ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿ ತಿಳಿಸಿಕೊಡುವ ಹಾಡುಗಳನ್ನು ಹಾಡಿದರು. ನಾಡುಗೀತೆ ದಿಯಾನ್ ನಾದವೇದಿಕೆ ಸಂಗೀತ ಫೌಂಡೇಷನ್ ತಂಡದವರು ಹಾಡಿದರು. ಕರ್ನಾಟಕ ಪರ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಾ. ವಿಶ್ವನಾಥ ಜಿ ಪಿ ಬೆಂಗಳೂರು ರವರು ಅಧ್ಯಕ್ಷತೆಯಲ್ಲಿ ರಾಷ್ಟ್ರ ಮಟ್ಟದ ಕರ್ನಾಟಕ ಕಾಯಕ ರತ್ನ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿಯನ್ನು ಕರ್ನಾಟಕ ರಾಜ್ಯೋತ್ಸ ಪ್ರಶಸ್ತಿ ಪುರಸ್ಕೃತರಾದ ಮಡಿವಾಳಯ್ಯ ಶಿವಲಿಂಗಯ್ಯಾ ಸಾಲಿ ಇಂಡಿಯಾನ ಐಡಲ ಖ್ಯಾತಿ ಸರಿಗಮಪ ಸೀಜನ್ 21 ವಿಜೇತರಾದ ಕು॥ ಶಿವಾನಿ ಶಿವದಾಸ ಸ್ವಾಮಿ, ವಿದೇಶದಲ್ಲಿ ಕನ್ನಡ ಸೇವೆ ಮಾಡುತ್ತಿರುವ ಭೀಮ್ ನಿಲಕಂಠ ಹಂಗರಗಿ, ರವಿದಾಸ ಕಾಂಬಳೆ ಡಾ ದೊಡ್ಡಪ್ಪ ಪೂಜಾರಿ, ಹೊರರಾಜ್ಯದಲ್ಲಿ ಕನ್ನಡ ಸೇವೆ ಮಾಡುತ್ತಿರುವ ಡಾ. ರಮೇಶ ಮೂಲಗೆ ಜಿ ಚಂದ್ರಕಾಂತ ಡಾ. ಕೆ ಎಸ್ ಬಂಧು ಸಿದ್ದೇಶ್ವರ, ಜಗನ್ನಾಥ ಬೇಂದ್ರೆ, ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪಂಚಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ಅಮೃತರಾವ ಚಿಮಕೊಡ್ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ವಿಭಾಗಿ ಸಂಚಾಲಕ ಉಮೇಶಕುಮಾರ ಸೋರಳ್ಳಿಕರ್ ವೀರ ಕನ್ನಡಿಗರ ಸೇನೆ ರಾಜ್ಯಾಧ್ಯಕ್ಷ ಅಮೃತ ಪಾಟೀಲ್ ಉಪಾಧ್ಯಕ್ಷ ರವಿ ವಂಟೆ, ಶಿವಾಜ ಚಹ್ವಾನ ಜಿಲ್ಲಾಧ್ಯಕ್ಷ ಮುಕೇಶ ಶಾಹಾಗಂಜ್ ಉಪಾಧ್ಯಕ್ಷ ಬಸವರಾಜ ಜಡಗೆ, ಪ್ರಧಾನ ಕಾರ್ಯದರ್ಶಿ ಅಂಬಾದಾಸ ಸೈನೆ ಸಂದೀಪ ಚಾಂಬೋಳ, ತಾಲ್ಲೂಕಾಧ್ಯಕ್ಷ ಬಾಬುರಾವ ಕೆ ಬಿಟ್ಟೆ, ನಗರ ಅಧ್ಯಕ್ಷ ಬಗವಾನ ಯಾದವ, ತಾಲ್ಲೂಕ ಕಾರ್ಯದರ್ಶಿ ಕುಪೇಂದ್ರ ಹೊಸಮನಿ ಬಿದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಜಗನ್ನಾಥ ಸೂರ್ಯವಂಶಿ, ಕರ್ನಾಟಕ ರಕ್ಷಣಾ ವೇದಿಕೆ ಕಾವುಲುಪಡೆ ರಾಜ್ಯ ಉಪಾಧ್ಯಕ್ಷ ವಿ ಎಂ ಭಂಗೂರೆ, ಜಿಲ್ಲಾಧ್ಯಕ್ಷ ಅವಿನಾಶ ಬುದೇರಾ-ಕರ್ ಕನ್ನಡಿಗರ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಶ್ರೀಕಾಂತ ಭವಾನಿ ಸಮಾಜ ಸೇವಕರಾದ ಶಶಿಕುಮಾರ ಎಸ್ ಪೊಲೀಸ್ ಪಾಟೀಲ್ ವಿಶ್ವ ಕನ್ನಡಿಗರ ಸಂಸ್ಥ ಉಪಾಧ್ಯಕ್ಷ ಪ್ರಕಾಶ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಖಜಾಂಚಿ ಶಾರದ ಸದಸ್ಯರಾದ ತೇಜಮ್ಮಾ ಸಂಗೀತಾ ರವಿಕುಮಾರ ಕಸ್ತೂರಬಾಯಿ ಉಪಸ್ಥಿತರಿದರು. ಕಾರ್ಯಕ್ರಮ ನಿರೂಪಣೆ ಡಾ. ಸುನೀತಾ ಬಿಕ್ಲೆ ಮಾಡಿದರು.

# ವಿವಿಧ ರಸ್ತೆ ಕಾಮಗಾರಿಗಳಿಗೆ ಗುದ್ದಲಿ ಪೂಜೆ.



ಪೀಣ್ಯ.: ದಾಸರಹಳ್ಳಿ: ಕ್ಷೇತ್ರದಲ್ಲಿ ಹಲವು ಕಡೆ ಜನರು ಓಡಾಡಲು ತೊಂದರೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಅಂತಹ ರಸ್ತೆಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸಲು ಚಾಲನೆ ನೀಡಿದ್ದೇವೆ. ಹಂತ ಹಂತವಾಗಿ ಕ್ಷೇತ್ರದೆಲ್ಲೆಡೆ ರಸ್ತೆಗಳು ಹಾಗೂ ಚರಂಡಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಎಸ್.ಎಂ.ಆರ್ ಲೇಔಟ್, ಕೆಂಪಾಪುರ ಮುಖ್ಯರಸ್ತೆಯ ಎಸ್.ಎಂ.ಶಾಲೆಯ ರಸ್ತೆ ಅಭಿವೃದ್ಧಿ ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಉತ್ತಮ ಗುಣಮಟ್ಟದ ರಸ್ತೆ ನಿರ್ಮಾಣ ಮಾಡಬೇಕು. ಕಳಪೆ ಗುಣಮಟ್ಟದ ರಸ್ತೆಗಳಿಗೆ ಬಿಲ್ ಪಾವತಿ ಮಾಡುವುದಿಲ್ಲ' ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಈ ವೇಳೆ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಅವುಗಳನ್ನು ಬಗೆಹರಿಸಲು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ರಾಜೇಂದ್ರ, ಪುರಸಭೆ ಮುಖ್ಯ ಅಧಿಕಾರಿ ಮಂಜುನಾಥ್, ಮಹಿಳಾ ಮುಖಂಡರಾದ ಭಾಗ್ಯಮ್ಮ , ಗಿರೀಶ್, ಅಬ್ಬಿಗೆರೆ ಮಂಜುನಾಥ್ ಗೌಡ, ಅಭಿಲಾಶ್ ಮರಿಸ್ವಾಮಿ ಸೇರಿದಂತೆ

ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಜೆಜೆಎಂ ತಪ್ಪಿತಸ್ಥರ ವಿರುದ್ಧ ಕ್ರಮವಾಗಲಿ: ಚವ್ಹಾಣ

**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**
ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ಜಲ ಜೀವನ ಮಿಷನ್ (ಜೆಜೆಎಂ) ಯೋಜನೆಯ ಕಾಮಗಾರಿಗಳನ್ನು ಕಳಪೆಯಾಗಿ ಮಾಡಿದ್ದು, ತಪ್ಪಿತಸ್ಥ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಆಗ್ರಹಿಸಲಾಗಿದೆ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಶಾಸಕರಾದ ಪ್ರಭು ಚವ್ಹಾಣ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಗೆ ಜೆಜೆಎಂ ಯೋಜನೆಯ ಅನುಷ್ಠಾನ ಕುರಿತಂತೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಕೇಳಿದ್ದರು. ಇದಕ್ಕೆ ಸಚಿವರು ಲಿಖಿತವಾಗಿ ಉತ್ತರಿಸಿದ್ದು, ಔರಾದ(ಬಿ) ಮತಕ್ಷೇತ್ರದಲ್ಲಿ 276 ಕಾಮಗಾರಿಗಳು ಕೈಗೊಳ್ಳಲಾಗಿದೆ. 12 ಕಾಮಗಾರಿಗಳು ಕಳಪೆಯಾಗಿರುತ್ತವೆ ಎಂದು ಮಾಹಿತಿ ನೀಡಿದ್ದಾರೆ.



ಜಲ ಜೀವನ ಮಿಷನ್ (ಜೆಜೆಎಂ) ಯೋಜನೆಯಡಿ ಔರಾದ(ಬಿ) ಮತಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ಕಾಮಗಾರಿಗಳಲ್ಲಿ 15 ರಿಂದ 20 ಪ್ರತಶತ ಕೆಲಸಗಳು ಮಾತ್ರ ಸರಿಯಾಗಿ ನಡೆದಿದೆ. ಉಳಿದಂತೆ ಎಲ್ಲ ಕಾಮಗಾರಿಗಳು ಕಳಪೆಯಾಗಿವೆ. ಅಧಿಕಾರಿಗಳು ವಾಸ್ತವ ಸಂಗತಿಯನ್ನು ಬಚ್ಚಿಟ್ಟು ಸುಳ್ಳು ಮಾಹಿತಿ ಒದಗಿಸಿದ್ದಾರೆ ಎಂದು ಶಾಸಕರು ಕಿಡಿ ಕಾರಿದ್ದಾರೆ.

ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿ ವರ್ಷ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತದೆ. ಬೇಸಿಗೆ ಅವಧಿಯಲ್ಲಿ ಸಮಸ್ಯೆ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂಬ ಉದ್ದೇಶದಿಂದ ಹಿಂದೆ ಸಚಿವನಾಗಿದ್ದಾಗ ಬಹಳಷ್ಟು ಪರಿಶ್ರಮಪಟ್ಟು 250 ಕೋಟಿಗೂ ಹೆಚ್ಚಿನ ಅನುದಾನ ತರಲಾಗಿದೆ. ಕ್ಷೇತ್ರದ ಎಲ್ಲ ಗ್ರಾಮ ಮತ್ತು ತಾಂಡಾಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಆದರೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸೇರಿಕೊಂಡು ಸಂಪೂರ್ಣ ಯೋಜನೆಯನ್ನು ವಿಫಲಗೊಳಿಸಿದ್ದಾರೆ ಎಂದು ಜನರಿಂದ ದೂರುಗಳು ಬರುತ್ತಿವೆ.

ಕೆಲವೊಂದು ಗ್ರಾಮಗಳಲ್ಲಿ ನೀರು ಸರಬರಾಜು ಆಗದಿದ್ದರೂ ಕೂಡ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಆಮೀಷ ನೀಡಿ ಹರ್ ಘರ್ ಜಲ್ ಘೋಷಣೆ ಮಾಡಿರುವುದು ಕಂಡುಬಂದಿದೆ. ಸಚಿವರು ಅಧಿಕಾರಿಗಳು ನೀಡಿದ ಮಾಹಿತಿಯನ್ನು ಪರಿಶೀಲಿಸದೇ ಒದಗಿಸಿದ್ದಾರೆ. ಕಾಮಗಾರಿಯ ಬಗ್ಗೆ ಮುಖ್ಯಮಂತ್ರಿಗಳು, ಸಚಿವರು ಸೇರಿದಂತೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ. ಆದರೆ ಈವರಗೆ ಯಾವುದೇ ಕ್ರಮವಾಗಿಲ್ಲ.

ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಜರುಗಿಸಿ ಕಾಮಗಾರಿ ಸರಿಪಡಿಸುವಂತೆ ಕೋರಲಾಗಿದೆ. ಇದು ಕುಡಿಯುವ ನೀರಿಗೆ ಸಂಬಂಧಿಸಿದ ಗಂಭೀರ ವಿಷಯವಾಗಿದ್ದು ಕಾಮಗಾರಿ ಸರಿಪಡಿಸುವ ವರೆಗೆ ನಾನು ಸುಮ್ಮನಿರುವುದಿಲ್ಲ ಎಂದು ಶಾಸಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾಧಿಕಾರಿ ಕಚೇರಿಗೆ ಬಾಂಬ್ ಬೆದರಿಕೆ ಕರೆ ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ

ಮಲ್ಲಮ್ಮ ನುಡಿ ವಾರ್ತೆ



**ಮಲ್ಲಮ್ಮ ನುಡಿ ವಾರ್ತೆ ಬೀದರ್ :** – ನಗರದ ಚಿಕ್ಕಪೇಟೆಯಲ್ಲಿರುವ ಬೀದರ್ ಜಿಲ್ಲಾಧಿಕಾರಿ ಕಚೇರಿಗೆ ಶುಕ್ರವಾರ ಇಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಲಾಯಿತು,

ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಬಂದು, ಕಚೇರಿಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಯನ್ನು ಹೊರಗೆ ಕಳಿಸಿದರು. ಬಳಿಕ ಶ್ವಾನದಳ, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಯಾವುದು ಸ್ಫೋಟಕ ಪತ್ತೆಯಾಗದ ಹಿನ್ನೆಲೆಯಲ್ಲಿ ಈ ಒಂದು ಬೆದರಿಕೆಯನ್ನು ಹೆದರಿಸುವ ಈ ರೀತಿ ಕೃತ್ಯ ಎಸೆಗಿರುವುದು ಗಮನಕ್ಕೆ ಬಂದಿರುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ,

ಬೀದರ್ ಜಿಲ್ಲಾಧಿಕಾರಿ ಕಚೇರಿಯಲ್ಲಿ ಐದು ಆರ್‌ಡಿಎಕ್ಸ್ ಐಇಡಿಗಳನ್ನು ಇಡಲಾಗಿದೆ ಮಧ್ಯಾಹ್ನ 2 ಗಂಟೆ ಒಳಗಾಗಿ ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿಯವರು

ಹೊರಗಡೆ ಕಳಿಸಬೇಕೆಂದು ಇಮೇಲ್ ಸಂದೇಶವನ್ನು ಬಂದಿರುತ್ತದೆ,

ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಪೂಜಾರಿ,ಡಿವೈಎಸ್ ಪಿ ಸನ್ನಿಧಿ, ಸಿಪಿಐ ವಿಜಯ್ ಕುಮಾರ್ ಬಾವಗೆ ಭೇಟಿ ನೀಡಿ ಪರಿಶೀಲಿಸಿದರು,

# ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**
ಪ್ರಸ್ತಕ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸುತ್ತಿರುವ ಉದ್ಯೋಗಿನಿ ಯೋಜನೆ ಮತ್ತು ಚೇತನಾ ಯೋಜನೆ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಧನಶ್ರೀ ಯೋಜನೆ ಹಾಗೂ ಮಾಜಿ ದೇವದಾಸಿ ಪುನರ್ವಸತಿ ಯೋಜನೆಗಳಡಿ ವಿವಿಧ ಸೌಲಭ್ಯಗಳಿಗಾಗಿ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು 2026 ರ ಜನವರಿ 15 ರ ವರೆಗೆ ವಿಸ್ತರಿಸಲಾಗಿದೆ.

ಭೌತಿಕ ಮತ್ತು ಆರ್ಥಿಕ ಗುರಿ ನಿಗದಿ ಪಡಿಸಿದ್ದು, ಈ ಯೋಜನೆಗಳಿಗೆ ಮಹಿಳಾ ಫಲಾನುಭವಿಗಳು ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾವೆಲ್ಲರೂ ಶಾಂತಿ ಹಾಗೂ ಸೌಹಾರ್ದತೆಯಿಂದ ಇರಬೇಕು :ಕುಂಇ



**ಮಲ್ಲಮ್ಮನುಡಿ ವಾರ್ತೆ ಬಸವಕಲ್ಯಾಣ:**
ನಾವೆಲ್ಲರೂ ಶಾಂತಿ ಹಾಗೂ ಸೌಹಾರ್ದತೆಯಿಂದ ಇರಬೇಕು ಎಂದು ಮಂಗಳೂರಿನ ಪ್ರವಚನಕಾರರಾದ ಮೊಹಮ್ಮದ್ ಕುಂಇ ತಿಳಿಸಿದರು.

ಇಲ್ಲಿನ ರಥ ಮೈದಾನದ ಸಭಾಭವನದಲ್ಲಿ ಜಮಾತೆ ಇಸ್ಲಾಮಿ ಹಿಂದ್ ತಾಲೂಕು ಸಂಘಟನೆಯಿಂದ ಅಯೋಜಿಸಿದ 10 ನೇಯ ವಾರ್ಷಿಕ ಸಾರ್ವಜನಿಕ ಕುರ್ ಆನ್ ಪ್ರವಚನದಲ್ಲಿ ಬಾಗವಹಿಸಿ ಮಾತನಾಡಿ ಇಂದು ಮಸೀದಿ. ಚರ್ಚ. ದೇವಾಲಯ. ಕಟ್ಟುವುದೇ ಧರ್ಮ ಎಂದು ಹೇಳಿ ವಿವಾದ ಹುಟ್ಟಿಸಿ ಕೋಮು ಸೌಹಾರ್ದತೆಗೆ ಧಕ್ಕೆ ತರುವ ಕೆಲಸ ನಡೆ–ಯುತ್ತಿದೆ ಆದ್ದರಿಂದಲೇ ಇಂದು ಜಗತ್ತಿನಲ್ಲಿ ಯುದ್ಧಗಳು ನಡೆಯುತ್ತಿದ್ದು ಅನ್ಯಾಯಕ್ಕೆ ಜನರು ಹೆದುರುತ್ತಿದ್ದಾರೆ ಇದರಿಂದ ಅಸಮಾಧಾನ ಅಸಹನೆ ಹೇಚುತ್ತಿವೆ ಎಂದು ತಿಳಿಸಿದರು. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ ಮಾತನಾಡಿ ಉತ್ತಮ ಭಾವನೆಗಳನ್ನು ಬಿಂಬಿಸುವ ಇಂತಹ ಧಾರ್ಮಿಕ ಕಾರ್ಯಕ್ರಮಗಳು ಮೇಲಿಂದ ಮೇಲೆ ಹಮ್ಮಿಕೊಂಡು ಜನರಲ್ಲಿ ಉತ್ತಮ ಜೀವನ ನಡೆಸುವಂತೆ ಪ್ರೇರೇಪಿಸುವಂತಾಗುತ್ತವೆ ಎಂದು ತಿಳಿಸಿದರು. ಕರ್ನಾಟಕ ಉರ್ದು ಅಕಾಡೆಮಿ ಅಧ್ಯಕ್ಷರಾದ ಅಫ್ಜಲ್ ಉಲಮಾ ಮೊಹಮ್ಮದ್ ಅಲಿ ಕಾಜಿ ಮಾತನಾಡಿ ಪವಿತ್ರ ಗ್ರಂಥವು ನಮಗೆ ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಅಲ್ಲದೆ ಸತ್ಯದ ಮಾಗ್ರ ದಲ್ಲಿ ಸಾಗುವಂತೆ ತಿಳಿಸುತ್ತದೆ ಎಂದು ತಿಳಿಸಿದರು. ಹುಲಸೂರಿನ ತಹಸೀಲ್ದಾರರಾದ ಶಿವಾನಂದ ಮೇತೆಣಟಿಜಜಜುಟಿಜಜ ಮಾತನಾಡಿ ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರುವ ಸಂಘಟನೆಗಳಿಗೆ ಶುಭಾಶಯಗಳು ಕೋರಿದರು. ಹುಲಸೂರಿನ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಜಿ ಮಾತನಾಡಿ ಬಸವ ತತ್ವದಲಿ ಇರುವ ವಿಚಾರಗಳನ್ನು ಕುರ್ ಆನ್ ಗ್ರಂಥದಲ್ಲಿಯು ಸಹ ಕಾಣಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಸ್ಲಂ ಜನಾಬ. ಬೇಲೂರಿನ ಉರಿಲಿಂಗ ಪೆದ್ದಿ ಮಠದ ಪೂಜ್ಯ ಶ್ರೀ ಪಂಚಾ–ಕ್ಷರಿ ಮಹಾಸ್ವಾಮಿ. ಕಾಡ ಅಧ್ಯಕ್ಷರಾದ ಬಾಬು ಹೂನ್ನನಾಯಕ. ಬ್ರಹ್ಮಕುಮಾರಿ ಈಶ್ವರೀಯ ಕೇಂದ್ರದ ಸರಸ್ವತಿ ಬಹೆನಜಿ. ಅರ್ಜುನ ಕನಕ. ಮನೋಹರ ಮೈಸೆ. ನರ್ಸಿಂಗರಡ್ಡಿ ಗದಲೇಗಾಂವ. ಯಶೋದಾ ನೀಲಕಂಠ ರಾಠೊಡ. ಕಲಬುರ್ಗಿಯ ಫಾದರ್ ಸಂತೋಷ ಬಾಪು. ಡಾ. ಜಿ. ಎಸ್. ಭುರಳೆ. ಮುಜಾಹಿದ್ ಪಾಷಾ ಖುರೇಷಿ. ಗುರುನಾಥ ಗಡ್ಡೆ. ನಗರ ಸಭೆಯ ಅಧ್ಯಕ್ಷರಾದ ಸಗೀರೋದ್ದಿನ. ಸದಸ್ಯರಾದ ಮುಸಾ. ಮಾಜಿ ಅಧ್ಯಕ್ಷ ಮಿರ ಅಜಹರ್ ಅಲ್ಲಿ ನವರಂಗ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕುರ್ ಆನ್ ಪಠಣ ಜನಾಭ ಹಫೀಜ್ ಮಿರ್ ಫರಕುಂದ ಅಲ್ಲಿ. ಕನ್ನಡ ಅನುವಾದ ಶಾಂತಲಿಂಗ ಮಠಪತಿ. ಶೇಖ ಝುಬಿ ಝುರೆಫರ್ ಸಂಚಾಲನೆ. ಪತ್ರಕರ್ತರಾದ ನೈಮೂದಿನ ಚಾಬುಕ ಸವಾರ ವಂದಿಸಿದರು.

# ನೂತನ ಕಾನೂನು ಕಚೇರಿ ಉದ್ಘಾಟನೆ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:**
ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಅಭಿಯೋಜಕರ ಪಾತ್ರ ಬಹುಮುಖ್ಯವಾಗಿದೆ ಎಂದು ಬಳ್ಳಾರಿ ವಲಯ ಪೊಲೀಸ್ ಉಪ ಮಹಾನಿರೀಕ್ಷಕರಾದ ವರ್ತಿಕಾ ಕಟಿಯಾರ್ ಅವರು ಹೇಳಿದರು.

ಶನಿವಾರ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಆಶ್ರಯದಲ್ಲಿ ನಗರದ ಹಳೆಯ ನ್ಯಾಯಾಲಯ ಆವರಣದ ಅಭಿಯೋಜಕ ಭವನದಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನೂತನ ಕಾನೂನು ಅಧಿಕಾರಿ (ಹಿರಿಯ) ಯವರ ಬಳ್ಳಾರಿ ವಿಭಾಗೀಯ ಕಚೇರಿಯ ಉದ್ಘಾಟನೆ ನೆರವೇರಿಸಿ ಬಳಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅಭಿಯೋಜಕರು ಮತ್ತು ತನಿಖಾಧಿಕಾರಿಗಳ ನಡುವೆ ಸಮನ್ವಯತೆ ಸಾಧಿಸಬೇಕು. ತನಿಖಾಧಿಕಾರಿಗಳು ಯಾವ ರೀತಿಯಾಗಿ ದೋಷರೋಪಣಾ ಪಟ್ಟಿ ತಯಾರಿಸಬೇಕು. ಅದಕ್ಕಿರುವ ಕಾನೂನು ಕ್ರಮ ಹಾಗೂ ಇತರೆ ಕುರಿತಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಕಾನೂನು ಹಿರಿಯ ಅಧಿಕಾರಿಗಳು ಚರ್ಚಿಸಿದ್ದು, ಮುಂದೆಯೂ ನಿರಂತರ ಚರ್ಚಿಸುವರು. ಇದರಿಂದ ಜನಸಾಮಾನ್ಯರಿಗೆ ನ್ಯಾಯ ದೊರಕಿಸಲು ಅಭಿಯೋಜಕರ ಪಾತ್ರದೊಂದಿಗೆ ಪರಿಣಾಮಕಾರಿಯಾಗಿ ಸಾಧ್ಯವಾಗಲಿದೆ ಎಂದು ಹೇಳಿದರು.

ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಮಾತನಾಡಿ, ಪ್ರಸ್ತುತದ ರಾಜ್ಯ ಸರ್ಕಾರವು ಅಸ್ತಿತ್ವಕ್ಕೆ ಬಂದಮೇಲೆ ಕಾನೂನು ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಜಾರಿಗೊಳಿಸಲಾಗಿದೆ. ಸಂತ್ರಸ್ತರು ಇರುವಲ್ಲಿಯೇ ನ್ಯಾಯ ಅವರ ಹತ್ತಿರವಾಗುತ್ತಿದೆ ಎಂದು ಹೇಳಿದರು.

ಈ ಹಿಂದೆ ಪೊಲೀಸ್ ಮತ್ತು ಸಾರ್ವಜನಿಕರ ಮಧ್ಯೆ ಬಹಳಷ್ಟು ಅಂತರವಿತ್ತು. ಈಗ ಯಾವುದೇ ಪ್ರಕರಣವಿರಲಿ ತ್ವರಿತವಾಗಿ ಪತ್ತೆ ಮಾಡಿ ಇತ್ಯರ್ಥಗೊಳಿಸುವ ಮೂಲಕ ಪೊಲೀಸ್ ಇಲಾಖೆಯು ಸಾವರ್ಜನಿಕರೊಂದಿಗೆ ಉತ್ತಮ ಭಾಂದವ್ಯ ಹೊಂದಿ ಜನಸ್ನೇಹಿ ಆಡಳಿತ ಸೇವೆ ನೀಡುತ್ತಿದೆ ಎಂದು ಅಭಿಮತ ವ್ಯಕ್ತಪಡಿಸಿದರು. ನೊಂದ ಜನರಿಗೆ ಸಂತ್ವಾನದ ಮಾತು ಮುಖ್ಯ. ಯಾವುದೇ ಪ್ರಕರಣ ಕೋರ್ಟ್ ಮೆಟ್ಟಿಲೇರುವ ಮೊದಲೇ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಬೇಕು. ಅಪರಾಧಿಗೆ ಶಿಕ್ಷೆಯಾದಾಗ ಮಾತ್ರ ಭಯ ಬರಲಿದೆ. ಅಪರಾಧಿಯೊಬ್ಬ ಶಿಕ್ಷೆಯಿಂದ ತಪ್ಪಿಸಿಕೊಳ್ಳುವಂತೆ ಆಗಬಾರದು. ಸಂತ್ರಸ್ತರಿಗೆ ನ್ಯಾಯ ಒದಗಿಸುವುದು ಅಭಿಯೋಜಕರ ಕರ್ತವ್ಯವಾಗಿದೆ ಎಂದು ಕಿವಿಮಾತು ಹೇಳಿದರು. ಬಳ್ಳಾರಿ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಅವರು ಮಾತನಾಡಿ, ವಕೀಲರು ಮತ್ತು ಕಕ್ಷಿದಾರರು ಪಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನೂತನ ಕಾನೂನು ಅಧಿಕಾರಿ (ಹಿರಿಯ) ಯವರ ಬಳ್ಳಾರಿ ವಿಭಾಗೀಯ ಕಚೇರಿಯು ನಾಲ್ಕು ಜಿಲ್ಲೆಗಳಿಗೆ ಕೇಂದ್ರಸ್ಥಾನವಾಗಿ ಆರಂಭಗೊಂಡಿರುವುದು ನಮ್ಮ ಜಿಲ್ಲೆಯ ಸೌಭಾಗ್ಯವಾಗಿದೆ. ಇಲಾಖೆಗೆ ಬೇಕಾದ ಸೌಲಭ್ಯಗಳನ್ನು ಮಹಾನಗರ ಪಾಲಿಕೆಯಿಂದ ಒದಗಿಸಿ ಕೊಡಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ ಅರಸಿದ್ಧಿ, ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ., ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಜಂಟಿ ನಿರ್ದೇಶಕ ರಮೇಶ್ ಬಾಬು, ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಅಭಿಯಂತರ ಹೇಮರಾಜ.ಕೆ., ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಮಬ್ರಹ್ಮಂ ಸೇರಿದಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅಧಿಕಾರಿಗಳು, ವಕೀಲರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಸವಕಲ್ಯಾಣ :ಇಲ್ಲಿನ ರಥ ಮೈದಾನದ ಸಭಾಭವನದಲ್ಲಿ ಜಮಾತೆ ಇಸ್ಲಾಮಿ ಹಿಂದ್ ತಾಲೂಕು ಸಂಘಟನೆಯಿಂದ ಅಯೋಜಿಸಿದ 10 ನೇಯ ವಾರ್ಷಿಕ ಸಾರ್ವಜನಿಕ ಕುರ್ ಆನ್ ಪ್ರವಚನದ ಕಾರ್ಯಕ್ರಮ ನಿಮಿತ್ತವಾಗಿ ಹಮ್ಮಿಕೊಂಡಿರುವ ವಸ್ತು ಪ್ರದರ್ಶನವನ್ನು ನಾಲೇಜ ಪಾರ್ಕ್ ಪ್ರೌಢಶಾಲೆಯ ಶಿಕ್ಷಕರಾದ ನೂರೂದಿನ ಗೊಬರೆ ಹಾಗೂ ಶಿಕ್ಷಕರಾದ ನಾಗಪ್ಪಾ ನಿಣ್ಣೆ ಹಾಗೂ ವಿಧ್ಯಾರ್ಥಿಗಳು ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ)

# ಬೆಳೆ ವಿಮೆಗೆ ನೋಂದಾಯಿಸಲು ಮನವಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**
ಪ್ರಸ್ತಕ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ (ವಿಮಾ) ಯೋಜನೆಯಡಿ ಕೃಷಿ ಬೆಳೆಗಳಿಗೆ ವಿಮೆ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದ್ದು, ಬಳ್ಳಾರಿ ಮತ್ತು ಕುರುಗೋಡು ತಾಲ್ಲೂಕಿನ ರೈತರು ವಿವಿಧ ಕೃಷಿ ಬೆಳೆಗಳಿಗೆ ಬೆಳೆ ವಿಮೆ ಮಾಡಿಸಿಕೊಳ್ಳಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಗರ್ಜಪ್ಪ ಅವರು ಕೋರಿದ್ದಾರೆ.

ರೈತರು ಬೆಳೆಗಳಿಗೆ ವಿಮೆ ಮಾಡಿಸುವುದರಿಂದ ನೈಸರ್ಗಿಕ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ, ಭೂ ಕುಸಿತ ಮತ್ತು ಬೆಳೆ ಮುಳುಗಡೆ ಸಂದರ್ಭದಲ್ಲಿ ಬೆಳೆ ಹಾನಿಯಾದರೆ, ವಿಮಾ ಯೋಜನೆಯಿಂದ ಅನುಕೂಲವಾಗಲಿದೆ ಹಾಗೂ ಘಟನೆ ಸಂಭವಿಸಿದ 72 ಗಂಟೆಗಳೊಳಗಾಗಿ ಕೃಷಿ ಇಲಾಖೆಗೆ ಅಥವಾ ವಿಮಾ ಕಂಪನಿಗೆ ಮಾಹಿತಿ ನೀಡಬೇಕು. ಇದು ಪರಿಹಾರ ಪಡೆಯಲು ಅತ್ಯಗತ್ಯ ಹಂತವಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಿಂಗಾರು ಬೆಳೆಗಳಾದ ಮಳೆಯಾಶ್ರಿತ ಸೂರ್ಯಕಾಂತಿ ಬೆಳೆಗೆ ಎಕರೆಗೆ 247 ರೂ., ನೀರಾವರಿ ಸೂರ್ಯಕಾಂತಿ ಎಕರೆಗೆ 296 ರೂ., ಕುಸುಬೆ (ಮಳೆ ಆಧಾರಿತ) ಬೆಳೆಗೆ ಎಕರೆಗೆ 188 ರೂ., ನೀರಾವರಿ ಜೋಳ ಎಕರೆಗೆ 275 ರೂ. ಹಾಗೂ ಮೆಕ್ಕೆಜೋಳ ಬೆಳೆಗೆ 391 ರೂ. ಇದ್ದು, ಡಿ.15 ನೋಂದಣಿಗೆ ಕೊನೆಯ ದಿನವಾಗಿದೆ.

ಅದೇರೀತಿಯಾಗಿ ಕಡಲೆ (ಮಳೆ ಆಧಾರಿತ) ಬೆಳೆಗೆ 211 ರೂ., ಕಡಲೆ (ನೀರಾವರಿ) ಎಕರೆಗೆ 234 ರೂ. ಇದ್ದು, ವಿಮೆಗೆ ನೋಂದಾಯಿಸಿಕೊಳ್ಳಲು ಡಿ.31 ಕೊನೆಯ ದಿನವಾಗಿದೆ.

ಬೇಸಿಗೆ ಹಂಗಾಮಿನ ನೀರಾವರಿ ಭತ್ತ (ರೂ.566), ಶೇಂಗಾ (ನೀರಾವರಿ) ಎಕರೆಗೆ 399 ರೂ. ಹಾಗೂ ಸೂರ್ಯಕಾಂತಿ (ನೀರಾವರಿ) ಎಕರೆಗೆ 296 ರೂ. ಇದ್ದು, 2026 ರ ಫೆಬ್ರವರಿ 27 ನೋಂದಣಿಗೆ ಕೊನೆಯ ದಿನವಾಗಿದೆ.

ರೈತರು ಬೆಳೆ ವಿಮೆ ನೋಂದಣಿಗಾಗಿ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ/ರೈತರು ತಮ್ಮ ವ್ಯವಹಾರದ ಬ್ಯಾಂಕ್‌ಗಳಿಗೆ ಸಂಪರ್ಕಿಸಬಹುದು.

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆಯ ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ವಿಶೇಷ ಸಮನ್ವಯ ಸಮಿತಿಗೆ ಅಲಿವೇಲು ಸುರೇಶ್ ನೇಮಕ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:** ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವಾಧ್ಯಕ್ಷರಾದ ಕಾಂಡ್ರ ಬಾಬು ಮತ್ತು ವ್ಯವಸ್ಥಾಪಕ ಸಮಿತಿಯು, ಅಲಿವೇಲು ಕನ್ಸ್ಟ್ರಕ್ಷನ್ ಮತ್ತು ಡೆವಲಪರ್ಸ್ ನ ಮಾಲಿಕರಾದ ಅಲಿವೇಲು ಸುರೇಶ್ ಅವರನ್ನು ಸಂಸ್ಥೆಯ ವಿಶೇಷ ಸಮನ್ವಯ ಸಮಿತಿ (Special Coordination Committee – & I) ತಂಡದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.



ಈ ಸಂಬಂಧ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿರುವಂತೆ, 2025–26ನೇ ಸಾಲಿನ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುವ ಈ ನೇಮಕಾತಿಯ ಮೂಲಕ, ಬಳ್ಳಾರಿ ಜಿಲ್ಲೆಯ ವ್ಯಾಪಾರ ಸಮುದಾಯವನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ಅಲಿವೇಲು ಸುರೇಶ್ ವಹಿಸಲಿದ್ದಾರೆ. ಸಂಸ್ಥೆಯ ವತಿಯಿಂದ ಆಯೋಜಿಸಲಾಗುವ ಸಭೆಗಳು, ಸಮ್ಮೇಳನಗಳು, ವ್ಯವಹಾರ ಸಂಬಂಧಿತ ಚರ್ಚಾಕೂಟಗಳು ಹಾಗೂ ವಿವಿಧ ಸಮಾರಂಭಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿ, ವ್ಯಾಪಾರ, ಸೇವೆಗಳ ಗುಣಮಟ್ಟ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ದಿಕ್ಕಿನಲ್ಲಿ ಸಂಸ್ಥೆಯೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸುವ ನಿರೀಕ್ಷೆಯನ್ನು ಸಂಸ್ಥೆ ವ್ಯಕ್ತಪಡಿಸಿದೆ. ಅಲಿವೇಲು ಸುರೇಶ್ ಅವರ ಅನುಭವ ಹಾಗೂ ಕಾರ್ಯಕ್ಷಮತೆ ಸಂಸ್ಥೆಯ ಚಟುವಟಿಕೆಗಳಿಗೆ ಮತ್ತಷ್ಟು ಬಲ ನೀಡಲಿದೆ ಎಂಬ ವಿಶ್ವಾಸವನ್ನು ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವಾಧ್ಯಕ್ಷರಾದ ಕಾಂಡ್ರ ಬಾಬು ಮತ್ತು ವ್ಯವಸ್ಥಾಪಕ ಸಮಿತಿ ವತಿಯಿಂದ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

# ಗ್ರಾಮ ದೇವತೆ ಜಾತ್ರೆಯಲ್ಲಿ ಪ್ರಾಣಿ ಬಲಿ ನಿಷೇಧಾಜ್ಞೆ ಆದೇಶಕ್ಕೆ ಸೂಚನೆ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:** ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ತಳವಾರಗೇರಾ ಗ್ರಾಮದಲ್ಲಿ 2025ರ ಡಿಸೆಂಬರ್ 16 ರಿಂದ 17ರ ವರೆಗೆ ನಡೆಯಲಿರುವ ಗ್ರಾಮ ದೇವತೆ ಜಾತ್ರೆಯಲ್ಲಿ ಪ್ರಾಣಿ ಬಲಿ ನಿಷೇಧಾಜ್ಞೆ ಆದೇಶವನ್ನು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೊರಡಿಸಿದ್ದಾರೆ. ಕರ್ನಾಟಕ ಪ್ರಾಣಿ ಬಲಿ ನಿಷೇಧ ಕಾಯ್ದೆ 1959 ಮತ್ತು ಕರ್ನಾಟಕ ಪ್ರಾಣಿ ಬಲಿ ನಿಷೇಧ ನಿಯಮಗಳು, 1960ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸುರಪುರ ತಾಲೂಕಿನ ತಳವಾರಗೇರಾ ಗ್ರಾಮದಲ್ಲಿ 2025ರ ಡಿಸೆಂಬರ್ 16 ರಿಂದ 17ರ ವರೆಗೆ ನಡೆಯಲಿರುವ ಮರೆಮ್ಮ, ಕೆಂಚಮ್ಮ ದೇವರುಗಳ ಜಾತ್ರೆಯಲ್ಲಿ ದೇವರ ಹೆಸರಲ್ಲಿ ಪ್ರಾಣಿ ಬಲಿ ಅಂದರೆ ಕುರಿ ಮತ್ತು ಕೋಣ ಬಲಿ ಕೊಡುವುದನ್ನು ಅಂದು ತಳವಾರಗೇರಾ ಗ್ರಾಮದ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ 3 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಾಗಿ ನಿಷೇಧಿಸಿ ಈ ಕೆಳಗಿನ ಅಂಶಗಳನ್ನು ಅನುಸರಿಸಲು ಆದೇಶಿಸಿದೆ. ಯಾವುದೇ ಕಾರಣಕ್ಕೂ ಕರ್ನಾಟಕ ಪ್ರಾಣಿ ಬಲಿ ನಿಷೇಧ ಕಾಯ್ದೆ, 1959 ಮತ್ತು ಕರ್ನಾಟಕ ಪ್ರಾಣಿ ಬಲಿ ನಿಷೇಧ ನಿಯಮಗಳು, 1960ರ ಉಲ್ಲಂಘನೆ ಆಗದಂತೆ ನೋಡಿಕೊಳ್ಳಬೇಕು, ಈ ಗ್ರಾಮದಲ್ಲಿ ಈ ಕಾಯ್ದೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಸಂಬಂಧಿಸಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವಾಣಗೇರಾ ಇವರಿಗೆ ವಹಿಸಿಕೊಡಲಾಗಿದೆ. ಈ ಗ್ರಾಮದಲ್ಲಿ ಸೂಕ್ತ ಪೊಲೀಸ್ ಬಂದೊಬಸ್ತ್ ಒದಗಿಸಲು ಹಾಗೂ ಮುಂಜಾಗ್ರತಾ ಕ್ರಮಕೈಗೊಳ್ಳಲು ಯಾದಗಿರಿ ಜಿಲ್ಲಾ ಪೊಲೀಸ್ ಅಧೀಕ್ಷಕರು, ಯಾದಗಿರಿ ಸಹಾಯಕ ಆಯುಕ್ತರು, ಯಾದಗಿರಿ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ ಉಪನಿರ್ದೇಶಕರು, ಸುರಪುರ ತಹಸೀಲ್ದಾರರು, ಸುರಪುರ ತಾಲ್ಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಇವರಿಗೆ ನಿರ್ದೇಶಿಸಿ ಆದೇಶಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೃಷ್ಣದೇವರಾಯ ವಿವಿಯಲ್ಲಿ ಎರಡು ದಿನಗಳ ಕಮ್ಮಟ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಸಾರಾಂಗ ಹಾಗೂ ಕರ್ನಾಟಕ ಪ್ರಕಾಶಕರ ಸಂಘ(ರಿ) ಬೆಂಗಳೂರು ಇವರ ಸಹಯೋಗದಲ್ಲಿ ಪುಸ್ತಕ ಪ್ರಕಾಶನ ಕುರಿತ ಎರಡು ದಿನಗಳ ಕಮ್ಮಟವನ್ನು ಡಿ.17 ಮತ್ತು 18 ರಂದು ವಿವಿ ಯಲ್ಲಿ ಆಯೋಜಿಸಲಾಗಿದೆ. ಕರ್ನಾಟಕ ಪ್ರಕಾಶನ ರಂಗದ ಸ್ಥೂಲ ನೋಟ, ಪುಸ್ತಕ ನಿರ್ಮಾಣದ ವಿವಿಧ ಹಂತಗಳ ಬಗೆ, ಪುಸ್ತಕ ಪ್ರಕಾಶನ ಮತ್ತು ಕಾನೂನುಗಳು, ಕರಡು ತಿದ್ದುವಿಕೆಯ ವಿವಿಧ ಆಯಾಮಗಳು, ಪುಸ್ತಕ ವಿನ್ಯಾಸ ಮತ್ತು ಮುಖಪುಟ ವಿನ್ಯಾಸ,

ಮುದ್ರಣ ಶಾಲೆಯ ವಿವಿಧ ಹಂತಗಳು, ಪುಸ್ತಕ ಸಂಸ್ಕೃತಿಯ ಪ್ರಸಾರ ಮತ್ತು ಪ್ರಸಾರಾಂಗಗಳು, ಪತ್ರಿಕಾ ವಿಮರ್ಶೆ ಮತ್ತು ಪ್ರಸಾರ, ಪುಸ್ತಕ ಪ್ರಕಾಶನ ಮತ್ತು ಮಾರಾಟ ಜಾಲ ಮೊದಲಾದ ವಿಷಯಗಳ ರಾಜ್ಯದ ಸಂಪನ್ಮೂಲ ವ್ಯಕ್ತಿಗಳಿಂದ ಗೋಷ್ಠಿಗಳು ನಡೆಯಲಿವೆ. ಎರಡು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದ್ದು, ವಿದ್ಯಾರ್ಥಿಗಳು, ಅಧ್ಯಾಪಕರಿಗೆ, ಹೊಸ ಪ್ರಕಾಶಕರಿಗೆ ಅನುಕೂಲವಾಗಲಿದೆ. ಕಮ್ಮಟದಲ್ಲಿ ಭಾಗವಹಿಸುವ ಆಸಕ್ತರು ಮಾಹಿತಿಗಾಗಿ ಪ್ರಸಾರಾಂಗದ ನಿರ್ದೇಶಕ ಡಾ.ತಿಪ್ಪೇರುದ್ರ (9448855457) ಗೆ ಸಂಪರ್ಕಿಸಬಹುದು ಎಂದು ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ.ಎನ್.ಎಂ.ಸಾಲಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಮುದಾಯ ಆರೋಗ್ಯ ಕೇಂದ್ರದ ವ್ಯವಸ್ಥೆ ಸರಿಪಡಿಸುವಂತೆ ಆಗ್ರಹಿಸಿ ಪ್ರತಿಭಟನೆ

**ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**
ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೂಕ್ತ ಚಿಕಿತ್ಸಾ ಸೌಲಭ್ಯಗಳು ಸಿಗುತ್ತಿಲ್ಲ, ಇದರಿಂದ ರೋಗಿಗಳಿಗೆ ತುಂಬಾ ತೆ–ೊಂದರೆ ಆಗುತ್ತಿದ್ದು ಇದನ್ನು ಸರಿಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಡಾ.ಎಪಿಜೆ ಅಬ್ದುಲ್ ಕಲಾಂ ಫೌಂಡೇಶನ್ ನೇತೃತ್ವದಲ್ಲಿ ಶನಿವಾರ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು. ಡಿಸೆಂಬರ್ 13ರಂದು ಬೆಳಗಿನ ಜಾವ ಅಂದರೆ ರಾತ್ರಿ ಮೂರು ಘಂಟೆ ಸಮೀಪ ಬೇಪಾರಿ ಸಮಾಜದ ಯುವಕನೋರ್ವ ತೀವ್ರಹೃದಯಾಘಾತಕ್ಕೆ ಒಳಗಾದಾಗ ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಕರೆ ತಂದಾಗ ರಾತ್ರಿ ಅವಧಿಯಲ್ಲಿ ಕಾರ್ಯನಿರ್ವಹಿ ಸಬೇಕಾದ ವೈದ್ಯರು ಇಲ್ಲದೆ ಇರುವುದರಿಂದ ಪ್ರಾಥಮಿಕ ಸೂಕ್ತ ಚಿಕಿತ್ಸೆ ಸಿಗದ ಕಾರಣ ಅಮಾಯಕ ಯುವಕ ಜೀವ ಕಳೆದುಕೊಂಡಿದ್ದಾನೆ ಎಂದು ಆರೋಪಿಸಿ ಕರ್ತವ್ಯ ಲೋಪ ಎಸಗಿದ ವೈದ್ಯರನ್ನು ಸೇವೆಯಿಂದ ಅಮಾನತ್ತು ಗೊಳಿಸಬೇಕು ಹಾಗೂ ರೋಗಿಗಳಿಗೆ ಅಗತ್ಯವಿರುವ ಎಲ್ಲ ಚಿಕಿತ್ಸಾ ಸೌಲಭ್ಯಗಳ ವ್ಯವಸ್ಥೆಯನ್ನು ಮಾಡಬೇಕೆಂದು ಆಗ್ರಹಿಸಿ ನೂರಾರು ಪ್ರತಿಭಟನಾಕಾರರು ಮೃತ ವ್ಯಕ್ತಿಯ ಮನೆಯಿಂದ ಸಮುದಾಯ ಆರೋಗ್ಯ ಕೇಂದ್ರದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಆರೋಗ್ಯ ಕೇಂದ್ರದ ಮುಂಭಾಗದಲ್ಲಿ ಧರಣಿ ನಡೆಸಿ, ಧಿಕ್ಕಾರದ ಘೋಷಣೆಗಳನ್ನು ಹೇಳಿ ಪ್ರತಿಭಟನೆ ನಡೆಸಿದರು.



ಪ್ರತಿಭಟನಾಕಾರರನ್ನು ಸಮಾಧಾನಗೊಳಿಸಲು ತಾಲೂಕ ವೈದ್ಯಾಧಿಕಾರಿ ಡಾ.ಸತೀಶ ತಿವಾರಿ ಹಾಗೂ ಆಡಳಿತ ವೈದ್ಯಾಧಿಕಾರಿ ಡಾ. ಶ್ರೀಶೈಲ ಹುಕ್ಕೇರಿ ಎಲ್ಲ ರೀತಿಯಿಂದಲೂ ಪ್ರಯತ್ನಿಸಿದರೂ ಪ್ರತಿಭಟನಾಕಾರರು ತಮ್ಮ ಪಟ್ಟು ಬಿಡದೆ ಇದ್ದಾಗ ತಹಸಿಲ್ದಾರ್ ಡಾ.ವಿನಯಾ ಹೂಗಾರ ಅವರು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಬೇಡಿಕೆಗಳನ್ನು ಆಲಿಸಿ ನಂತರ ಜಿಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ ಮಾತನಾಡಿ ಕರ್ತವ್ಯ ಲೋಪ ಎಸಗಿದ ವೈದ್ಯರ ಮೇಲೆ ಕ್ರಮ ಜರುಗಿಸಲು ಆಡಳಿತ ವೈದ್ಯಾಧಿಕಾರಿಗಳಿಂದ ಪತ್ರ ಬರೆಯಿಸಿ ಅದನ್ನು ಪ್ರತಿಭಟನಕಾರರಿಗೆ ನೀಡಿ ಮುಂದೆ ಹೀಗಾಗದಂತೆ ನೋಡಿಕೊಳ್ಳಲಾಗುವುದೆಂದು ಭರವಸೆ ನೀಡಿರುವುದರಿಂದ ಪ್ರತಿಭಟನಾಕಾರರು ತಮ್ಮ ಪ್ರತಿಭಟನೆಯನ್ನು ಹಿಂತೆಗೆದು–ಕೊಂಡರು. ಈ ಸಮಯದಲ್ಲಿ ತಾಲೂಕ ಆರೋಗ್ಯಾಧಿಕಾರಿ ಡಾ.ಸತೀಶ ತಿವಾರಿ, ಆಡಳಿತ ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ, ಪಿಎಸ್‌ಐ ಜ್ಯೋತಿ ಖೋತ್, ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೈಭೀಮ ಮುತ್ತಗಿ, ಡಾ.ಎಪಿಜೆ ಅಬ್ದುಲ್ ಕಲಾಂ ಫೌಂಡೇಶನ್ ಅಧ್ಯಕ್ಷ ಮಹಮ್ಮದ್ ಶಫೀಕ ಇನಾಮದಾರ, ಬೇಪಾರಿ ಸಮಾಜದ ಅಧ್ಯಕ್ಷ ರಫೀಕ್ ಬೇಪಾರಿ, ಪುರಸಭೆ ಮಾಜಿ ಅಧ್ಯಕ್ಷ ಎಂ.ಕೆ.ಚೋರಗಸ್ತಿ, ಈದಗಾ ಸಮಿತಿ ಸದಸ್ಯ ಮುರ್ತುಜಾ ಮೈತ್ರಿ, ಮಂಜೂರ ಅಹಮದ್ ಬೇಪಾರಿ, ಹುಸೇನ ಜಮಾದಾರ, ಮೈನು ಬೇಪಾರಿ, ನಿಸಾರ ಬೇಪಾರಿ, ಶೌಕತ್ ಲಾಹೋರಿ, ನಬಿ ಲಾಹೋರಿ, ಅಬೂಬಕರ್ ಲಾಹೋರಿ, ಗುರುಪ್ರಸಾದ್ ಬಿಜಿ, ಸುಭಾಸ ಅಗಸರ, ಪೀರಸಾ ಮತ್ತಿತರರು ಇದ್ದರು. ಸೂಕ್ತ ಬಂದೋಬಸ್ತ್: ಪ್ರತಿಭಟನೆ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ಹಾಗೂ ಕಾನೂನು ಸುವ್ಯವಸ್ಥೆ ಕೆಡದಂತೆ ನೋಡಿಕೊಳ್ಳಲು ಪಿಎಸ್‌ಐ ಜ್ಯೋತಿ ಖೋತ್ ಅವರು ಸೂಕ್ತ ಬಂದೋಬಸ್ತ್ ಒದಗಿಸಿದ್ದರು.

# ಸ್ವದೇಶಿ ವಸ್ತು ಬಳಕೆಯ ಅಗತ್ಯತೆಯಿದೆ: ಭಾಂಡಗೆ




**ಮಲ್ಲಮ್ಮ ನುಡಿ ಬಾಗಲಕೋಟೆ:** ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಪ್ರತಿ ಮನೆಯಲ್ಲೂ ಸ್ವದೇಶಿ ವಸ್ತುಗಳ ಬಳಕೆಯ ಅಗತ್ಯತೆ ಇದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನಗರದ ಬಿವಿವಿ ಸಂಘದ ಮಿನಿ ಸಭಾಭವನದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ಆತ್ಮನಿರ್ಭರ ಭಾರತ ಸಂಕಲ್ಪ ಅಭಿಯಾನದಲ್ಲಿ 'ಸ್ವದೇಶಿ ಬಳಸಿ ದೇಶ ಉಳಿಸಿ–ಪ್ರತಿ ಮನೆಮನೆಯೂ ಸ್ವದೇಶಿ' ಎಂಬ ಅಭಿಯಾನದ ಕರಪತ್ರಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಬಿಜೆಪಿ ಕಾರ್ಯಕರ್ತರು ಪ್ರತಿ ಮನೆಗೂ ತೆರಳಿ ಸ್ವದೇಶಿ ವಸ್ತುಗಳ ಬಳಕೆ ಬಗ್ಗೆ ಜಾಗೃತಿ ಮೂಡಿಸುವ ಅಭಿಯಾನವನ್ನು ಹಮ್ಮಿಕೊಳ್ಳಬೇಕು.

ಭಾರತ ಸಮೃದ್ಧ ರಾಷ್ಟ್ರ, ಆಮದು ಕಡಿಮೆಯಾಗಿ ರಫ್ತು ಜಾಸ್ತಿಯಾಗಬೇಕು. ನಾವೆಲ್ಲರೂ ಸ್ವದೇಶಿ ಉತ್ಪನ್ನಗಳ ಬಳಕೆಗೆ ಧ್ವನಿಯಾಗಬೇಕು ಎಂದ ಭಾಂಡಗೆ, ಮನೆಗಳಲ್ಲಿ ಬಳಸುವ ವಸ್ತು ಸ್ವದೇಶಿ ಇರುವಂತೆ, ಸ್ಥಳಿಯ ಉತ್ಪನ್ನವನ್ನೇ ಖರಿದೀಸುವಂತೆ ತಿಳುವಳಿಕೆ ನೀಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ, ಆತ್ಮ ನಿರ್ಭರ ಭಾರತ ಹಾಗೂ ಮೇಕ ಇನ್ ಇಂಡಿಯಾ ಮೂಲಕ ಸ್ವಾಭಿಮಾನಿ–ಸ್ವಾವಲಂಭಿ ಭಾರತ ನಿರ್ಮಾಣದ ಕನಸನ್ನು ಪ್ರಧಾನಿ ನರೇಂದ್ರ ಮೋದಿ ಬಿತ್ತಿದರು, ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ಸೇನೆಯ ಶಸ್ತ್ರಾಸ್ತ್ರಗಳಲ್ಲಿ ಭಾರತ ಆತ್ಮ ನಿರ್ಭರವಾಗಿದೆ,

ಭಾರತದ ಸರ್ವಾಂಗಿಣ ಅಭಿವೃದ್ಧಿಗೆ ಸ್ವದೇಶಿ ಬಳಕೆ ಅಗತ್ಯವಾಗಿದೆ. ಸ್ವದೇಶಿ ಬಳಸಿ ಅಭಿಯಾನದಲ್ಲಿ ಎಲ್ಲ ಕಾರ್ಯಕರ್ತರು ತೊಡಗಿಸಿಕೊಂಡು ಜನಜಾಗೃತಿ ಮೂಡಿಸಬೇಕು ಎಂದು ಹೇಳಿದರು.ಬಸವರಾಜ ಯಂಕಂಚಿ ಮಾತನಾಡಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ,ಗ್ರಾಮೀಣ ಮಂಡಲದ ಅಧ್ಯಕ್ಷ ಸುರೇಶ ಕೊಣ್ಣೂರ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ,ಸತ್ಯನಾರಾಯಣ ಹೇಮಾದ್ರಿ, ಉಮೇಶ ಹಂಚಿನಾಳ,ಶ್ರೀಧರ ನಾಗರಬೆಟ್ಟ, ಮಲ್ಲೇಶ ವಿಜಾಪುರ, ಕಲ್ಲಪ್ಪ ಭಗವತಿ, ಜಿ.ಎನ್. ಪಾಟೀಲ, ಸಂಗಣ್ಣ ಕಲಾದಗಿ, ಕುಮಾರ ಯಳ್ಳಿಗುತ್ತಿ, ಸುಜಾತಾ ಶಿಂದೆ, ಬಸವರಾಜ ಅವರಾದಿ, ಶಿವಾನಂದ ಟವಳಿ, ಗುಂಡುರಾವ ಶಿಂದೆ, ಜ್ಯೋತಿ ಭಜಂತ್ರಿ, ನಾಗರತ್ನಾ ಹೆಬ್ಬಳ್ಳಿ, ಶಶಿಕಲಾ ಮಜ್ಜಗಿ, ಸರಸ್ವತಿ ಕುರುಬರ, ಪ್ರೇಮಾ ಅಂಬಿಗೇರ,ಶೈಲಜಾ ಸಂಗಳದ,ಶಿವಲೀಲಾ ಸಂಭನ್ನವರ, ಸುನಂದಾ ಹಿರೇಮಠ, ರಾಜು ಶಿಂತ್ರೆ,ವೆಂಕಣ್ಣ ಹಡಗಲಿ,ಯಲ್ಲಪ್ಪ ನಾರಾಯಣಿ, ಶಂಗರ ಗಲಗ, ಸಿದ್ದಣ್ಣ ಲೋಕಾಪುರ ಭಾಗವಹಿಸಿದ್ದರು.

# ಬಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಲಹೆ

## ಕೃಷಿಯೇತರ ಸಾಲ ಒದಗಿಸಬೇಕು: ಸರನಾಯಕ



**ಮಲ್ಲಮ್ಮ ನುಡಿ ಬಾಗಲಕೋಟೆ:** ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ದುಡಿಯುವ ಬಂಡವಾಳ ಹೆಚ್ಚಿಸಿಕೊಂಡು ರೈತರಿಗೆ ಕೃಷಿಯೇತರ ಸಾಲ ನೀಡಲು ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಬಾಗಲಕೋಟೆ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಜಯಕುಮಾರ ಸರನಾಯಕ ಹೇಳಿದರು. ತಾಲೂಕಿನ ಶಿರೂರ ಪಟ್ಟಣದಲ್ಲಿ ರವಿವಾರ ಸ್ಥಳೀಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅಗತ್ಯ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ಕೃಷಿಯೇತರ ಸಾಲ ಸೌಲಭ್ಯವನ್ನೂ ಸಹ ನೀಡಬೇಕು. ಇದಕ್ಕೆ ಅಗತ್ಯ ದುಡಿಯುವ ಬಂಡವಾಳ ಹೊಂದಬೇಕು ಎಂದರು. ಈಗ ವಿತರಿಸಲಾಗುವ ಕೃಷಿ ಸಾಲದ ಮಿತಿಯನ್ನು ಹೆಚ್ಚಿಸಬೇಕೆಂದು ರೈತರು ಕೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೆಚ್ಚು ಠೇವಣಿ ಸಂಗ್ರಹಿಸಬೇಕು. ಗ್ರಾಹಕರು ಮತ್ತು ರೈತರೂ ಸಹ ಹಣವನ್ನು ಪಟ್ಟಣದ ಬ್ಯಾಂಕುಗಳಲ್ಲಿ ಠೇವಣಿ ಇಡದೇ ಪಿಕೆಪಿಎಸ್‌ಗಳಲ್ಲೂ ಠೇವಣಿ ಮಾಡಬೇಕು ಎಂದು ಅಜಯಕುಮಾರ ಸರನಾಯಕ ಹೇಳಿದರು.ಮುಖ್ಯ ಅತಿಥಿಗಳಾಗಿದ್ದ ಜಿಪಂ ಮಾಜಿ ಅಧ್ಯಕ್ಷ ಬಸವಂತಪ್ಪ ಮೇಟಿ ಹಾಗೂ ಕೆಎಂಎಫ್ ನಿರ್ದೇಶಕ ಸಂಗಣ್ಣ ಹಂಡಿ ಮಾತನಾಡಿ, ಪಿಕೆಪಿಎಸ್‌ಗಳು ರೈತರ ಬದುಕಿನ ಜೀವಾಳವಾಗಿವೆ. ರೈತರು ಡಿಸಿಸಿ ಬ್ಯಾಂಕಿನಿಂದ ದೊರೆಯುವ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಸಬಲತೆ ಸಾಧಿಸಬೇಕು ಎಂದರು.ಬಿಡಿಸಿಸಿ ಬ್ಯಾಂಕ್ ಹಿರಿಯ ನಿರೀಕ್ಷಕ ಎಸ್.ಪಿ.ಮೇಟಿ ಮಾತನಾಡಿ, ಪಿಕೆಪಿಎಸ್‌ಗಳ ಕಾರ್ಯ ಕೇವಲ ಕೃಷಿ ಸಾಲ ನೀಡುವುದಲ್ಲ. ಠೇವಣಿ ಹೆಚ್ಚಿಸಿಕೊಂಡು ಕೃಷಿಯೇತರ ಸಾಲ ಸೌಲಭ್ಯ ಒದಗಿಸಬೇಕು ಎಂದು ಹೇಳಿದರು.ಶಿವಯೋಗಾಶ್ರಮದ ಅಭಿನವ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯವಹಿಸಿ ಮಾತನಾಡಿ,ಸಹಕಾರ ಸಂಘಗಳು ಬೆಳೆಯಬೇಕಾದರೆ ಅದರಲ್ಲಿ ಕೆಲಸ ಮಾಡುವವರ ಕೈ ಶುದ್ಧವಾಗಿರಬೇಕು, ಮನಸ್ಸು ಸ್ವಚ್ಛವಾಗಿರಬೇಕು. ಪ್ರಾಮಾಣಿಕತೆ ಹಾಗೂ ಬುದ್ಧಿಶಕ್ತಿ ಹೊಂದಿರಬೇಕು ಎಂದು ಹೇಳಿದರು.

ಉಮೇಶ ಹುಲ್ಲಪ್ಪ ಮೇಟಿ ಕಾರ್ಯಕ್ರಮ ಉದ್ಘಾಟಿಸಿದರು. ಪಿಕೆಪಿಎಸ್ ಅಧ್ಯಕ್ಷ ಸಿದ್ದಪ್ಪ ಹಂಡರಗಲ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಭೀಮಪ್ಪ ದಾಸಪ್ಪನವರ, ನಿರ್ದೇಶಕರಾದ ಮುದಕಪ್ಪ ಬಿಲ್ಲಾರ, ಲಿಂಗಶೆಟ್ಟೆಪ್ಪ ಕೆರೂರ, ಈರಪ್ಪ ದೇಸಾನಿ, ಸಿದ್ದಪ್ಪ ಹಿರೇಕುಂಬಿ, ಮುದಕಪ್ಪ ಆಡಿನ, ಶಿವುಕುಮಾರ ನಡುವಿನಮನಿ,ಶಿವಪುತ್ರಪ್ಪ ಲಮಾಣಿ, ಮಳಿಯಪ್ಪ ಮುದಗಲ್ಲ, ಪಾರವ್ವ ನೆರಕಿ, ಸಾವಿತ್ರಿ ಬಿರಾದಾರ ಹಾಗೂ ಬಿಡಿಸಿಸಿ ಬ್ಯಾಂಕ್ ಕ್ಷೇತ್ರ ಅಧಿಕಾರಿ ಶ್ರೀಮತಿ ಎಸ್.ಎಚ್.ಕೊಣ್ಣೂರ ವೇದಿಕೆಯಲ್ಲಿದ್ದರು. ಪಿಕೆಪಿಎಸ್ ಮುಖ್ಯ ಕಾರ್ಯನಿರ್ವಾಹಕ ಹನಮಂತ ಬಾರಡ್ಡಿ ಸ್ವಾಗತಿಸಿದರು. ಸಹಾಯಕ ಮಹಾಂತೇಶ ನರೇಗಲ್ಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಸಂಜಯ ನಡುವಿನಮನಿ ನಿರೂಪಿಸಿದರು.

# ತಜ್ಞರ ಸಮಿತಿಗಳು ಬಾಧಿತ ಹಳ್ಳಿಗಳ ಮುಖ ನೋಡಿಲ್ಲ: ಬಡಿಗೇರ್




**ಮಲ್ಲಮ್ಮ ನುಡಿ ವಾರ್ತೆಕೊಪ್ಪಳ:** ನಗರಸಭೆ ಮುಂದೆ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆಯಿಂದ ನಡೆಸುತ್ತಿರುವ 43ನೇ ದಿನದಂದು ಬಲ್ಡೋಟಾ (ಬಿಎಸ್ಪಿಎಲ್), ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ–ಸುಮಿ, ಎಕ್ಸ್ ಇಂಡಿಯಾ ಮುಂತಾದ ಮಾಲಿನ್ಯಕಾರಕ ಕಾರ್ಖಾನೆಗಳ ವಿಸ್ತರಣೆ ವಿರೋಧಿಸಿ, ಬಸಾಪುರ ಗ್ರಾಮದ 44.35 ಎಕರೆ ಕೆರೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಆಗ್ರಹಿಸಿ, ತುಂಗಭದ್ರಾ ನೀರು ವಿಷಗೊಳಿಸುವ ಕಾರ್ಖಾನೆಗಳನ್ನು ಸೀಜ್ ಮಾಡಲು ಒತ್ತಾಯಿಸಿ ನಡೆದ ಹೋರಾಟವನ್ನು ದೂಳು ಬಾಧಿತ ಬಿ. ಹೊಸಳ್ಳಿ ಗ್ರಾಮದ ಯುವಕರು ಬೆಂಬಲಿಸಿದರು.

ವೇದಿಕೆಯ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ "ಕೊಪ್ಪಳ ಭಾಗ್ಯನಗರದ ಲಕ್ಷಗಟ್ಟಲೆ ಜನರ ಸಮಸ್ಯೆ ಇಲ್ಲಿನ ಪ್ರತಿನಿಧಿಗಳಿಗೆ ಗಂಭೀರವಾಗಿ ಕಾಣಿಸುತ್ತಿಲ್ಲ.ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದ್ದು ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಧ್ವನಿಯೆತ್ತಿದ್ದು ಕೊಪ್ಪಳ ಜನರು ಗಮನಿಸುತ್ತಿದ್ದಾರೆ. ಈ ಕುರಿತು ಮಾತನಾಡಲು ಫೋನ್ ಕರೆಯನ್ನು ಮಾಡಿ ಜಿಲ್ಲಾ ಮಂತ್ರಿಗಳು,ಶಾಸಕರುಗಳಿಗೆ ಮಾತನಾಡಲು ಪ್ರಯತ್ನಿಸಿದರೂ ಕರೆ ಸ್ವೀಕರಿಸುತ್ತಿಲ್ಲ. ಇದರಿಂದ ನಮಗೆ ಆತಂಕ ಹೆಚ್ಚಾಗಿದೆ. ಒಂದು ಕಡೆ ಕೈಗಾರಿಕಾ ಮಂತ್ರಿಗಳು ತಜ್ಞರ ಸಮಿತಿ ವರದಿ ಮಾಡಿಸುತ್ತೇವೆ ಎಂದು, ದಿಲ್ಲಿ ಕಡೆ ಕೈ ಮಾಡಿ ತೋರಿಸುತ್ತಾ ಹಳೆ ಚಾಳಿಯನ್ನು ಮುಂದುವರಿಸಿದ್ದಾರೆ. ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅವರು ಬೇಕಾದರೆ ತಮ್ಮ ಕ್ಷೇತ್ರದಲ್ಲಿ ಎಲ್ಲಾದರೂ ಬಂಜರು ಭೂಮಿ ಇದ್ದರೆ ಇಂಥ ಕಾರ್ಖಾನೆಗಳನ್ನು ತೆಗೆದು–ಕೊಂಡು ಅಲ್ಲಿ ಹಾಕಲಿ. ಅದು ಬಿಟ್ಟು ನಮ್ಮ ಆಹ್ಲಾದಕರ ವಾತಾವರಣದ ತುಂಗಭದ್ರವೇ ಯಾಕೆ ಬೇಕು? ಇದ–ರಿಂದ ಅವರ ಒಂದು ಉದ್ದೇಶ ಏನೆಂದು ತೋರಿಸುತ್ತದೆ. ಇವರ ನಿಲುವು ಒಂದುವರೆ ಲಕ್ಷ ಜನರ ಆತಂಕ ಹೆಚ್ಚು ಮಾಡಿರುವಾಗಲೇ, ಇಲ್ಲಿರುವ 28 ಸ್ಪಾಂಜ್ ಐರನ್ ಕಾರ್ಖಾನೆಗಳು 25 ಹಳ್ಳಿಗಳನ್ನು,ಅಲ್ಲಿನ ಕೃಷಿ ಬದುಕನ್ನು, ಅಂತರ್ಜಲವನ್ನು ಮಾಲಿನ್ಯಗೊಳಿಸಿವೆ ಎನ್ನುವುದು ಗೊತ್ತಾಗಲಿಲ್ಲವೇ? ಇದುವರೆಗಿನ ಬಂಡವಾಳ 4000 ಕೋಟಿಯ 28 ಕಾರ್ಖಾನೆಗಳು ಇಷ್ಟು ಮಾಲಿನ್ಯ ಮಾಡಿರುವಾಗ ಇನ್ನು 54,000 ಕೋಟಿ ಹೂಡಿಕೆಯಲ್ಲಿ ಎಷ್ಟು ಮಾಲಿನ್ಯವಾಗುತ್ತದೆ ಎಂದು ಅಂದಾಜು ಇಲ್ಲವೇ? ಈ ಮಂತ್ರಿಗಳಿಗೆ ಬಲ್ಡೋಟಾ ಒಳಗೊಂಡು ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ–ಸುಮಿ, ಎಕ್ಸ್ ಇಂಡಿಯಾ ವಿಸ್ತರಣೆ ಕೈಬಿಡಬೇಕು ಎನ್ನುವ ಧ್ವನಿ ಎತ್ತಲಾರದ ಇವರ ಧೋರಣೆ ಖಂಡಿಸಿ ಬೆಳಗಾವಿ ಅಧಿವೇಶನದತ್ತ ಕೊಪ್ಪಳ ನಗರ ಮತ್ತು ಹಳ್ಳಿಯ ಜನರು 16.12.2025 ಮಂಗಳವಾರ ನಡೆಯಿರಿ" ಎಂದು ಕರೆ ಕೊಟ್ಟರು.

ಪುಸ್ತಕ ಪ್ರಕಾಶಕ ಡಿ. ಎಂ. ಬಡಿಗೇರ ಮಾತನಾಡುತ್ತಾ, "ತಜ್ಞರ ಸಮಿತಿ ಯಾವತ್ತೂ ಕೊಪ್ಪಳದ ಕಾರ್ಖಾನೆದೂಳು ಬಾಧಿತರ ಹಳ್ಳಿಗಳ ಮುಖ ನೋಡಿಲ್ಲ. ಈಗಾಗಲೇ ಪತ್ರಿಕೆಗಳಲ್ಲಿ ದೇಶದಲ್ಲಿ ಕೊಪ್ಪಳ ಶುದ್ಧ ಗಾಳಿಯಲ್ಲಿ ಹತ್ತರಲ್ಲಿ ಮೂರನೇ ಸ್ಥಾನ, ನಾಲ್ಕನೇ ಸ್ಥಾನ ಎಂದು ನಕಲಿ ಏಜನ್ಸಿಗಳಿಂದ ವರದಿ ಮಾಡಿಸಿ ಪ್ರಚಾರ ಮಾಡಿಸುತ್ತಿರುವುದು ನೋಡಿದರೆ ನಮಗೆ ಆತಂಕವಲ್ಲ ಜೀವಾತಂಕ ಹೆಚ್ಚಾಗಿದೆ. ಇದನ್ನು ಸರ್ಕಾರ ಪರಿಗಣಿಸದೆ ಕೈಬಿಡಬೇಕು. ನಿಮ್ಮ ಉನ್ನತ ತಾಂತ್ರಿಕ ಸಮಿತಿಯಲ್ಲಿ ಬಾಧಿತ ಹಳ್ಳಿಗಳ ಪ್ರತಿನಿಧಿಗಳು, ಹೋರಾಟ ಮುಖಂಡರು ಇರಬೇಕು. ಅಂದಾಗ ಮಾತ್ರ ನಿಮ್ಮ ತಂತ್ರಜ್ಞರ ಸಮಿತಿಯ ವರದಿಗೆ ಮಾನ್ಯತೆ ಇರುತ್ತದೆ. ಇದು ಏಕಮುಖವಾಗಿ ನೀವು ಮಾಡುವ ವರದಿ ಜನರ ಜೀವನವನ್ನು, ಆರೋಗ್ಯವನ್ನು ಉಳಿಸಲು ಸಾಧ್ಯವಿಲ್ಲ"ಎಂದರು. ಧರಣಿಯಲ್ಲಿ ನಿವೃತ್ತ ಪ್ರಾಚಾರ್ಯ ಎಸ್.ಬಿ.ರಾಜೂರು,ಸಿ.ವಿ.ಜಡಿಯವರ್, ಜಂಟಿ ಕ್ರಿಯಾ ವೇದಿಕೆಯ ಸಂಚಾಲಕರು ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಶಂಭುಲಿಗಪ್ಪ ಹರಗೇರಿ,ಬಸವರಾಜ ಶೀಲವಂತರ, ಮಹಾದೇವಪ್ಪ ಮಾವಿನಮಡು, ಬಸವರಾಜ್ ಜಟ್ಟೆಪ್ಪನವ, ಕುಷ್ಟಗಿ ಮಾನವ ಬಂಧುತ್ವ ವೇದಿಕೆಯ ಸಂಚಾಲಕ ಬೆಟ್ಟಪ್ಪ ಯತ್ನಟ್ಟಿ, ಹೊಸಳ್ಳಿ ಗ್ರಾಮದ ನಾಗರಾಜ ಪಿ. ಹನುಮಂತಪ್ಪ ಡಿ. ಸುಭಾನ ಸಾಬ, ಮೂಕಪ್ಪ ಮೇಸ್ತ್ರಿ, ಗಾಳೆಪ್ಪ ಮುಂಗೋಲಿ, ಮಖ್ಬೂಲ್ ರಾಯಚೂರು, ಮಹಾಂತೇಶ ಕೊತಬಾಳ, ಶರಣು ಗಡ್ಡಿ, ಶಾಂತಯ್ಯ ಅಂಗಡಿ, ಗವಿಸಿದ್ದಪ್ಪ ಹಲಿಗಿ ಪಾಲ್ಗೊಂಡರು.

## ಫುಟಫತ್ ಮೇಲೆ ತರಕಾರಿ ಮಾರಾಟ
# ಬೈಕ್ ಸವಾರರಿಗೆ ಅನುವು ಮಾಡಿಕೊಟ್ಟ ಸಂಚಾರಿ ಪಿಎಸ್ಐ




**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:** ಪಟ್ಟಣದಲ್ಲಿ ರವಿವಾರ ಮತ್ತು ಬುಧುವಾರ ತರಕಾರಿ ಸಂತೆ ಜರುಗುತ್ತದೆ. ಸುಮಾರು ವರ್ಷಗಳಿಂದ ರಸ್ತೆಯ ಪಕ್ಕದಲ್ಲಿ ತರಕಾರಿ ಸಂತೆ ಅಂಗಡಿಯ ಮಾಲೀಕರು ರಸ್ತೆಯ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಇದರಿಂದ ರಸ್ತೆಯಲ್ಲಿ ವಾಹನಗಳು ಓಡಾಟಕ್ಕೆ ತೊಂದರೆಯಾಗುತ್ತಿತ್ತು. ಡಿವೈಎಸ್ಪಿ ನೇತೃತ್ವದಲ್ಲಿ ಹುಮನಾಬಾದ ಸಂಚಾರಿ ಪೊಲೀಸ್ ಠಾಣೆ–ಯ ಪಿಎಸ್ಐ ಹುಲೇಪ್ಪರವರು ಬೀದಿವ್ಯಾಪಾರಿಗಳಿಗೆ ಫುಟ್‌ಪಾತ್ ಮೇಲೆ ವ್ಯಾಪಾರ ನಡೆಸಲು ಅನುಮತಿ ನೀಡಿದ್ದಾರೆ. ವ್ಯಾಪಾರ ನಡೆಸಲು ಥಟ್ಟನೆ ಯಿಂದ ಕೂಡಿತ್ತು. ಆದ್ದ–ರಿಂದ ಬೈಕ್ ಸವಾರರು, ಕಾರು ಸವಾರರು ಓಡಾಟಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ತರಕಾರಿ ಖರೀದಿಸಲು ಗ್ರಾಹಕರಿಗೆ ತೊಂದ–ರೆಯಾಗದಂತೆ ನೋಡಿಕೊಂಡರು. ಗ್ರಾಹಕರು ಸಂತಸದಿಂದ ತರಕಾರಿ ಖರೀದಿಸಿದರು.

# ನಾಳೆ ಹಳ್ಳೂರ ನಂದಿ ಬಸವಣ್ಣನ ಜಾತ್ರೆ



**ಮಲ್ಲಮ್ಮ ನುಡಿಬಾಗಲಕೋಟೆ:** ತಾಲೂಕಿನ ಇತಿಹಾಸ ಪ್ರಸಿದ್ಧ ಹಳ್ಳೂರ ಗ್ರಾಮದಲ್ಲಿ ಡಿ.16 ರಂದು ನಂದಿ ಬಸವಣ್ಣನ ಜಾತ್ರೆ ನಡೆಯಲಿದೆ. ಡಿ.15 ಸೋಮವಾರ ಬೆಳಿಗ್ಗೆ ಸೋಗು ಪ್ರಾರಂಭವಾಗಿ ಸಾಯಂಕಾಲ 6 ಗಂಟೆಗೆ ಕುದರಿ ಸೋಗಿನೊಂದಿಗೆ ಗೌರಿ ಜಾತ್ರೆ ಮುಕ್ತಾಯಗೊಳ್ಳಲಿದೆ. ಸಂಜೆ 7–30 ಗಂಟೆಗೆ ಪುರಾಣ ಮಂಗಲೋತ್ಸವ ಕಾರ್ಯಕ್ರಮ, ಹುಚ್ಚೇಶ್ವರ ಮಠದ 12 ನೇ ಪೀಠಾಧಿಪತಿ ಲಿಂ.ಹೊಳೆ ಹುಚ್ಚೇಶ್ವರ ಸ್ವಾಮೀಜಿ ಪುಣ್ಯಾರಾಧನೆ ಕಾರ್ಯಕ್ರಮಗಳು ಜರುಗಲಿವೆ.

ರಾತ್ರಿ 10 ಗಂಟೆಯಿಂದ ಬೆಳಗಿನಜಾವದವರೆಗೆ ಬಾಸಿಂಗೋತ್ಸವ ಜರುಗಲಿದ್ದು, ಮಂಗಳವಾರ ಡಿ.16 ರಂದು ಬೆಳಿಗ್ಗೆ 6 ಗಂಟೆಗೆ ಬಸವೇಶ್ವರ ದೇವಸ್ಥಾನದಲ್ಲಿ ಬಸವೇಶ್ವರ–ನೀಲಾಂಬಿಕೆಯ ಅಕ್ಷತಾರೋಪಣ ಕಾರ್ಯಕ್ರಮ ನಡೆಯುವುದು. ನಂತರ 7 ಗಂಟೆಯಿಂದ ಕಳಸದ ಉತ್ಸವ ಜರುಗಲಿದೆ. ಸಾಯಂಕಾಲ 5 ಗಂಟೆಗೆ ಮಹಾರಥೋತ್ಸವ ನಡೆಯಲಿದ್ದು, ಜಾತ್ರೆಯ ಅಂಗವಾಗಿ ಮನರಂಜನಾ ಕಾರ್ಯಕ್ರಮಗಳು, ಡಿ.17 ರಂದು ಜಂಗೀ ಕುಸ್ತಿಗಳು, ಕ್ರಿಕೆಟ್ ಪಂದ್ಯಾವಳಿ ನಡೆಯಲಿವೆ ಎಂದು ಬಸವೇಶ್ವರ ದೇವಸ್ಥಾನ ಸಮಿತಿ ತಿಳಿಸಿದೆ.

# ಹುಚ್ಚೇಶ್ವರ ಶ್ರೀಗಳಿಂದ ಕ್ಯಾಲೆಂಡರ ಬಿಡುಗಡೆ



**ಮಲ್ಲಮ್ಮ ನುಡಿ ಬಾಗಲಕೋಟೆ:** ಜಿಲ್ಲೆಯ ಗುಳೇದಗುಡ್ಡ ತಾಲೂಕಿನ ಕೋಟೆಕಲ್ ಗ್ರಾಮದಲ್ಲಿ ಹುಚ್ಚೇಶ್ವರ ಮಠದ ಲಿಂ.12 ನೇ ಹೊಳೆ ಹುಚ್ಚೇಶ್ವರ ಶ್ರೀಗಳ ಪುಣ್ಯಾರಾಧನೆ ನಿಮಿತ್ತ ರವಿವಾರ 2026ರ ಮಿನಿ ಕ್ಯಾಲೆಂಡರ ಹಾಗೂ ಡೈರಿ ಬಿಡುಗಡೆಗೊಳಿಸಲಾಯಿತು.ಶ್ರೀಮಠದ 13 ನೇ ಪೀಠಾಧಿಪತಿ ಪೂಜ್ಯ ಹೊಳೆ ಹುಚ್ಚೇಶ್ವರ ಶ್ರೀಗಳ ಸಾನಿಧ್ಯದಲ್ಲಿ ನಡೆದ ಪುಟ್ಟ ಕಾರ್ಯಕ್ರಮದಲ್ಲಿ ಡಾ.ನೀಲಕಂಠ ಶಿವಾಚಾರ್ಯ ಸ್ವಾಮೀಜಿ, ಸಂಕಣ್ಣ ಪಟ್ಟಣಶೆಟ್ಟಿ, ಶೇಖಪ್ಪ ಕಡಪಟ್ಟಿ, ಮೈಲಾರಲಿಂಗ ಆಲೂರ, ಯಮನೂರಪ್ಪ ವಾಲಿಕಾರ, ಅಶೋಕ ಗೌಡರ, ಯಲಗುರದಪ್ಪ ತಗೋಳಂಗಿ, ಗುಂಡಪ್ಪ ಕೋಟಿ, ಉಮೇಶ ಕೋಲ್ಕಾರ ಮತ್ತಿತರರು ಇದ್ದರು.

# ಬದುಕು ಪರೋಪಕಾರದಿಂದ ಕೂಡಿರಲಿ:ಮುಂಡರಗಿ ಶ್ರೀ



**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :** ನಾವು ನಮ್ಮ ಬದುಕನ್ನು ಸ್ವಾರ್ಥದಿಂದ ಕಟ್ಟಿಹಾಕದೆ, ನಮ್ಮ ಕುಟುಂಬ, ಸಮಾಜ ಮತ್ತು ಇತರರ ಹಿತಕ್ಕಾಗಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಹೇಳಿದರು. ಅವರು ಅಳವಂಡಿ ಸಮೀಪದ ಬೆಟಗೇರಿ ಗ್ರಾಮದ ಮುಂಡರಗಿ ಅನ್ನದಾನೀಶ್ವರ ಶಾಖಾಮಠದ ವಾರ್ಷಿಕೋತ್ಸವ ಮತ್ತು ಶ್ರೀ ಜ ಅ ವಿದ್ಯಾ ಸಮಿತಿಯ ಶತಮಾನೋತ್ಸವ ಸಮಾರಂಭದ ಸಾನಿದ್ಯ ವಹಿಸಿ ಮಾತಾನಾಡುತ್ತಾ ಪರೋಪಕಾರಂ ಇದಂ ಶರೀರಂ ಬದುಕಿನ ಸಾರ್ಥಕತೆ ಅಡಗಿರುವುದೇ ಇತರರ ಸೇವೆಯಲ್ಲಿ, ಕನಿಷ್ಠ ನಮಗಾಗಿ ಮತ್ತು ನಮ್ಮವರಿಗಾಗಿ ಜೊತೆಯಲ್ಲಿ ಇತರರಿಗಾಗಿ ಎಂಬುದು ಹೆಚ್ಚು ಅರ್ಥಪೂರ್ಣ ಎನಿಸುತ್ತದೆ , ಮನುಷ್ಯ ಇತರರ ಒಳ್ಳೆಯದಕ್ಕಾಗಿ ಎಷ್ಟು ದುಡಿಯುತ್ತಾನೋ ಅಷ್ಟು ದೊಡ್ಡ ವ್ಯಕ್ತಿಯಾಗುತ್ತಾನೆ ಎಂದು –ಮಹಾತ್ಮ ಗಾಂಧಿಜೀ ಹೇಳಿದ್ದಾರೆ, ಗೌತಮ ಬುದ್ಧ, ಮಹಾವೀರ, ಬಸವಣ್ಣ, ವಿವೇಕಾನಂದ, ಬಾಬಾ ಸಾಹೇಬ್ ಅಂಬೇಡ್ಕರ್ ಮುಂತಾದ ಅನೇಕ ಮಹಾತ್ಮರು ತಮ್ಮ ಮನೆಯವರಿಗಾಗಿ ಹೆಚ್ಚಾಗಿ ಏನನ್ನೂ ಮಾಡಲಿಲ್ಲ. ಆದರೆ ನಾವುಗಳು ಮತ್ತು ಇಡೀ ದೇಶ ಈಗಲೂ ಅವರನ್ನು ನೆನಪಿಸಿಕೊಳ್ಳುತ್ತದೆ ಮತ್ತು ಅವರ ಹುಟ್ಟು ಹಬ್ಬವನ್ನು ಅತ್ಯಂತ ಅಭಿಮಾನದಿಂದ ಆಚರಿಸಲಾಗುತ್ತದೆ ಆದ್ದರಿಂದ ಈ ಬದುಕು ಸಮಾಜಮುಖಿಯಾಗಿರಬೇಕು ಹಾಗೂ ಕುಕನೂರಿನ ಶ್ರೀಗಳ ಕಾರ್ಯಶೀಲತೆ ಶ್ಲಾಘನೀಯ ಅವರಲ್ಲಿರುವ ಗುರುಭಕ್ತಿ ದೊಡ್ಡದು ಎಂದರು. ನಂತರ ಪೂಜ್ಯ ಮಹಾದೇವ ಸ್ವಾಮೀಜಿ ಮಾತನಾಡಿ ಗುರುವಿನ ಮಹಿಮೆ ಅಪಾರ ಏಕೆ–ಂದರೆ ಅವರು ಜ್ಞಾನವನ್ನು ಹಂಚುವ, ಅಜ್ಞಾನವನ್ನು ನಿವಾರಿಸುವ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನ ನೀಡುವ ಶಕ್ತಿಯಾಗಿದ್ದಾರೆ. ಗುರುವು ಶಿಷ್ಯನ ಭವಿಷ್ಯವನ್ನು ರೂಪಿಸುವ ಸೃಷ್ಟಿಕರ್ತ, ತತ್ವಗಳನ್ನು ನೀಡುವ ಮಾರ್ಗದರ್ಶಕ ಮತ್ತು ತಪ್ಪುಗಳಿಂದ ಸರಿಪಡಿಸುವ ಶ್ರೇಷ್ಠ ವ್ಯಕ್ತಿ ಎಂದು ಪರಿಗಣಿಸಲಾಗುತ್ತದೆ. ಗುರುವಿನ ಮಹಿಮೆಯನ್ನು "ಹರ ಮುನಿದರೆ ಗುರು ಕಾಯುವನು, ಗುರು ಮುನಿದರೆ ಯಾರು ಕಾಯುವರು?" ಎಂಬ ಮಾತಿನಿಂದ ತಿಳಿಯಬಹುದು ಇಂತಹ ಶ್ರೇಷ್ಠ ಗುರುಗಳಾದ ಮಂಡರಗಿ ಶ್ರೀ ಜಗದ್ಗುರುಗಳನ್ನ ಪಡೆದ ನಾವೇ ದನ್ಯರು ಎಂದರು. ಈ ಸಂದರ್ಭದಲ್ಲಿ ಬೆಟಗೇರಿ ಗ್ರಾಮದ ಸಮಸ್ತ ಸದ್ಭಕ್ತರು ಮುಂಡರಗಿಯ ವಿದ್ಯಾಸಮಿಯ ಶತಮಾನೋತ್ಸವಕ್ಕೆ ಐವತ್ತೊಂದು ಸಾವಿರ ರೂಪಾಯಿ ದೇಣಿಗೆ ನೀಡಿ ಪೂಜ್ಯರಿಗೆ ಗುರುವಂದನೆ ಸಲ್ಲಿಸಿದರು.

ಬಸವರಾಜ ಬಳ್ಳೊಳ್ಳಿ, ರಮೇಶ ಹಟ್ಟಿ, ವಿರೇಶ ಸಜ್ಜನ, ಗುರುಬಸಯ್ಯ ಬೃಹನ್ಮಠ, ಸೋಮಪ್ಪ ಮತ್ತೂರು, ಪ್ರಭು ಶಿವಸಿಂಪರ, ರಾಜೇಂದ್ರಪ್ಪ ಕಡಹಳ್ಳಿ, ಮುತ್ತಯ್ಯ ಹಿರೇಮಠ, ಸೋಮಣ್ಣ ಅರಕೇರಿ, ಬಸವರಾಜ ನಾಗರೆಡ್ಡಿ, ಯಮನೂರಪ್ಪ ವಿಜಯ, ನಾರಾಯಣಪ್ಪ, ಬಾಬುಸಾಬ ಮತ್ತು ಇತರರು ಇದ್ದರು.

# ಆರೋಗ್ಯ ತಪಾಸಣೆ ಮತ್ತು ಅನಿಮಿಯಾ ತಡೆಗಟ್ಟುವ ಕಾರ್ಯಕ್ರಮ




**ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟೆ:** ಗುಜರಾತ್‌ನ ಶ್ರೀಮದ್ ರಾಯಚಂದ ಆಸ್ಪತ್ರೆ ಮತ್ತು ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಇಲಾಖೆ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಯ್.ಆರ್.ಡಿ. ಗ್ರಾಮೀಣ ಅಭಿವೃದ್ಧಿ ಸಂಸ್ಥೆ ,ಸ್ಪಂದನ ಸ್ವಯಂ ಸೇವಾ ಸಂಸ್ಥೆ, ಭಾರತೀಯ ಸುರಾಜ್ಯ ಸಂಸ್ಥೆಗಳ ಇವುಗಳ ಸಂಯುಕ್ತ ಆಶ್ರಯದಲ್ಲಿ ಆರೋಗ್ಯ ತಪಾಸಣೆ ಮತ್ತು ಅನಿಮಿಯಾ ತಡೆಗಟ್ಟುವ ಕುರಿತು ಜಾಗೃತಿ ಕಾರ್ಯಕ್ರಮ ಶುಕ್ರವಾರ ಪಟ್ಟಣದ ಎಸ್.ಕೆ ಬಾಲಕಿಯರ ಪ್ರೌಢಶಾಲೆಯಲ್ಲಿ ನಡೆಯಿತು.ಎ ಎಮ್ ಪಿ ಯೋಜನಾ ಸಂಯೋಜಕರಾದ ಶಾಂತಾ ಬೇಲಾಳ, ಸೋಮು ಸಜ್ಜನ, ಧನಪಾಲ ಬೇಡರಟ್ಟಿ, ಕುಸುಮ ಮಠ, ಶಕುಂತಲಾ ಮಠ, ಸಹನಾ ಪಾಟೀಲ ಮತ್ತು ಸಿಬ್ಬಂದಿಗಳು 191 ವಿದ್ಯಾರ್ಥಿನಿಯರ ರಕ್ತ ಪರೀಕ್ಷೆ ನಡೆಸಿ ರಕ್ತಹೀನತೆ ಕಂಡು ಬಂದ 101 ವಿದ್ಯಾರ್ಥಿನಿಯರಿಗೆ ಮೂರು ತಿಂಗಳುಗಳ ಫೋಲಿಕ್ ಎಸಿಡ್ ಮಾತ್ರೆಗಳನ್ನು ನೀಡಿ ಮತ್ತೆ ಮೂರು ತಂಗಳ ನಂತರ ಮತ್ತೆ ರಕ್ತ ಪರೀಕ್ಷೆ ನಡೆಸುವುದಾಗಿ ತಿಳಿಸಿದರು. ರಕ್ತಹೀನತೆಯಿಂದ ಹೊರಬರಲು ಸಮತೋಲನ ಆಹಾರದ ಮಹತ್ವ ತಿಳಿಸಿದರು. ಈ ವೇಳೆಯಲ್ಲಿ ಮುಖ್ಯೋಪಾಧ್ಯಾಯ ಡಾ.ಅನಿಲಕುಮಾರ ಇರಾಜ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆ ಉಳಿವಿಗಾಗಿ 3 ದಿವಸ ಉಪವಾಸ ಸತ್ಯಾಗ್ರಹ

**ಮಲ್ಲಮ್ಮ ನುಡಿ ವಾರ್ತೆ ಮಂಡ್ಯ :** ಡಿಸೆಂಬರ್ 13, 14 & 15. ಸ್ಥಳ : ಸರ್ ಎಂ ವಿಶ್ವೇಶ್ವರಯ್ಯ ಪ್ರತಿಮೆ ಎದುರು, ಬೆಂಗಳೂರು–ಮೈಸೂರು ರಸ್ತೆ, ಮಂಡ್ಯ ನಗರ.ದೇಶಕ್ಕೆ ಸ್ವತಂತ್ರ ಬಂದು ಸುಮಾರು 78 ವರ್ಷವಾದರೂ, ಸಂವಿಧಾನದಲ್ಲಿ ಆರ್ಟಿಕಲ್ 21ಎ ಅಡಿಯಲ್ಲಿ ನೀಡಲಾಗಿರುವ ಗುಣಮಟ್ಟದ ಉಚಿತ ಶಿಕ್ಷಣ ಮೂಲಭೂತ ಹಕ್ಕುಗಳನ್ನು ಸರ್ಕಾರ ಜನಸಾಮಾನ್ಯರಿಗೆ ಕೊಟ್ಟೇ ಇಲ್ಲ. ಇವತ್ತಿನ ದಿನ ಬಹುತೇಕ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ರಾಜಕಾರಣಿಗಳ ಕುಟುಂಬದವರ ಹಿಡಿತದಲ್ಲಿದೆ. ಇದರ ಜೊತೆಗೆ "ಮ್ಯಾಗ್ನೆಟ್ ಶಾಲೆಗಳು ಹಾಗೂ ಕೆಪಿಎಸ್ ಶಾಲೆಗಳು ಎಂಬ ಹೆಸರಿನಲ್ಲಿ ಸುಮಾರು 40 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿ, ಶಾಶ್ವತವಾಗಿ ಸರ್ಕಾರಿ ಶಾಲೆಗಳಿಗೆ ಬೀಗ ಹಾಕಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಪರ ದಲ್ಲಾಳಿಯಾಗಿ ಸರ್ಕಾರ ಸಮಾಜ ವಿರೋಧಿ, ಸಂವಿಧಾನ ವಿರೋಧಿ ಕೆಲಸ ಮಾಡುತ್ತಿದೆ. ಇದರ ವಿರುದ್ಧ ಜನಸಾಮಾನ್ಯರು ಬೀದಿಗಿಳಿಯುವ



ಸಮಯ ಬಂದಿದೆ.ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಸರ್ಕಾರಿ ಶಾಲೆಗಳು ಉಳಿಯಬೇಕು. ಸರ್ಕಾರಿ ಶಾಲೆಗಳೇ ಪ್ರಜಾಪ್ರಭುತ್ವದ ಆಧಾರ ಸ್ತಂಭಗಳು. ಆದ್ದರಿಂದ ರಾಜ್ಯದಲ್ಲಿ ಏಕರೂಪ ಸಮಾನ ಶಿಕ್ಷಣ ನೀತಿಯನ್ನು ಜಾರಿಗೆ ತಂದು, ಇವತ್ತಿನ ದಿನ ರಾಜಕಾರಣಿಗಳು ಹಾಗೂ ಸರ್ಕಾರಿ ನೌಕರರ ಮಕ್ಕಳಿಗೆ ಸಿಗುತ್ತಿರುವ ಗುಣಮಟ್ಟದ ಶಿಕ್ಷಣ ಬಡವರ ಮಕ್ಕಳಿಗೂ ಸಿಗಬೇಕು ಎಂಬ ಬೇಡಿಕೆಯೊಂದಿಗೆ ಮಂಡ್ಯ ಜಿಲ್ಲಾ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ಎಸ್‌ಡಿಎಂಸಿ ಸಂಘ ಮೂರು ದಿನಗಳ ಉಪವಾಸ ಸತ್ಯಾಗ್ರಹ ಕೈಗೊಂಡಿದೆ.

**ಪ್ರಮುಖ ಬೇಡಿಕೆಗಳು :**

**1. ರಾಜ್ಯದ 41,905 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲೂ ಎಲ್ಕೆಜಿಯಿಂದ 5ನೇ ತರಗತಿವರೆಗೆ ದ್ವಿಭಾಷೆಯಲ್ಲಿ ಸಿಬಿಎಸ್ಸಿ ಶಿಕ್ಷಣ ಹಾಗೂ ಮೂಲಭೂತ ಸೌಕರ್ಯ ಒದಗಿಸಬೇಕು.**

**2.ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯ್ತಿಯಲ್ಲೂ 6ನೇ ತರಗತಿಯಿಂದ 12ನೇ ತರಗತಿಯವರೆಗೆ ನವೋದಯ ಮಾದರಿ ಸಿಬಿಎಸ್ಸಿ ವಸತಿ ಶಾಲಾ ಶಿಕ್ಷಣ ನೀಡಬೇಕು.**

**3.ಕೊನೆಯದಾಗಿ ಸರ್ಕಾರಕ್ಕೆ ಯೋಗ್ಯತೆ ಇಲ್ಲವಾದರೆ ಶಿಕ್ಷಣ ಇಲಾಖೆಯ ಅನುದಾನವನ್ನು ನೇರವಾಗಿ ಪ್ರತಿಯೊಂದು ಸರ್ಕಾರಿ ಶಾಲೆಯ ಎಸ್‌ಡಿಎಂಸಿ ಖಾತೆಗೆ ವರ್ಗಹಿಸಿದರೆ, ಹಾಲಿನ ಡೈರಿ ರೀತಿ, ಎಸ್‌ಡಿಎಂಸಿಯವರೇ ಶಿಕ್ಷಕರ ನೇಮಕ ಮಾಡಿ, ಮೂಲಭೂತ ಸೌಕರ್ಯ ಒದಗಿಸಿ ಶಾಲೆಗಳನ್ನು ಮುನ್ನಡೆಸಿ, ಸರ್ಕಾರೀ ಶಾಲೆಗಳಿಗೆ ಬೀಗ ಹಾಕುವ ಕೆಲಸಕ್ಕೆ ಶಾಶ್ವತವಾಗಿ ತೆರೆ ಎಳೆಯಲಿದ್ದಾರೆ.**

ಈ ಸಂಧರ್ಭದಲ್ಲಿ ಅಶ್ವತ. ಟಿ.ಮರಿಗೌಡ ನೆರವು ಕಟ್ಟಡ ಮತ್ತು ಅಸಂಘಟಿತ ಸಂಘ ಸಂಸ್ಥಾಪಕರು ಹಾಗೂ ರಾಜ್ಯಾಧ್ಯಕ್ಷರು, ಸಂತೋಷ್ ಮಂಡ್ಯ ಗೌಡ, ಇಂಡುವಾಳ ಚಂದ್ರಶೇಖರ್, ಶಿವಳ್ಳಿ ಚಂದ್ರಶೇಖರ್, ಅನೀಲ್ ಕುಮಾರ್.ವಿ.ಎಮ್. ರೇವಣ ಮೈಸೂರ್, ಮಂಡ್ಯ ಜಿಲ್ಲಾ ರೈತರ ಸಂಘ, ಹಾಗೂ ಕರ್ನಾಟಕ ರಾಜ್ಯ ಎಸ್.ಡಿ.ಎಮ್.ಸಿ.ಸಂಘ ಪದಾಧಿಕಾರಿಗಳು ಮತ್ತು ನೆರವು ಮಂಡ್ಯ ಅಧ್ಯಕ್ಷರ ನವೀನ ಕುಮಾರ, ನೆರವು ಮಳವಳ್ಳಿ ತಾಲೂಕು ಅಧ್ಯಕ್ಷರು ವಿನೋದ ಕುಮಾರ, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷರು ಬೋರೇಗೌಡ. ಟಿ ಎಂ ಮತ್ತು ಕರ್ನಾಟಕ ತುಂಬೆಲ್ಲಾ ಇರುವ ನೆರವು ಜಿಲ್ಲಾಧ್ಯಕ್ಷರು ಹಾಗೂ ತಾಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗಿಯಾಗಿದರು.



ಹುಣಸೂರು ತಾಲೂಕಿನ ಮಾಜಿ ಶಾಸಕರಾದ. ಹಾಗೂ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರ ಮೈಸೂರು ನಿವಾಸಕ್ಕೆ ಆರೋಗ್ಯ ಸಚಿವರು ದಿನೇಶ್ ಗುಂಡೂರಾವ್ ರವರು ಭೇಟಿ ನೀಡಿ ಈ ಸಂದರ್ಭದಲ್ಲಿಅನ್ಯ ಕಾರ್ಯನಿಮಿತ್ತ ಕುಟುಂಬಸ್ಥರೊಂದಿಗೆ ಆತಿಥ್ಯವನ್ನು ಸ್ವೀಕರಿಸಿ ಉಭಯ ಕುಶಲೋಪರಿ ವಿಚಾರಿಸಿ, ಪ್ರಸ್ತುತ ದಿನಗಳ ರಾಜಕಾರಣದ ಆಗು ಹೋಗುಗಳ . ವಿಶೇಷವಾಗಿ.ಬಗ್ಗೆ ಚರ್ಚಿಸಿದರು. ನಂತರ ಆರೋಗ್ಯ ಸಚಿವರ ದಿನೇಶ್ ಗುಂಡೂರಾವ್ ರವರಿಗೆ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಹೂ ಗುಚ್ಚೆ ನೀಡಿ ಬರಮಾಡಿಕೊಂಡು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿಕಾಂಗ್ರೆಸ್ ಹಿರಿಯ ಮುಖಂಡರಾದ ಎಚ. ಪಿ ಪ್ರೇಮ್ ಕುಮಾರ್. ರತ್ನಮ್ಮ ಸುಪ್ರಿಯ ಮಂಜುನಾಥ್ ಇನ್ನಿತರ ಹಾಜರಿದ್ದರು.

## ಶಾಮನೂರು ಶಿವಶಂಕರಪ್ಪಾ ನಿಧನಕ್ಕೆ ಮಾಜಿ ಸಚಿವ ಪಾಟೀಲ ಸಂತಾಪ

**ಹುಮನಾಬಾದ್:** ಹಿರಿಯ ಸಮಾಜ ಸೇವಕ ಹಾಗೂ ಗಣ್ಯ ವ್ಯಕ್ತಿತ್ವವಾದ ಶಾಮನೂರು ಶಿವಶಂಕರಪ್ಪಾ ಅವರ ನಿಧನಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಶಾಮನೂರು ಶಿವಶಂಕರಪ್ಪಾ ಅವರು ತಮ್ಮ ಸರಳ ಜೀವನ, ಸಮಾಜಮುಖಿ ಚಿಂತನೆ ಹಾಗೂ ಜನಸೇವೆಯ ಮೂಲಕ ಎಲ್ಲರಿಗೂ ಮಾದರಿಯಾಗಿದ್ದರು. ಅವರ ನಿಧನದಿಂದ ಸಮಾಜಕ್ಕೆ ಅಪಾರ ನಷ್ಟ ಸಂಭವಿಸಿದೆ ಎಂದು ಮಾಜಿ ಸಚಿವರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

ದುಃಖದ ಈ ಸಂದರ್ಭದಲ್ಲಿ ಮೃತರ ಕುಟುಂಬದವರಿಗೆ ದೇವರು ದುಃಖವನ್ನು ಸಹಿಸುವ ಶಕ್ತಿ ನೀಡಲಿ, ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸಿದ್ದಾರೆ. ಶಾಮನೂರು ಶಿವಶಂಕರಪ್ಪಾ ಅವರ ಸೇವೆ ಸದಾ ಸ್ಮರಣೀಯವಾಗಿರುತ್ತದೆ ಎಂದು ಅವರು ಹೇಳಿದರು.

## ಎಸಿ, ಎಸ್ಟಿ ಸಮುದಾಯದ ಕುಂದು ಕೊರತೆ ಸಭೆ



**ಮುದಗಲ್:** ಸಮೀಪದ ನಾಗರಾಳ ಗ್ರಾಮದಲ್ಲಿ ಪೋಲಿಸ್ ಇಲಾಖೆವತಿಯಿಂದ ರವಿವಾರ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡದ ಕುಂದು ಕೊರತೆ ಸಭೆ ಜರುಗಿತು.

ಕುಂದು ಕೊರತೆ ಸಭೆಯಲ್ಲಿ ಪಿಎಸ್ಐ ವೆಂಕಟೇಶ ಮಾಡಗೇರಿ ಗ್ರಾಮಸ್ಥರೊಂದಿಗೆ ಮಾತನಾಡಿ, ಗ್ರಾಮದಲ್ಲಿ ಯಾವುದಾದರೂ ಸಮಸ್ಯೆ ಇದ್ದರೆ ತಿಳಿಸಬೆಕು ಸಂಭಂದ ಪಟ್ಟ ಅಧಿಕಾರಿಗಳಿಗೆ ವಿಷಯ ತಿಳಿಸಿ ಸಮಸ್ಯೆ ಪರಿಹಾರಕ್ಕಾಗಿ ಪ್ರಯತ್ನ ಮಾಡುತ್ತೇವೆ. ಯಾವುದೇ ಸಮಸ್ಯೆಗಳು ಕಂಡು ಬಂದರೆ ತಮ್ಮ ಗಮನಕ್ಕೆ ತರುತ್ತೇವೆಂದು ಗ್ರಾಮಸ್ಥರು ತಿಳಿಸಿದರು. ಈ ವೇಳೆ ಹೆಚ್ ಕೆ ಅಮರೇಶ ಹೆಚ್ ಸಿ, ಶರಣಪ್ಪ ಪಿಸಿ, ಗ್ರಾಮಸ್ಥರು ಲಕ್ಕಪ್ಪ, ಬಸ್ಸಪ್ಪ ಗೌಂಡಿ, ಸಂಗಪ್ಪ ದೇವೇಂದ್ರಪ್ಪ ಭಜಂತ್ರಿ, ಬಸ್ಸಪ್ಪ ಭಜಂತ್ರಿ, ನಾಗರಾಜ ಛಲವಾದಿ ಸೇರಿದಂತೆ ಇತರರಿದ್ದರು.

## 45ನೇ ದಿನದ ಅನಿರ್ದಿಷ್ಟ ಧರಣಿ




**ಕೊಪ್ಪಳ:** ನಗರಸಭೆ ಮುಂದೆ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನಡೆಸುತ್ತಿರುವ 45ನೇ ದಿನದ ಅನಿರ್ದಿಷ್ಟ ಧರಣಿಯನ್ನು ಜಂಟಿ ಕ್ರಿಯಾ ವೇದಿಕೆಯ ಪ್ರಮುಖರು ನಡೆಸಿದರು.

ಬಲ್ಡೋಟಾ, ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ–ಸುಮಿ, ಎಕ್ಸ್ ಇಂಡಿಯಾ ವಿಸ್ತರಣೆ ವಿರೋಧಿಸಿದ 1.5 ಲಕ್ಷ ಜನರ ಆತಂಕವನ್ನು ದೂರ ಮಾಡಲು ಮುಂದಾಗಬೇಕಾದ ಶಾಸಕರು, ಸಚಿವರು, ಮುಖ್ಯಮಂತ್ರಿಗಳ ಸಲಹೆಗಾರರು ಅಧಿವೇಶನದಲ್ಲಿ ಮೌನ ಮುರಿದು ವಿರೋಧ ಮಾಡುತ್ತಿಲ್ಲ. ಆದರೆ ಕೊಪ್ಪಳ ಮಾಧ್ಯಮ, ಹೋರಾಟಗಾರರು ಕೇಳಿದಾಗ ನಾವೇ ಮೊದಲು ವಿರೋಧಮಾಡುತ್ತೇವೆ ಎನ್ನುತ್ತಾರೆ. ಇವರ ನಿಲುವು ಅನುಮಾನಾಸ್ಪದವಾಗಿದ್ದು, ಜನರ ಆತಂಕ ಹೆಚ್ಚು ಮಾಡಿದೆ. ಆದ್ದರಿಂದ ಈ ಪ್ರತಿಭಟನೆಯನ್ನು ಬೆಳಗಾವಿ ಅಧಿವೇಶನದ ಮುಂದೆ ತೆಗೆದುಕೊಂಡು ಹೋಗುತ್ತೇವೆ. ಕೊಪ್ಪಳ ಜನ ದಿ:16.12.2025ರಂದು ಮಂಗಳವಾರ ಬೆಳಗಾವಿ ಅಧಿವೇಶನ ಚಲೋ ನಡೆಸಲು ಕರೆ ಕೊಡಲಾಗಿದೆ" ಎಂದರು. ಧರಣಿಯಲ್ಲಿ ಹಿರಿಯ ಸಾಹಿತಿ ಎಚ್.ಎಸ್.ಪಾಟೀಲ್, ಸಿ.ವಿ. ಜಡಿಯವರ, ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ.ಗೊಂಡಬಾಳ, ಡಿ.ಎಂ.ಬಡಿಗೇರ್, ಎಸ್.ಬಿ. ರಾಜೂರು, ಶಂಭುಲಿಂಗಪ್ಪ ಹರಗೇರಿ, ಬಸವರಾಜ್ ಶೀಲವಂತರ, ಮಹಾಂತೇಶ ಕೊತಬಾಳ, ತಿಮ್ಮಣ್ಣ ಭೋವಿ ಬೆಂಕಿನಗರ, ಬಿ.ಜಿ.ಕರಿಗಾರ್, ವೈ.ಬಿ.ಶಾಂತಮ್ಮ, ಜಿ.ಬಿ.ಪಾಟೀಲ್, ಮಾರುತಿ ಮ್ಯಾಳಿ ಪಾಲ್ಗೊಂಡರು.

# ಕನ್ನಡ ಸೇವೆಯೇ ಪಟ್ಟದ್ದೇವರ ಉಸಿರು

• ಮಲ್ಲಮ್ಮ ನುಡಿ ವಾರ್ತೆ ಬೀದರ್



**180ನೇ ಅನುಭವ ಮಂಟಪದಲ್ಲಿ ಮಹಾಲಿಂಗ ಸ್ವಾಮೀಜಿ ಸ್ಮರಣೆ**

ನಗರದ ಡಾ.ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯದಲ್ಲಿ ಇತ್ತೀಚೆಗೆ 180ನೇ ಅನುಭವ ಮಂಟಪ ತಿಂಗಳ ಕಾರ್ಯಕ್ರಮ ಜರುಗಿತು.ಈ ವೇಳೆ ಆಶೀರ್ವಚನ ನೀಡಿದ ಭಾಲ್ಕಿ ಹೀರೆ ಮಠ ಸಂಸ್ಥಾನದ ಮಹಾಲಿಂಗ ಸ್ವಾಮೀಜಿ,ಲಿಂ,ಡಾ.ಚನ್ನಬಸವ ಪಟ್ಟದ್ದೇವರು ದೀನ ದಲಿತರ ಕಲ್ಯಾಣಕ್ಕೋಸ್ಕರ ಸೇವೆ ಮಾಡಿದ್ದಾರೆ. ಪ್ರಕೃತಿಯ ಮೇಲೆ ಸ್ಮರಿಸಿದರು. ಆಪಾರ ಪ್ರೀತಿ ಉಳ್ಳವರಾಗಿದ್ದರು. ವಾಕ್ಯಸುದ್ದಿ ಯಿಂದ ನುಡಿದಿದ್ದು ಮಂತ್ರಗಳಾಗಿದ್ದು, ಅವರೊಬ್ಬರು ಪ್ರವಾಡ ಪುರಷರು ಎಂದು ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಜಿಲ್ಲೆಯಲ್ಲಿ ಮಹಿಳಾ ಶಾಲಾ–ಕಾಲೇಜು, ಪ್ರಸಾದ ನಿಲಯ ಪ್ರಾರಂಭಿಸಿ ಅಕ್ಷರ, ಅನ್ನ, ಆಶ್ರಯ ದಾಸೋಹ ಮಾಡುತ್ತಿದ್ದರು. ಬಸವ ತತ್ವದ ಜೊತೆಗೆ ಕನ್ನಡ ಸೇವೆ ಮಾಡುವುದೇ ಅವರ ಉಸಿರಾಗಿತ್ತು. ಮುಂದೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು 1992ರಲ್ಲಿ ಹೀರೆಮಠ ಸಂಸ್ಥಾನ ವಿದ್ಯಾಪೀಠ ಪ್ರಾರಂಭಿಸಿದ್ದಾರೆ. ಪ್ರಸ್ತುತ ಅವರ ಶಿಕ್ಷಣ ಸಂಸ್ಥೆಯಲ್ಲಿ ಸುಮಾರು 20 ಸಾವಿರ ವಿದ್ಯಾರ್ಥಿಗಳು ಪತ್ಯಕವಾದ ಜೊತೆಗೆ ಶರಣ ಸಂಸ್ಕೃತಿ, ಸಂಸ್ಕಾರ ಮತ್ತು ವಮೌಲ್ಯಯುವ ಶಿಕ್ಷಣ ಪಡೆಯುತ್ತಿದ್ದಾರೆ ಎಂದರು.

ವೈದ್ಯ ಡಾ.ನಾಗೇಶ್ ಪಾಟೀಲ್ ಅವರು ಮಾತನಾಡಿ, ಮಕ್ಕಳು ಶಿಕ್ಷಣ ಪರೀಕ್ಷೆ ಮತ್ತು ಉದ್ಯೋಗಕ್ಕೆ ಸಿಮೀತವಾಗಬಾರದು ಜೀವನದಲ್ಲಿ ಉತ್ತಮ ಗುರಿಯನ್ನಿಟ್ಟುಕೊಂಡು ನೀತಿ ಶಿಕ್ಷಣ, ಬಸವಾದಿ ಶರಣರ ಜೀವನದ ಆದರ್ಶ ಗಳನ್ನು ಮತ್ತು ಹೊಸತನ 'ವನ್ನು ಕಲಿಯುವ ಮನೋಭಾವ ಉಳ್ಳವರಾಗಬೇಕು. ಜೊತೆಗೆ ಶರಣರ ಸಂಘದಲ್ಲಿ ಜೀವನ ಕಳೆಯಬೇಕೆಂದು ತಿಳಿಸಿದರು. ಸಾಹಿತಿ ಸಿದ್ದಮ್ಮಾರವರು ಡಾ.ಚನ್ನಬಸವ ಪಟ್ಟದ್ದೇವರ ಜೀವನ ಮತ್ತು ಸಾಧನೆ ಕುರಿತು ಅನುಭಾವ ನುಡಿ ಮಂಡಿಸಿ, ಪೂಜ್ಯರು ಎಲ್ಲೆಡೆ ಕನ್ನಡ ಜ್ಯೋತಿ ಹರಡಿಸಿದ್ದಾರೆ. ಅವರು ಚಿಕ್ಕಂದಿನಿಂದಲೇ ತಂದೆ–ತಾಯಿಯನ್ನು ಕಳೆದುಕೊಂಡವರಿ ಇಗಿದ್ದರು. ಮುಧೋಳದ ಗುರುಗಳಾದ ಶಿವಲಿಂಗಪ್ಪ ಮತ್ತು ಔರಾದ್ ಗಳಂಗಳಪ್ಪಾರವರ ಹತ್ತಿರ ಶಿಕ್ಷಣವನ್ನು ಪಡೆದಿದ್ದಾರೆ. ಶಿವಯೋಗ ಮಂದಿರದಲ್ಲಿ ಆಧ್ಯಾತ್ಮಿಕ ಶಿಕ್ಷಣ ಪಡೆದಿದ್ದಾರೆ.ಡಾ.ಫ.ಗು.ಹಳ್ಳಕಟ್ಟಿ ರವರು ಇಮಗೆ ಹೇಳಿದ್ದು ಶಿಕ್ಷಣದ ಜೊತೆಗೆ ಚನ ಸಾಹಿತ್ಯ ಪ್ರಚಾರ ಮಾಡಬೇಕೆಂದಿದ್ದರು. ತ್ರಿಕಾಲ ಲಿಂಗ ಪೂಜಕರು, ತ್ರಿವಿಧ ದಾಸೋಹಿಗಳಾಗಿದ್ದರು. ಬೇರೆ ಜಾತಿಯವರನ್ನು ಕೂಡ ನಮ್ಮವರೆಂದು ಅವರಿಗೆ ಲಿಂಗ ದೀಕ್ಷೆ ಕೊಟ್ಟು ಅವರಲ್ಲಿ ಸಮಾನತೆಯನ್ನು ತಂದುಕೊಟ್ಟ ಪುರಷರಾಗಿದ್ದರು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ನಿಜಾಮನ ಆಳ್ವಿಕೆಯಲ್ಲಿ ಹೊರಗೆ ಉರ್ದು ಫಲಕ ಹಾಕಿ, ಒಳಗೆ ಕನ್ನಡ ಕಲಿಸಿದ ಕನ್ನಡದ ಕಸ್ತೂರಿ, ತವನಿಧಿ ಕನ್ನಡದ ಗುಡಿಗಳಾಗಿದ್ದರು ಎಂದು ಮಂಟಪ ಸಂಸ್ಕೃತಿ ವಿದ್ಯಾಲಯದ ವಿದ್ಯಾರ್ಥಿನಿ ಖುಷಿ ಸಂಜೀವ್ ಕುಮಾರ್ ವಚನ ಚಿಂತನೆ ನಡೆಸಿಕೊಟ್ಟರು. ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಸಂಘದವರಿಂದ ಗುರುಬಸವ ಪ್ರಾರ್ಥನೆ ನೇರವೇರಿತು. ಚನ್ನಬಸವ ನೌಬಾದೆ, ಶ್ರೀನಿವಾಸ್ ಪಾಪಡೆ ವಚನ ಗಾಯನ ನಡೆಸಿಕೊಟ್ಟರು. 46ನೇ ಶರಣ ಕಮ್ಮಟ ಉತ್ಸವದಲ್ಲಿ ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯದ ಮಕ್ಕಳಾದ ಅರ್ಪಿತಾ, ಮಾಣಿಕೇಶ್ವರಿ, ದೀಪಿಕಾ, ರಾಜಾಬಾಯಿ, ಶೃತಿ, ರಿತೀಕಾ, ನೇಹಾರವರು ಬಸವಣ್ಣನವರ ಸುಮಾರು 400 ವಚನಗಳನ್ನು ಹೇಳಿದರು.

ಈ ಸಂದರ್ಭದಲ್ಲಿ ಡಾ.ವೈ ಬಿರಾದಾರ, ನಾಗಶೆಟ್ಟಿ ಜ್ಯೋತಪ್ಪನೋರ್. ಮೀನಾಕ್ಷಿ ಪಾಟೀಲ್, ಲಕ್ಷ್ಮೀಬಾಯಿ ಮಾಳಗೆ, ತೀರ್ಥಮ್ಮ ರೆಡ್ಡಿ, ಭಾಗೀರಥಿ ಕೊಂಡಾ, ಶಕುಂತಲಾ ಮಲ್ಕಾಪುರ, ಕಸ್ತೂರಿ ಬಿರಾದಾರ, ಪ್ರೇಮಾ ಮುಚಳಂದೆ ಸವಿತಾ ಗಂಧಿಗುಡಿ, ಶರಣಪ್ಪಾ ಖೇಡ್ ಸೇರಿ ಹಲವರಿದ್ದರು.

## ಸಮಾಜ ಸೇವೆಯ ಜನಾನುರಾಗಿ ವಿಶ್ವನಾಥ್

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ



ಅಬ್ಬಿಗೆರೆ ಕಾಂಗ್ರೆಸ್ ಮುಖಂಡ ಹಾಗೂ ಸಮಾಜಸೇವಕ ಕೆ ವಿಶ್ವನಾಥ್ ರವರ ಹುಟ್ಟುಹಬ್ಬವನ್ನು ಅಬ್ಬಿಗೆರೆಯ ಶ್ರೀ ವೆಂಕಟೇಶ್ವರ ರಾಮಾಂಜನೇಯ ರಿಗೆ ಪೂಜೆ ಸಲ್ಲಿಸಿ ತದನಂತರ ದೇವಸ್ಥಾನದ ಅವರಣದಲ್ಲಿ ಬೃಹತ್ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡರು.

ಈ ವೇಳೆ ಬಿಬಿಎಂಪಿ ಮಾಜಿ ಸದಸ್ಯ ಕೆ ನಾಗಭೂಷಣ್ ಮಾತಾನಾಡಿ ಕೆ ವಿಶ್ವನಾಥ್ ಹಲವಾರು ವರ್ಷಗಳಿಂದ ಸಮಾಜಸೇವೆ ಮಾಡುತ್ತಾ ಜನಾನುರಾಗಿಯಾಗಿ ಜನರ ಕಷ್ಟ ಸುಖಗಳಲ್ಲಿ ಪಾಲ್ಗೊಂಡು ಒಬ್ಬ ಒಳ್ಳೆಯ ನಾಯಕನಾಗಿ ಗುರುತಿಸಿಕೊಂಡಿದ್ದು ಅ ದೇವರು ಅವರಿಗೆ ಉತ್ತಮ ಅರೋಗ್ಯ ಭಾಗ್ಯ, ಜನಗಳಿಗೆ ಇನ್ನಷ್ಟು ಸೇವೆ ಮಾಡುವ ಅಧಿಕಾರ ದೊರೆಯಲೆಂದು ಅವರಿಗೆ ಕೇಕ್ ತಿನ್ನಿಸಿ ಶುಭಕೋರಿದರು.

ಈ ಸಂಧರ್ಭದಲ್ಲಿ ಹಿರಿಯ ಕಾಂಗ್ರೆಸ್ ಮುಖಂಡರಾದ ರಾಜಣ್ಣ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ನಿಕಟಪೂರ್ವ ಅಧ್ಯಕ್ಷ ಜಿ ಮರಿಸ್ವಾಮಿ, ಲಾರಿ ಮಂಜುನಾಥ್, ಲಂಡನ್ ಮಂಜುನಾಥ್, ಸುಬ್ಬರೆಡ್ಡಿ, ಶಂಕರ್, ಸೂರ್ಯ ನಾರಾಯಣ್ ,ಸೇರಿದಂತೆ ಅವರ ಕುಟುಂಬ ವರ್ಗದವರು, ಹಿತೈಸಿಗಳು, ಸ್ನೇಹಿತರು , ನೂರಾರು ಅಭಿಮಾನಿಗಳು ಸೇರಿ ಹುಟ್ಟುಹಬ್ಬಕ್ಕೆ ಶುಭಾಷಯಗಳನ್ನು ಕೋರಿದರು.

## ರಾಯರೆ ನನ್ನ ಉಸಿರು: ನಟ ಜಗ್ಗೇಶ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಮಂತ್ರಾಲಯದ ಪ್ರಸ್ತುತ ಪೀಠಾಧಿಪತಿಗಳಾದ ಶ್ರೀಸುಬುಧೇಂದ್ರ ತೀರ್ಥರ ಆಶೀರ್ವಾದದೊಂದಿಗೆ ಶ್ರೀಗುರು ರಾಘವೇಂದ್ರಸ್ವಾಮಿಗಳ ದಿವ್ಯ ಚರಿತ್ರೆಯನ್ನು ವಿಶ್ವದಾದ್ಯಂತ ಹರಡುವ ಧ್ಯೇಯದೊಂದಿಗೆ "ರಾಯರ ದರ್ಶನ" ಆಲ್ಬಂ ಸಾಂಗ್ ನಿರ್ಮಾಣವಾಗುತ್ತಿದೆ.

ಇದೇ ತಿಂಗಳ 23 ರಿಂದ ಏಳು ದಿನಗಳ ಕಾಲ ಮಂತ್ರಾಲಯದಲ್ಲಿ ಶ್ರೀಗಳು ಚಿತ್ರೀಕರಣಕ್ಕಾಗಿ ಸಮಯ ನೀಡಿದ್ದಾರೆ. ರಾಯರ ಭಕ್ತರಾದ ಅನೇಕ ಸೆಲೆಬ್ರಿಟಿ ಕಲಾವಿದರು ಈ ಆಲ್ಬಂ ಸಾಂಗ್ ನಲ್ಲಿ ಅಭಿನಯಿಸಲಿದ್ದಾರೆ.ನಾಗಾರ್ಜುನಶರ್ಮ ಅವರು ಗೀತರಚನೆ ಮಾಡುತ್ತಿದ್ದು, ಹೆಸರಾಂತ ಸಂಗೀತ ನಿರ್ದೇಶಕರಾದ ಸಿ.ಆರ್ ಬಾಬಿ ಹಾಗೂ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಲಿದ್ದಾರೆ. ಫೆಬ್ರವರಿಯಲ್ಲಿ ಮಂತ್ರಾಲಯದಲ್ಲೇ ಅದ್ದೂರಿಯಾಗಿ "ರಾಯರ ದರ್ಶನ" ಆಲ್ಬಂ ಸಾಂಗ್ ಅನಾವರಣವಾಗಲಿದೆ. ಇಂದಿನ ಪತ್ರಿಕಾಗೋಷ್ಠಿಗೆ ಆಗಮಿಸಿರುವ ರಾಯರ ಪರಮಭಕ್ತರಾದ ಜಗ್ಗೇಶ್ ಅವರಿಗೆ ಹಾಗೂ ಶ್ರೀನಿಧಿ ಕರಣಂ ಅವರಿಗೆ ಧನ್ಯವಾದ ಎಂದರು ರಘು ಭಟ್.

ರಾಯರ ಕೆಲಸ ಅಂದ ಮೇಲೆ ಆಗಲ್ಲ ಎನ್ನುವ ಮಾತೇ ಇಲ್ಲ. ಏಕೆಂದರೆ ನನ್ನ ಉಸಿರೆ ರಾಯರು ಎಂದು ಭಾವುಕರಾಗಿ ಮಾತನಾಡಿರು ನಟ ಜಗ್ಗೇಶ್. ಪತ್ರಿಕಾಗೋಷ್ಠಿಯಲ್ಲಿ ಶ್ರೀನಿಧಿ ಕರಣಂ, ರಘು ಭಟ್, ಸುಗುಣ ರಘು ಹಾಗು ಗೀತರಚನೆಕಾರ ನಾಗಾರ್ಜುನ ಶರ್ಮ ಉಪಸ್ಥಿತರಿದ್ದರು.

# ಡೋಣಗಾಪೂರ: ಬಸವಜ್ಯೋತಿ ಪಾದಯಾತ್ರೆಗೆ ಸ್ವಾಗತ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಪಟ್ಟಣದಲ್ಲಿ ಡಿ.22ರಂದು ನಡೆಯಲಿರುವ ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ 136ನೆಯ ಜಯಂತ್ಯುತ್ಸವ ಸಮಾರಂಭದಲ್ಲಿ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.

ತಾಲೂಕಿನ ಡೋಣಗಾಪೂರ ಗ್ರಾಮದ ಮಹಾದೇವ ಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಬಸವಜ್ಯೋತಿ ಪಾದಯಾತ್ರೆ ಸ್ವಾಗತ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಪೂಜ್ಯರ ಜಯಂತ್ಯುತ್ಸವ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಪ್ರವಚನ, ವಿವಿಧ ಸ್ಪರ್ಧೆ, ಪ್ರಶಸ್ತಿ ಪ್ರದಾನ ಸೇರಿ ವಿವಿಧ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗುತ್ತಿದೆ. ನಾಡಿನ ಮಠಾಧೀಶರು, ರಾಜಕೀಯ ಮುಖಂಡರು, ಸಾಹಿತಿಗಳು, ಕಲಾವಿದರು ಈ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ ಎಂದರು.

12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಎಲ್ಲರನ್ನು ಸಮಾನರಾಗಿ ಕಂಡರು. ಅವರ ವಿಚಾರಧಾರೆಯನ್ನು ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ನಿಜ ಜೀವನದಲ್ಲಿ ಆಚರಣೆಗೆ ತಂದರು. ಪೂಜ್ಯರ ಕೊಡುಗೆ ಇಂದಿನ ಯುವ ಸಮೂಹ ತಿಳಿದು ಕೊಳ್ಳುವುದು ಅವಶ್ಯಕವಾಗಿದೆ ಎಂದು ತಿಳಿಸಿದರು.

ಬಸವಕಲ್ಯಾಣ ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ತಿಪ್ಪೇರುದ್ರ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ದೇವಮ್ಮ ತಾಯಿ ನೇತೃತ್ವ ವಹಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ, ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ, ಗ್ರಾಮ ಪಂಚಾಯತಿ ಅಧ್ಯಕ್ಷ ದೀಪಕ ಕಾಂಬಳೆ, ಪಿಕೆಪಿಎಸ್ ಅಧ್ಯಕ್ಷೆ ವಿದ್ಯಾವತಿ ಬಸವರಾಜ ವೀರಶೆಟ್ಟೆ, ಮಲ್ಲಿಕಾರ್ಜುನ ಉಪ್ಪಿನ್, ಬಸವರಾಜ ನಾಗಣ್ಣ ವೀರಶೆಟ್ಟೆ, ಚಂದ್ರಪ್ಪ ವೀರಶೆಟ್ಟೆ, ವಿಶ್ವನಾಥ ನಾಗಸಂಕರೆ, ವಿಶ್ವನಾಥ ಬಂಬುಳಗೆ ಸೇರಿದಂತೆ ಹಲವರು ಇದ್ದರು.

ಖೇಡ ಸಂಗಮ ಡಾ.ಚನ್ನಬಸವ ಪಟ್ಟದ್ದೇವರು ಹಿರಿಯ ಪ್ರಾಥಮಿಕ ಶಾಲೆಯ ಡೋಣಗಾಪುರ ಗ್ರಾಮದ ಮಕ್ಕಳು ವಚನ ನೃತ್ಯ ನಡೆಸಿ ಕೊಟ್ಟರು.

ಸಂಜೀವಕುಮಾರ ಮೇಂಗಾ ನಿರೂಪಿಸಿ, ವಂದಿಸಿದರು.

### ಬಸವಜ್ಯೋತಿ ಪಾದಯಾತ್ರೆಗೆ ಸ್ವಾಗತ

**ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ 136ನೆಯ ಜಯಂತ್ಯುತ್ಸವ ನಿಮಿತ್ತ ಕಮಲನಗರದಿಂದ ಕೈಗೊಂಡ ಬಸವಜ್ಯೋತಿ ಸಂದೇಶ ಪಾದಯಾತ್ರೆಗೆ ಪಟ್ಟಣದಲ್ಲಿ ಅದ್ದೂರಿಯಾಗಿ ಸ್ವಾಗತ ಕೋರಲಾಯಿತು. ಪಟ್ಟಣದ ವಿಶ್ವಗುರು ಬಸವಣ್ಣನವರ ವೃತ್ತದಲ್ಲಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ನೇತೃತ್ವದಲ್ಲಿ ಆಗಮಿಸಿದ ಬಸವಜ್ಯೋತಿ ಪಾದಯಾತ್ರೆಗೆ ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ಅವರು ಮಾಲಾರ್ಪಣೆ ಸಲ್ಲಿಸಿ ಸ್ವಾಗತಿಸಿದರು. ಪಟ್ಟದ್ದೇವರ ಜನ್ಮಭೂಮಿ ಕಮಲನಗರಿಂದ ಶುಕ್ರವಾರ ಹೊರಟ ಪಾದಯಾತ್ರೆ ಹೊಳಸಮುದ್ರ, ಆಳಂದಿ, ಡೋಣಗಾಪೂರ ಮಾರ್ಗವಾಗಿ ಶನಿವಾರ ಪಟ್ಟಣದ ಬಸವೇಶ್ವರ ವೃತ್ತಕ್ಕೆ ಆಗಮಿಸಿತು. ಈ ಸಂದರ್ಭದಲ್ಲಿ ಶಶಿಧರ ಕೋಸಂಬೆ, ಚಂದ್ರಕಾಂತ ಬಿರಾದಾರ್, ರಾಜಪ್ಪ ಪಾಟೀಲ್, ನಾಗಭೂಷಣ ಮಾಮಡಿ, ಮಲ್ಲಮ್ಮ ಆರ್ ಪಾಟೀಲ್, ಮಲ್ಲಿಕಾರ್ಜುನ ಮಣಗೀರೆ, ಬಸವರಾಜ ಮರೆ ಸೇರಿದಂತೆ ಹಲವರು ಇದ್ದರು.**

# ರೈತರ ನೆರವಿಗೆ ಸಹಕಾರಿ ಸಂಘಗಳು ಮುಂದಾಗಲಿ: ಸಜ್ಜನ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



ಸಹಕಾರಿ ಸಂಘಗಳ ಬಲವರ್ಧನೆಗೆ ಹೆಚ್ಚು ಹೆಚ್ಚು ಷೇರು ಹಣ ಸಂಗ್ರಹಿಸುವ ನಿಟ್ಟಿನಲ್ಲಿ ಆಡಳಿತ ಮಂಡಳಿ ಮುಂದಾಗಬೇಕು ಎಂದು ಕೆವೈ ಡಿಸಿಸಿ ಬ್ಯಾಂಕ್ ನಿರ್ದೇಶಕ ಸುರೇಶ ಸಜ್ಜನ ಹೇಳಿದರು.

ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಕೆಂಭಾವಿ –2 ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭ ಮತ್ತು ಕ್ಲಸ್ಟರ್ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಈ ಭಾಗದ ರೈತರಿಗೆ ಸಾಲ ಕೊಡುವಲ್ಲಿ ನಾವು ಪ್ರಮುಖ ಕಾರ್ಯ ಮಾಡಿದ್ದು. ಎರಡು ಕೋಟಿ ರೂಪಾಯಿಗಳಲ್ಲಿ 352 ರೈತರಿಗೆ ಸಾಲ ವಿತರಣೆ ಮಾಡಿ, ಪ್ರತಿವರ್ಷವೂ ಮರು ಪಾವತಿಯೊಂದಿಗೆ, 2021–22 ನೇ ಸಾಲಿನಲ್ಲಿ ಪಕ್ಷ ಬೇಧ ಮರೆತು ಎಲ್ಲಾ ರೈತರಿಗೂ ಸಾಲ ನೀಡಿದ್ದೇವೆ. ಅಪೆಕ್ಸ್ ಹಾಗೂ ನಬಾರ್ಡ್ ಬ್ಯಾಂಕ್ 800/– ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ ಎಂದವರು. ಈಗಿನ ಸರಕಾರ 12, ಎಕರೆ ಭೂಮಿ ಇದ್ದ ರೈತರಿಗೆ 5, ಲಕ್ಷ ದ ವರೆಗೆ ಬಡ್ಡಿ ರಹಿತ ಸಾಲ ನೀಡುವ ನಿರ್ಧಾರ ಶ್ಲಾಘನೀಯ ಎಂದರು.

ಯಾದಗಿರಿ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಕೆವೈಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಆರ್. ಪವನಕುಮಾರ ಉಪನ್ಯಾಸ ನೀಡಿ, ಸಹಕಾರಿ ಸಂಘಗಳ ಆಡಳಿತ ಮಂಡಳಿ ಜವಾಬ್ದಾರಿ, ಸಹಕಾರಿ ಚುನಾವಣೆ, ವಾರ್ಷಿಕ ಮಹಾಸಭೆ ಕುರಿತು ತಿಳಿಸುತ್ತಾ, ಸಹಕಾರಿ ಕಾಯ್ದೆ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಜಿಲ್ಲೆಯ ಸಹಕಾರ ಸಂಘಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಕೆವೈಡಿಸಿಸಿ ನೂತನ ಅಧ್ಯಕ್ಷ ವಿಠ್ಠಲ ವಿ ಯಾದವ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ವಿಶ್ವನಾಥರೆಡ್ಡಿ ದರ್ಶನಾಪೂರ, ಕೆವೈಡಿಸಿಸಿ ನೂತನ ನಿರ್ದೇಶಕರು, ಸುರೇಶ ಆರ್ ಸಜ್ಜನ್ ಹಾಗೂ ಬಸವರಾಜ ಎಸ್ ಪಾಟೀಲ ಜಂಗೋಳಿ. ನೂತನ ಪುರಸಭೆ ಅಧ್ಯಕ್ಷೆ ಶ್ರೀಮತಿ ಪ್ರೀಯಾ ರಾಮನಗೌಡ ಪೋಲೀಸ್ ಪಾಟೀಲ್ ಇವರನ್ನು ಅಭಿನಂದಿಸಿ ಗೌರವಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಜಿಪಂ ಅಧ್ಯಕ್ಷ ಸಿದ್ದನಗೌಡ ಪೊಲೀಸ್ ಪಾಟೀಲ ವಹಿಸಿದ್ದರು, ಪ್ರಮುಖರಾದ ಪಿಎಲ್ ಡಿ ಬ್ಯಾಂಕ್ ನಿರ್ದೇಶಕ ವಾಮನರಾವ್ ದೇಶಪಾಂಡೆ, ಕೆವೈಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಬಾಪುಗೌಡ ಪಾಟೀಲ, ಮಾಜಿ ತಾಪಂ ಸದಸ್ಯ ಖಾಜಾಪಟೇಲ್ ಕಾಚೂರು, ಸಹಕಾರಿ ಸಂಘದ ಅಧ್ಯಕ್ಷ ಮಡಿವಾಳಪ್ಪಗಡ ಪೋಲೀಸ್ ಪಾಟೀಲ್, ಉಪಾಧ್ಯಕ್ಷ ತಿಪ್ಪಣ್ಣ ಯಾಳಗಿ, ಸುರಪುರ ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಬಸವರಾಜ ಕುಂಬಾರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು ಜಿಲ್ಲಾ ಯುನಿಯನ್ ಬ್ಯಾಂಕ್ ಕಾರ್ಯದರ್ಶಿ ಸುಜಾತಾ ಮಠ ಸ್ವಾಗತಿಸಿದರು, ಡಾ ಯಂಕನಗೌಡ ಪಾಟೀಲ ನಿರೂಪಿಸಿದರು. ರಂಗಪ್ಪ ವಡ್ಡರ ವಂದಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)